# ವ್ಯಾಸರಾಯರ ಸಮಗ್ರ ರಚನೆಗಳು







## (ಇ) ಶ್ರೀಕೃಷ್ಣಲೀಲೆ

### ೧೨೧

ಅಂಗಜನ್ನಯ್ಯನು ಗೋಕುಲ ಪೋಗುವಾಗ
ಕಂಗಳ್ಹಬ್ಬದ ಉಬ್ಬಿನೇನ ಬಣ್ಣಿಪೆನಾ ಪ

ಎಳೆಗರುಗಳ ಝುಂಗುಗಳನ್ನು ಮತ್ತೆ
ಮಲೆವ ಗೂಳಿಗಳ ಗೂರಾಟವನ್ನು
ಒಲಿವಾವಿನ ಕೆಚ್ಚಲು ಸಂದಣಿಯಲ್ಲಿ
ನಲಿವ ಮರಿಗರುಗಳ ನೋಡುತಲಿ ೧

ಆಡಿಸುವ ಮೊಗ ಬದಿಗಳ ತುರಿಸುತ್ತ
ಝಾಡಿಸುವಾಕಾರ ಬೆದರು ನೋಟ
ಏಡಿಸುವ ಹುಬ್ಬಿನ ಗೋವಳರ
ಕೋಡಂಗಿ ಆಟಕ್ಕೆ ಕುಲುಕಿ ನಗುತ ೨

ಒಂದು ಹುಬ್ಬೊಂದು ಕಿವಿಯನಲಗಿಸುತ
ಮುಂದಣ ಚಂಡಿಕೆ ತಾಳದ ಗತಿಗೆ
ಚಂದದಿ ಕುಣಿಸುವ ಭೃಂಗಿ ಆಟಕೆ ಗೋಪ
ಸಂದೋಹಕೆ ಮೆಚ್ಚಿ ಬಲಗೆ ತೋರಿಸುತ ೩

ಕೆಲರು ಕೋಗಿಲೆಯಂತೆ ಕೆಲರು ನವಿಲಿನಂತೆ
ಕೆಲರು ಹಂಸದಂತೆ ಸಾರಸದಂತೆ
ಗಳರವದಿಂ ಗೋಪರು ಕೂಗೆ ಋತುಗಳು
ನಳಿನಾಕ್ಷನ ಸೇವೆಗೆ ಕೂಡಿದಂತಿರೆ ೪

ಒಂದೊಂದು ತಾಳಕ್ಕೆ ಒಂದೊಂದು ಪದಗತಿ
ಒಂದೊಂದು ರಸಕ್ಕೆ ಮತ್ತೊಂದು ಕೈಗತಿ
ಒಂದೊಂದು ಭಾವಕ್ಕೆ ಒಂದೊಂದು ನೇತ್ರವಾ
ನಂದದಿ ಗೋವರ್ಧನ ನಾಟ್ಯವಾಡೆ ೫

ಕಿನ್ನರ ಗಾನ ಗೋಪರ ಗೀತ ದೇವ
ಕನ್ಯೇರ ನಾಟ್ಯ ಗೋಪರನಾಟ್ಯ
ಚೆನ್ನಾರ ಕುಣಿಸುವ ಚಿಣ್ಣರ ಕಣ್ಣು
ಸನ್ನೆ ಝೇಂಕರಿಸುವ ಗೋಪರ ನೋಡುತ ೬

ನಾರಂದನ ವೀಣೆ ಗೋಪರ ಕಿನ್ನರಿ
ಗೀರ್ವಾಣದುಂದುಭಿ ಗೋಪರ ಮುರಜ
ಆ ರಂಭೆಯರಾಟ ಗೋಪರ ತಾಂಡವ
ಕ್ಷೀರೋದಕದಂತೆ ಕಲೆಸಿ ಬೆರೆಸಿರೆ ೭

ರಸತುಂಬಿ ತುಳುಕುವ ಕೊಳಲ ರವಂಗಳು
ಹಸುಗಳ ಕೊರಳ ಘಂಟೆಗಳ ನಿನಾದ
ಎಸೆವೆಳಗಂದಿಯ ಅಂಬಾರವಂಗಳು
ಪಸರಿಸೆ ಗೋವಳೆಯರು ಸಡಗರಿಸಿಲ

ಜಂಗುಳಿ ಗತಿಯರ ಮುಖ ಕನ್ನಡಿ ಊರೋ-
ಜಂಗಳೆ ಮಂಗಳ ಪೂರ್ಣ ಕುಂಭಗಳು
ಕಂಗಳೆ ನೀಲೋತ್ಪಲಂಗಳು ಕರಗಳೆ
ತುಂಗ ಪಲ್ಲವ ತೋರಣದಂತೆಸೆಯೆ ೯

ಚೆಂದದ ನೋಟವು ಮಂಗಳಾರತಿಯಾಗೆ
ಮಂದಹಾಸವು ಪೂಮಳೆಯಾಗೆ ಆ
ನಂದ ಪುಳಕಗಳೆ ಕೋಡಿಯಾಗೆ ಗೋಪ
ವೃಂದವಿದಿರುಗೊಳ್ಳ ಬಂದರೊಲವಿಲಿ ೧೦

ಕಂಗಳ ಕುಡಿ ನೋಟಂಗಳಿಂ ಸೆಳೆದು
ರಂಗನ ತಮ್ಮಂತರಂಗದೊಳಿಟ್ಟು
ಹಿಂಗದಾಲಂಗಿಸಿ ಸುಖಾಂಬುಧಿಯ ತ-
ರಂಗದಿ ಗೋಪಾಂಗನೆಯರು ಮುಳುಗಿ ೧೧

ಗೋಪಿಜನರು ರಂಗಗೆ ಮರುಳಾಗಿರೆ
ನೂಪುರ ಮರಕತ ಪ್ರಭೆ ಸಾರಳೆಯಾಗೆ
ಆ ಪದ್ಮರಾಗವೆ ಕೆಂಪು ಕಾರಳೆಯಾಗೆ
ಶ್ರೀಪದನಖ ಕಾಂತಿ ರಂಗವಲ್ಲಿಯಾಗೆ ೧೨

ಬೃಂದಾರಕರು ಪೂಮಳೆಗರೆಯಲು ಬೇಗ
ಬಂದಾಳಿಗಳು ಬೃಂದಾವನದಲ್ಲಿ ಮಕ
ರಂದವನುಂಡು ಸ್ವರ್ಗವ ಹಳಿದಿಳೆಗೆ
ಬಂದಳಿಂದಿರೆಯೆಂಬ ಸಂಭ್ರಮದಿಂದ ೧೩

ತುರುಗಾತಿಯರ ನೋಟದ ಬೇಟಂಗಳು
ಹರಿಮುಖೇಂದವಿನಲ್ಲಿ ಚಕೋರಗಳು
ಹರಿನಾಭಿಸರೋವರದಲ್ಲಿ ಮೀನ್ಗಳು
ಹರಿಪಾದಪದುಮದಿ ತುಂಬಿಗಳಾಗೆ ೧೪

ಇತ್ತ ಗೋವಳರಾಟಕೆ ತಲೆದೂಗುತ
ಅತ್ತ ದೇವತೆಗಳ ಸ್ತುತಿ ಕೇಳುತ್ತ
ಇತ್ತ ಗೋವಳೆಯರ ನಗಿಸುತ್ತ ನಗುತ್ತ
ಅತ್ತಿತ್ತ ಮುನಿಗಳ ಸ್ತುತಿ ಕೇಳುತ್ತ ೧೫

ಕಂಜಾಸನ ನಮಿಸಲು ಕೈಹಿಡಿದೆತ್ತಿ ಮೃ-
ತ್ಯುಂಜಯ ವಂದಿಸೆ ಬಾ ಯೆನ್ನುತ್ತ
ಅಂಜಲಿ ಪುಂಜದ ಇಂದ್ರಾದಿಗಳನ್ನು
ಕಂಜನೇತ್ರಗಳ ಸನ್ನೆಯಲಿ ಮನ್ನಿಸುತ ೧೬

ಸಿರಿ ವನಿತೆಗೆ ವನಮಾಲೆ ಉಯ್ಯಾಲೆ
ಮೊರೆವಳಿಕುಲಗಳ ರವ ಸಂಗೀತ
ವರ ಮುತ್ತಿನ ಹಾರ ಚಾಮರ ಶ್ರೀಕೃಷ್ಣ-
ನುರಮಧ್ಯವೆ ಮಂಟಪವಾಗೆಸೆಯೆ ೧೭

## ೧೨೨

ಅಂಗನೆ ನೋಡುವ ಬಾರೆ ಪ

ಹಿಂಗಿರಲಾರೆ ನಿನ್ನಾಣೆ ಕಂಗಳು ಪಡೆದ ಫಲವ ರಂಗ
ಕೊಳಲನೂದುತ ಗೋ-
ಪಾಂಗನೆಯರೆಲ್ಲ ನೆರೆದು ಸಂಗಡ ಲೋಲಾಡುತಿಪ್ಪುದ ಅ.ಪ.

ಏಣಲೋಚನೆ ಕೇಳವ್ವ ದಾನವಾಂತಕನ ಕೈಯ
ವೇಣು ಮಾಡಿದ ಸುಕೃತಫಲವ ಪ್ರಾಣದೊಲ್ಲಭೆಯರೆಲ್ಲ
ಮಾಣದೆ ಸವಿವ ಅಧರ ಪಾನವ ತಾ ಸೂರೆಗೊಂಬುದ
ತಾನು ನೆಲೆಸಿದ ವೃಕ್ಷ ಮೂಲಗ-
ಳೇನು ಸುಕೃತಮಾಡಿದವೋ ಭೂಲತಾ
ವನದಾ ಪುಣ್ಯಗಳೇನೆಂಬೆ
ನಾನು ಮಾಡಿದ ಪೂರ್ವಸಂಚಿತ
ಏನು ಒದಗಿತೊ ಕೃಷ್ಣರಾಯನ
ವೇಣು ಗೀತಾಮೃತವ ಸವಿವರೆ ೧

ಹುಲ್ಲೆಯ ಹಿಂಡುಗಳೆಲ್ಲ-ಪುಲ್ಲನಾಭನ ಕೊ
ಳಲ ಧ್ವನಿಯ ಸೊಲ್ಲನಾಲೈಸುತ ವೇಗದಿ
ಚೆಲ್ಲ ಗಂಗಳೇರಂತೆ ಕೃಷ್ಣನಲ್ಲಿ ಚಿತ್ತವೆರಗಿ ಅನ್ಯ-
ವಿಲ್ಲದಿಪ್ಪ ಸಡಗರವನ್ನು
ಪಲ್ಲವಾರುಣ ಪಾಣಿಯಿಂದ
ಮೆಲ್ಲನೆ ಮಧುರಾಗೀತವ
ಕಲ್ಲು ಕರಗುವಂತೆ ಹಾಡಲು
ಹುಲ್ಲು ಮೇಯುವ ತುರುಗಳೆಲ್ಲ

ತಲ್ಲಣದಿಂದಲಿ ಬಂದು
ವಲ್ಲಭರಂತೆ ನೋಡಲು ೨

ಅರಗಿಳಿ ಹಂಸಗಳೆಲ್ಲ ತರುಗಳ-ಕೊಂಬೆಗಳನೇರಿ
ಪರಮ ಹರುಷದಿ ಕುಳ್ಳಿರ್ದು ಕೊರಳ-ಕಲರವಗಳುಳುಹಿ
ಪರಮ ಪುರುಷನ ಧ್ಯಾನದಿಂದ ಯೋಗಿಗಳ ತೆರದಿ ಮೈಮರೆದು
ಕರಗಿ ಕಂಬನಿಗಳನೆ ಸುರಿಸುತ
ಸರಸಿಜಾಕ್ಷನ ವೇಣುಗೀತದ
ಸ್ವರಗಳನಾರೈದು ಬಾಹ್ಯವ
ತೊರೆದು ಪರಮಹಂಸರಂತೆ
ನಿರುತ ಕೃಷ್ಣನ ಪಾದಯುಗಳ
ಸರಸಿಜದ ಲೋಲ್ಯಾಡುವ ಸುಖವ

## ೧೨೩

ಅಂತರಂಗದಲಿ ಹರಿಯ ಕಾಣದವನೆ
ಹುಟ್ಟು ಕುರುಡನೋ ಪ

ಸಂತತ ಸಿರಿಕೃಷ್ಣ ಚರಿತೆ ಕೇಳದವನೆ
ಜಡಮತಿ ಕಿವುಡನೊ ಎಂದೆಂದಿಗು ಅ.ಪ.

ಹರುಷದಲಿ ನರಹರಿಯ ಪೂಜೆಯ ಮಾಡ
ದವನೆ ಕೈ ಮುರಿದವನೊ
ಕುರುವರ ಸೂತನ ಮುಂದೆ ಕೃಷ್ಣಾಯೆಂದು
ಕುಣಿಯದವನೆ ಕುಂಟನೋ
ನರಹರಿ ಚರಣೋದಕ ಧರಿಸದ ಶಿರ
ನಾಯುಂಡ ಹೆಂಚು ಕಾಣೊ
ಸುರವರ ಕೃಷ್ಣ ಪ್ರಸಾದವಿಲ್ಲದ ಊಟ
ಸೂಕರ ಭೋಜನವೋ ಎಂದೆಂದಿಗು ೧

ಅಮರೇಶ ಕೃಷ್ಣಗರ್ಪಿತವಿಲ್ಲದಾ ಕರ್ಮ
ಅಸತಿಯ ವ್ರತನೇಮವೋ
ರಮೆಯರಸಗೆ ಪ್ರೀತಿಯಿಲ್ಲದ ವಿತರಣೆ
ರಂಡೆ ಕೊರಳ ಸೂತ್ರವೊ
ಕಮಲನಾಭನ ಪಾಡಿ ಪೊಗಳದ ಸಂಗೀತ
ಗಾರ್ಧಭ ರೋದನವೊ
ಮಮತೆಯಿಂದಲಿ ಕೇಶವಗೆ ನಮಸ್ಕಾರ
ಮಾಡದವನೆ ಮೃಗವೊ, ಎಂದೆಂದಿಗು ೨

ಜರೆ ಪುಟ್ಟು ಮರಣವ ತೊಡೆವ ಸುಧೆಯ ಬಿಟ್ಟು
ಸುರೆಯ ಸೇವಿಸಬೇಡವೊ
ಸುರಧೇನುವಿರಲಾಗಿ ಸೂಕರ ಮೊಲೆಹಾಲು
ಕರೆದು ಕುಡಿಯಬೇಡವೊ
ಕರಿರಥಾ ತುರಗವಿರಲು ಬಿಟ್ಟು ಕೆಡಹುವ
ಕತ್ತೆಯೇರಲಿಬೇಡವೊ
ಪರಮ ಪದವನೀವ ಸಿರಿಕೃಷ್ಣನಿರಲಾಗಿ
ನರರ ಸೇವಿಸಬೇಡವೊ, ಎಂದೆಂದಿಗು ೩

### ೨. ಆತ್ಮ ನಿವೇದನೆ

೧೭೯

ಅಪರಾಧವೆನ್ನದೈಯ ಹೇ ಜೀಯ
ಅಪರಾಧವೆನ್ನದೈಯ ಅಪರಿಮಿತವೆ ಸರಿ ಪ

ಕೃಪೆ ಮಾಡೊದಿಲ್ಲವೆ ಕೃಪಣವತ್ಸಲ ಕೃಷ್ಣ ಅ.ಪ

ಹುಡುಗರು ಮಾಡುವ ತಪ್ಪಿಗೆ ಜನನಿ ತಾ
ಬಿಡುವಳೆ ಅದರಿಂದ ಕೃಪೆಯ ಮಾಡದಲೆ
ನಡೆವ ಕುದುರೆ ತಾನು ಎಡಹಿದರೆ ಸ್ವಾಮಿ
ಕಡೆಗೆ ಕಟ್ಟುವನೇನೊ ತಿರುಗಿ ನೋಡದಲೆ ೧

ಮಾಡು ಎಂದದ್ದನು ಬಿಟ್ಟರೆ ಅಪರಾಧ
ಬೇಡವೆಂದನು ಮಾಡುವುದಪರಾಧ
ಈಡಿಲ್ಲ ನಿನ್ನ ದಯ ಬೇಡುವೆನೋ ನಿನಗೆ
ಮಾಡುವೆ ಬಿನ್ನಹ ನಾಚಿಕೆಯಿಲ್ಲದಲೆ ೨

ಬೇಡಿಕೊಂಬೆನೊ ವಾಸುದೇವ ಶ್ರೀಹರಿಯೆ
ನೋಡದಿದ್ದರೆ ಭಕುತ ಜನರು ತಮ್ಮ
ಬೀಡ ಸೇರಿಸರೆನ್ನ ಕೇಡೇನೊ ಇದಕಿಂತ
ನೋಡೊ ನೀ ದಯದಿಂದ ಭಕುತವತ್ಸಲ ಕೃಷ್ಣ ೩

### (ಈ) ಅವತಾರತ್ರಯ – ಶ್ರೀ ಮಧ್ವಚಾರ್ಯರ ಸ್ತುತಿಪರ ಕೀರ್ತನೆ

೧೫೫

ಆರು ನಿನಗಿದಿರಧಿಕ ಧಾರುಣಿಯೊಳಗೆ ಪ

ಸಾರ ಶಾಸ್ತ್ರವನೊರೆದ ಸರ್ವಜ್ಞ ಮುನಿರಾಯ ಅ.ಪ.

ಆರೊಂದು ವೈರಿಗಳ ತರಿದು ವೈಷ್ಣವರಿಗೆ
ಆರೆರಡು ಊರ್ಧ್ವ ಪುಂಡ್ರಗಳ ಇಡಿಸಿ
ಆರು ಮೂರರಮೇಲೆ ಮೂರಧಿಕ ಕುಮತಗಳ
ಬೇರೊರಸಿ ಕಿತ್ತೊಮ್ಮೆ ಬಿಸುಟಂಥ ಧೀರ ೧

ಆರು ನಾಲ್ಕು ತತ್ವದಭಿಮಾನಿಗಳಿಗೊಡೆಯ
ಮಾರುತನ ಮೂರನೆಯ ಅವತಾರನೆ
ಆರೈದು ಮೇಲೆರಡು ಅಧಿಕ ಲಕ್ಷಣವುಳ್ಳ
ಮೂರುತಿಯೊಳೊಪ್ಪುತಿಹ ಮುನಿವರೇಣ್ಯ ೨

ಆರಾರು ಮೇಲೊಂದು ಅಧಿಕ ಲೆಖ್ಖದ ಗ್ರಂಥ
ಸಾರವನು ರಚಿಸಿ ಸಜ್ಜನರಿಗಿತ್ತು
ಪಾರಮಾರ್ಥಿಕ ಭೇದ ಪಂಚಕ ಸ್ಥಾಪಿಸಿದೆ ಉ-
ದಾರ ಶ್ರೀಕೃಷ್ಣನ ದಾಸರೊಳು ದೊರೆಯೆ ೩

೧೮೧

ಆವಾವ ಬಗೆಯಿಂದ ನೀನೆ ರಕ್ಷಿಸುವೆಯೊ
ದೇವಾದಿ ದೇವ ಶ್ರೀಕೃಷ್ಣ ನೀನೆನ್ನನು ಪ

ಹಿಂದಿನ ಕಾಲವ ವ್ಯರ್ಥವಾಗಿ ಕಳೆದೆನೊ
ಮುಂದಿನ ಗತಿ ಚಿಂತೆ ಲೇಶವಿಲ್ಲವೊ
ಸಂದು ಹೋಯಿತು ದೇಹದೊಳಗಿನ ಬಲವೆಲ್ಲ
ಮಂದವಾದವು ಇಂದ್ರಿಯ ಗತಿಗಳೆಲ್ಲ ೧

ಆಸೆಯೆಂಬುದು ಅಜನ ಲೋಕಕ್ಕೆ ಮುಟ್ಟುತಿದೆ
ಕಾಸು ಹೋದರೆ ಕ್ಲೇಶವಾಗುತ್ತಿದೆ
ಮೋಸಮಾಡಿ ಮೃತ್ಯು ಬರುವುದ ನಾನರಿಯೆ
ವಾಸುದೇವನೆ ಎನ್ನ ದಯಮಾಡಿ ಸಲಹೊ ೨

ಜನರು ದೇಹವ ಬಿಟ್ಟು ಪೋಪುದ ನಾ ಕಂಡು
ಎನ್ನ ದೇಹ ಸ್ಥಿರವೆಂದು ತಿಳಿದುಕೊಂಡು
ದಾನ ಧರ್ಮ ಮೊದಲಾದ ಹರಿಯ ನೇಮವ ಬಿಟ್ಟು
ಹೀನ ವಿಷಯಂಗಳಿಗೆರಗುವೆ ಸಿರಿಕೃಷ್ಣ ೩

### (ಆ) ಶ್ರೀಹರಿಯ ಗುಣಗಾನ

೧೦೧

ಇದು ಬಲು ಸುಖಕಾಣೆ ಕೇಳಿದಕೆಣೆಗಾಣೆ ಪ

ಒದಗಿ ಬರುವ ಮೃತ್ಯುವ ಪರಿಹರಿಸುವ

ಪದುಮನಾಭನ ಪದಪದುಮಕ್ಕೆರಗುವ ಅ.ಪ

ಚಂಚಲ ಸಿರಿಗಾಗಿ ಲೋಕ ಪ್ರ-
ಪಂಚಕೆ ಬೆರಗಾಗಿ
ಸಂಚಿತ ಕರ್ಮವ ಕಳೆಯದೆ ಕಾರ್ಯವು
ಮಿಂಚಿದ ಬಳಿಕಾಯಾಸಕ್ಕಿಂತಲು ೧

ಚಿಂತೆಯೆಲ್ಲವ ಕಳೆದು ಮನದಿ ನಿ-
ಶ್ಚಿಂತೆಯಾಗಿ ನಲಿದು
ಅಂತರಂಗದಿ ಲಕ್ಷ್ಮೀಕಾಂತನ ತುತಿಸುತ
ಸಂತೋಷ ಶರಧಿಯಳೋಲ್ಯಾಡುವುದು ೨

ಶರಣ ಜನರ ಪೊರೆವ, ದ್ವಾರಕಾ-
ಪುರವರದಲಿ ತಾನಿರುತಿರುವ
ಪರಮ ಪುರುಷ ನಮ್ಮ ಸಿರಿಕೃಷ್ಣರಾಯನ
ಮುರಳಿಧರನ ಸೇವಿಸಿ ಸುಖಿಯಾಗುವ.

## ೧೫೬

ಈತನೀಗ ವಾತಜಾತನು ತನ್ನ ಪ

ತಾತಗಾಗಿ ದನುಜಕುಲವ
ಘಾತಿಸಿದ ವನೌಕಸಾರ್ಯ ಅ.ಪ.

ಅಂಬುಧಿಯ ಲಂಘಿಸಿ ಭರದಿ
ಲಂಬ ಶಿಖರದಲ್ಲಿ ಧುಮುಕಿ
ಸಂಭ್ರಮದಿಂದ ಲಂಕೆಗೆ ಪೋಗಿ
ಅಂಬುಜಾಕ್ಷಿಯನರಸಿದಾತ ೧

ಧರಣಿಸುತೆಯ ಚರಣಕೆರಗಿ
ಕರುಣಿ ರಾಮನುಂಗುರವಿತ್ತು
ಕರದಿ ದಾನವರನು ಸವರಿ
ಶರಧಿಯನುತ್ತರಿಸಿದಾತ ೨

ಕಡಲ ತಡಿಯೊಳಿರ್ದ ಕಪಿಗ-
ಳೊಡನೆ ರಾಮನಂಘ್ರಿಗೆರಗಿ
ಮಡದಿ ಚೂಡಾರತುನವಿತ್ತು
ಕಡು ಕೃತಾರ್ಥನೆನಿಸಿಕೊಂಡ ೩

ದುರುಳ ಕೌರವನನುಜನುರವ
ಕರದಿ ಸೀಳಿ ರಕ್ತವ ಸುರಿದು

ನರಸಿಂಹನಿಗೆ ಅರ್ಪಿಸಿದ
ಧರೆಗೆ ಭೀಮನೆನಿಸಿದಾತ ೪

ಇಳೆಯೊಳಿದ್ದ ಮಧ್ಯಗೇಹನ
ಕುಲದಿ ಜನಿಸಿ ಶುದ್ಧವಾದ
ನಳಿನನಾಭನ ಒಲುಮೆಯಿಂದ
ಮಲಿನರನ್ನು ಅಳಿದ ಧೀರ ೫

ಇಪ್ಪತ್ತೊಂದು ಕುಮತಗಳನು
ಒಪ್ಪದಿಂದ ಗೆಲಿದು ಭಕ್ತ
ಕಲ್ಪವೃಕ್ಷನೆನಿಸಿ ಮೆರೆದ
ಸರ್ಪಶಯನನ ನಿಜವ ತೋರ್ದ ೬

ಧರಣಿ ಮಂಡಲದೊಳಗೆ ಭೂಮಿ
ಸುರರ ಗಣಕೆ ಶಾಸ್ತ್ರಾಮೃತವ
ಎರೆದು ಕೃಷ್ಣನ ಇರವ ತೋರಿ
ವರ ಬದರಿಯೊಳ್ ನಿಂದ ಧೀರ ೭

## ೧೮೨

ಉಕ್ಕುವ ತುಪ್ಪಕೆ ಕೈಯಿಕ್ಕುವೆ ನಾನು ಪ

ಚಕ್ರಧರ ಪರಮಾತ್ಮನೊಬ್ಬನಲ್ಲದಿಲ್ಲವೆಂದು ಅ.ಪ

ಪೊರೆಯೊ ಪರದೈವವೆಂದು ಕರಿ ಮೊರೆಯಿಡಲು ಕಂಡು
ನೆರೆದ ಬೃಂದಾರಕರು ಅಂದು ಪೊರೆದರೆ ಬಂದು
ಕರದಲೊಪ್ಪುವ ಮುತ್ತಿಗೆ ಕನ್ನಡಿಯ ನೋಡಲೇಕೆ
ಭರದಿ ಗಜೇಂದ್ರನ್ನ ಕಾಯ್ದ ಹರಿಯೆ ಪರದೈವವೆಂದು ೧

ಮತಾಂತರದಲ್ಲಿ ಭಗವದ್ಗೀತೆಯನದ್ವೈತವೆಂದು
ವಾತಗುದ್ಧಿ ಕೈಗಳೆರಡು ನೋಯಿಸಲೇಕೆ
'ಏತತ್ಸರ್ವಾಣಿ ಭೂತಾನ್ಯೆಂ'ಬ ಶೃತ್ಯರ್ಥವ ತಿಳಿದು
ಜ್ಯೋತಿರ್ಮಯ ಕಿರೀಟಿ ಅಚ್ಯುತಾಂತರ್ಯಾಮಿಯೆಂದು ೨

ತಾನೆ ಪರಬ್ರಹ್ಮನೆಂಬ ಮನುಷ್ಯಾಧಮನು ತಾನು
ಜ್ಞಾನಹೀನನಾಗೆ ಲೋಕದಾನವನೆಂದು
ಭಾನು ಕೋಟಿ ತೇಜೋತ್ತಮ ವರದ ಶ್ರೀಹರಿಯೆಂಬ
ಜ್ಞಾನವೆ ಕೈವಲ್ಯದ ಸೋಪಾನವೆಂದು ಸಭೆಯಲ್ಲಿ ೩

ತಪ್ಪಾದ ವಿಚಾರದಿಂದ ತತ್ತರವ ಪಡಲೇಕೆ
ತಪ್ಪು ಶಾಸ್ತ್ರ ವೋದಿ ದೇಹ ದಂಡಿಸಲೇಕೆ

ಕಲ್ಪ ಕಲ್ಪಾಂತರದಲ್ಲಿ ವಟಪತ್ರಶಯನನಾಗಿ
ಮುಪ್ಪು ಮೊದಲಿಲ್ಲದ ಮುಕುಂದನಲ್ಲದಿಲ್ಲವೆಂದು ೪

ಶಕ್ತಿ ಶೂನ್ಯನಿವನೆಂದು ಸಂಶಯವ ಪಡಲೇಕೆ
ಕೃತ್ಯದಿಂದ ನೋಡೆ ಶ್ರೀಕೃಷ್ಣನೊಬ್ಬನೆ
ಹತ್ತಾರು ಸಾಸಿರ ನೂರು ಗೋಪಸ್ತ್ರೀಯರನ್ನು ಆಳಿ
ನಿತ್ಯ ಬ್ರಹ್ಮಚಾರಿಯೆನಿಪ ನಿಷ್ಕಳಂಕನೊಬ್ಬನೆಂದು ೫

## ೧೫೭

ಎಂತು ಪೊಗಳಲೊ ನಿನ್ನ-ಯತಿಕುಲ ಶಿರೋರನ್ನ ಪ

ಶಾಂತ ಮಧ್ವಾಚಾರ್ಯ ಸಂತ ಕುಲವರ್ಯ ಅ.ಪ.

ಪ್ರಥಮಾವತಾರದಲಿ ವ್ರತತಿ ರಾಮನ ಭಜಿಸಿ
ಅತಿ ಪಂಥದಿಂದ ಶರಧಿಯನು ದಾಟಿ
ಕ್ಷಿತಿಜೆಗಂಕಿತವಿತ್ತು ಪೂದೋಟವನು ಕಿತ್ತೆ
ಪ್ರತಿಗಾಣೆ ನಿನಗೆ ಅಪ್ರತಿ ಪರಾಕ್ರಮಿಯೆ ೧

ದ್ವಿತಿಯಾವತಾರದಲಿ ದೇವಕೀಜನ ಕಂಡು
ಸತಿಗೆ ಕಾಮಿಸಿದವನ ಸಾಹಸದಿ ಸದೆದೆ
ಪ್ರತಿಯಾದ ಮಾಗಧನಪೃತನದಲಿ ನೀ ಕೊಂದೆ
ಪ್ರತಿಯ ಕಾಣೆನೊ ನಿನಗೆ ಮೂಜ್ಜಗದೊಳಗೆ೨

ತೃತಿಯಾವತಾರದಲಿ ತ್ರಿಜಗನುತಿಸಲು ಬಂದು
ಯತಿಯಾಗಿ ಮಹಾಮಹಿಮನನು ಭಜಿಸಿದೆ
ಕ್ಷಿತಿಗಧಿಕ ಉಡುಪಿಯಲಿ ಕೃಷ್ಣನ್ನ ನಿಲಿಸಿ ಪ್ರತಿ
ಮತಮತವ ಮುರಿದೆ ಪೂರ್ಣಪ್ರಜ್ಞ ಮುನಿವರನೆ ೩

## ೧೦೨

ಎಂಥಾದ್ದೊ ಹರಿಯ ಕರುಣ ಪ

ಎಂಥಾದ್ದೊ ಹರಿಯ ಮಹಿಮೆ
ಎಂಥಾದ್ದೆನ್ನ ಬಾರದು ಗಡಅ.ಪ

ಅಂತ್ಯವಿಲ್ಲದ ನಿಜಾನಂದ ತೃಪ್ತನು ಗಡ
ಸಂತರೊಕ್ಕುಡಿತೆಯ ಜಲಕೆ ಹಿಗ್ಗುವ ಗಡ ೧

ಸನಕಾದಿ ಮುನಿಮನಕೆ ಸಿಲುಕದಗಮ್ಯನು ಗಡ
ನೆನೆವರ ಮನದಣಿಯೆ ತನ್ನ ತೋರುವ ಗಡ ೨

ಶ್ರುತಿತತಿಗೆ ಮೈದೋರದತಿ ಮಹಿಮನು ಗಡ
ಮತಿಯುಳ್ಳವನ ಭಕ್ತಿ ಸ್ತುತಿಗೆ ಹಿಗ್ಗುವ ಗಡ ೩

ಲೋಕ ಪತಿಗಳಿಗೆಲ್ಲ ಒಡೆಯ ತಾನೆ ಗಡ
ಬಾಕುಳಿಕನಾಗಿ ಭಕುತರ ವಶದಲ್ಲಿಪ್ಪ ಗಡ ೪

ಆರರೊಳು ಸಡ್ಡೆಯಿಲ್ಲದ ನಿಸ್ಸಂಗನು ಗಡ
ಸಾರಿದವರಿಗೆ ತಂದೆತಾಯಿ ಸಿರಿಕೃಷ್ಣ ಗಡ ೫

## ೧೨೫

ಎಂದ ಮಾತು ಚಂದವಾಯಿತಿಂದು ಗೋಪಿ-ಮುನಿ-
ಸಿಂದ ನಮ್ಮನಾಡಲೇಕೆ ನಂದಗೋಪಿ ಪ

ಭಂಟ ನಂಟರನ್ನು ಮಾತಿನಿಂದ ಹೋಗಿ-ಬರಿ
ಕಂಟಕದ ನುಡಿಗಳಿನ್ಯಾಕೆ ಗೋಪಿ ೧

ಕರಿಯ ಭಂಟ ಕಳ್ಳ ಕೃಷ್ಣ ಕಾಣೆ ಗೋಪಿ- ಹತ್ತಿ
ಲಿರುವ ಹರಿಯು ಬಲು ತುಂಟ ಕಾಣೆ ಗೋಪಿ ೨

ಹರವಿ ಹಾಲ ಬರಿದು ಮಾಡಿ ಬಂದ ಗೋಪಿ-ಎನ್ನ
ಸೆರಗ ಪಿಡಿದು ಬಿಡೆನೆಂದ ಕಾಣೆ ಗೋಪಿ ೩

ಅಪರಿಮಿತದಾಟಗಾರನಿವ ಗೋಪಿ-ಕೃಷ್ಣ
ಕಪಟನಾಟಕ ಸೂತ್ರಧಾರ ಗೋಪಿ ೪

ತಿರುಪತಿಯ ತಿಮ್ಮರಾಯನಿವ ಗೋಪಿ-ಗೊಲ್ಲ
ಗರತಿಯರ ಕಂಡರೆ ಸುಪ್ರೀತ ಗೋಪಿ ೫

ಶರಣ ಜನರ ಸಿದ್ಧಿ ಕೊಡುವ ದಾತ ಗೋಪಿ-ನಾವು
ಪುರದೊಳಿರುವ ತೆರನ ಮಾಣೆ ಜಾಣೆ ಗೋಪಿ ೬

ನಿಪುಣ ಬೆಣ್ಣೆ ಕಳ್ಳ ನಿನ್ನ ಮಗನೆ ಗೋಪಿ-ನಮ್ಮ
ತಪಸಿಗೊಲಿದು ಜನಿಸಿದ ಶ್ರೀಕೃಷ್ಣ ಗೋಪಿ ೭

೧೨೬

ಎಂದಿಗಾದರು ಒಮ್ಮೆ ಕೊಡು ಕಂಡ್ಯ ಹರಿಯೆ ಪ

ಬೃಂದಾವನಪತಿ ದಯದಿಂದಲೆನಗೆ ಅ

ಫಲಭಾರಗಳಿಂದ ತಲೆವಾಗಿ ಶುಕಪಿಕ
ಕಲಕಲದೊಳು ನಿನ್ನ ತುತಿಸಿ ತುಂಬೆಗಳ
ಗಳರವದಿಂ ಪಾಡಿ ಅಪ್ಸ ರರಂತೆ ಪೂ-
ಮಳೆಯಗರೆವ ತರುಲತೆಯ ಜನ್ಮವನು ೧

ಕೊಳಲ ಶೃತಿಯ ಕೇಳಿ ಸುಖದ ಸಂಭ್ರಮದಲಿ
ಹೊಲಬು ತಪ್ಪಿ ತಾವು ಅರೆಗಣ್ಣು ಮುಚ್ಚಿ
ನಳಿನಾಸನದಿ ಮೌನಗೊಂಡು ಪರಮ ಹಂಸ
ಕುಲದಂತೆ ಧ್ಯಾನಿಪ ಹಂಸ ಜನ್ಮವನು ೨

ನಖಗಳೆಂಬ ಸಂತತ ಪೂರ್ಣಚಂದ್ರನ್ನ
ಅಕಳಂಕ ನವ ಚಂದ್ರಿಕೆಯನ್ನು ಸವಿದು
ಸುಖದ ಸುಗ್ಗಿಗಳಲ್ಲಿ ಸೊಕ್ಕಿ ಯೋಗಿಗಳಂತೆ
ಅಖಿಳವ ಮರೆದ ಚಕೋರ ಜನ್ಮವನು ೩

ಭಾವಜನ್ಯೆಯನ ಕಡುಚಲ್ವಿಕೆಯನ್ನು
ಭಾವಿಸಿ ನಿಡುಗಂಗಳಿಂದ ದಣಿದುಂಡು
ಗೋವಳೇರಂತೆ ಮನೆ ಮಕ್ಕಳ ಹಿಂಗಿ ನಿನ್ನ
ಆವಾಗ ಈಕ್ಷಿಸುವ ಗೋವ್ಗಳ ಜನ್ಮವನ್ನು ೪

ತೋಳದಂಡಿಗೆಮಾಡಿ ಹೀಲಿಯ ಚಾಮರವ
ಮೇಲೆ ಎತ್ತಿದ ತಾವರೆ ಗೊಂಡೆಯಿಂದ
ಓಲೈಸಿ ನಿನ್ನನು ಒಲಿಸಿ ಮುಕುತರಂತೆ
ನಾಲೋಕ್ಯ ಸುಖವುಂಬ ಗೋಪರ ಜನ್ಮವನು ೫

ಕೊಳಲ ಧ್ವನಿಯ ಕೇಳಿ ಎದುರುಗೊಳ್ಳುತ ನಿನ್ನ
ನಳಿನನಾಭಾ ಅವಧಾರೆಂದು ಪೊಗಳೇ
ತಳಿಗೆ ಆರತಿಯೆತ್ತಿ ಲಕ್ಷ್ಮಿಯಂತೆ ನಿನ್ನ
ಚೆಲುವ ಸವಿವಂಥ ಗೋಪೇರ ಜನ್ಮವನು ೬

ಇಂದಿರೆಯರಸ ಬ್ರಹ್ಮೇಂದ್ರಾದಿ ವಂದಿತ
ಎಂದು ಮೊಸರ ಕಡೆಯುತ್ತಲಿ ನಿನ್ನ
ಅಂದಿನ ಶ್ರುತಿಯೋ ಉಪ್ಪವಡಿಪ ವ್ರಜ-
ದಿಂದುಮುಖಿಯರ ಜನ್ಮವ ಸಿರಿಕೃಷ್ಣ ೭

೧೮೩

ಎಂದೆಂದೆನ್ನ ಮನದಿಂದ ಅಗಲದಿರೋ
ನಂದ ನಂದನನೆ ಆನಂದ ಮೂರುತಿಯೆ ಪ

ಬಹುಕಾಲ ನಿನ್ನ ಶ್ರವಣವೆಂಬ ಹೊನ್ನೋಲೆಯ
ಬಹುಮಾನದಿಂದೆನ್ನ ಕಿವಿಯೊಳಿಟ್ಟು
ಮಹಿತ ಮಂಗಳಸೂತ್ರವೆಂಬೊ ದಾಸ್ಯವನ್ನು
ಮಹದಾನಂದದಿ ಎನ್ನ ಕೊರಳೊಳ್ ಕಟ್ಟಿದೆಯಾಗಿ ೧

ಸುಲಲಿತ ಸೈರಣೆಯೆಂಬ ಭೂಷಣವಿತ್ತು
ಸಲಹಿದೆ ಬಹು ಪ್ರೀತಿ ಸಖಿಯೆಂದೆನ್ನ
ಬೆಲೆಯಿಲ್ಲದ ಸುಜ್ಞಾನ ನಿಧಿಯನಿತ್ತು
ಜಲಜಾಕ್ಷ ಎನ್ನನು ಒಲಿದು ಆಳಿದೆಯಾಗಿ ೨

ಎಲ್ಲಿ ನೀ ನಿಲಿಸಿದರೆನಗೇನು ಭಯವಿಲ್ಲ
ಬಲ್ಲೆನೊ ವಿಶ್ವವ್ಯಾಪಕನೆಂಬುದ
ಸಲ್ಲದೊ ಈ ಮುನಿಸೆನ್ನೊಳು ಸಿರಿಕೃಷ್ಣ
ಒಲ್ಲದಿದ್ದರೆ ನಿನ್ನ ಸೆರಗಪಿಡಿದೆಳೆವೆ ೩

## (ಊ) ಯತಿವರರು

### ೧೬೮

### ಶ್ರೀ ಜಯತೀರ್ಥರು

ಎದುರಾರೊ ಗುರುವೆ ಸಮರಾರೊ ಪ

ಮದನ ಗೋಪಾಲನ ಪ್ರಿಯ ಜಯರಾಯ ಅ.ಪ

ಕಡು ಗರ್ಜಿಸುವ ಕೇಸರಿಯಂತೆ ನಿಮ್ಮ ವಾದ
ಗಡಣೆಯ ಕೇಳುತ ನುಡಿ ಮುಂದೋಡದೆ
ಗಡಗಡ ನಡುಗುತ ಮಾಯ್ಗೋ ಮಾಯ್ಗಳು
ಅಡವಿಯೋಳಡ''ಗೋರು ನಿಮ್ಮ ಭೀತಿಯಲಿ ೧

ಕುಟಿಲ ಮತಗಳೆಂಬೊ ಚಟುಲಂಧಕಾರಕ್ಕೆ
ಪಟುತರ ತತ್ವ ಪ್ರಕಾಶಿಕೆಂತೆಂಬ
ಚಟುಲಾ ತಪದಿಂದ ಖಂಡಿಸಿ ತೇಜೋ-
ತ್ಕಟದಿ ಮೆರೆದೆ ಬುಧಕಟಕಾಬ್ಜ ಮಿತ್ರ ೨

ಅಮಿತ ದ್ವಿಜಾವಳಿ ಕುಮುದಗಳರಳಿಸಿ
ವಿಮತರ ಮುಖ ಕಮಲಂಗಳ ಬಾಡಿಸಿ

ಸ್ವಮತರ ಹೃತ್ಸಂತಾಪಗಳೋಡಿಸಿ
ವಿಮಲ ಸುಕೀರ್ತಿಯ ಪಡೆದೆಯೊ ಚಂದ್ರ ೩

ವೇದ ಶಾಸ್ತ್ರಗಳೆಂಬೊ ಶೃಂಗಗಳಿಂದ ಸು-
ಧಾದಿ ಗ್ರಂಥಗಳೆಂಬೊ ಸ್ತನದಿಂದೊಪ್ಪುತ ತತ್ವ
ಬೋಧನೆಯೆಂಬ ದುಗ್ಧ ಶಿಷ್ಯವತ್ಸಂಗಳಿಗೆ
ಆದರದಲಿ ಕೊಟ್ಟ ಯತಿಸುರಧೇನು ೪

ವ್ಯಾಸ ಸೂತ್ರಗಳೆಂಬ ಮಂದರವನು ವೇದ
ರಾಸಿಯೆಂಬ ವಾರಾಶಿಯೊಳಿಟ್ಟು
ಶ್ರೀ ಸರ್ವಜ್ಞರ ವಾಕ್ಯ ಪಾಶದಿ ಸುತ್ತಿ
ಭಾಸುರ ನ್ಯಾಯಸುಧಾ ಪಡೆದೆ ಯತೀಂದ್ರ ೫

ವನಜನಾಭನ ಗುಣಮಣಿಗಳು ಸರ್ವಜ್ಞ
ಮುನಿಕೃತ ಗ್ರಂಥಗಳವನಿಯೊಳಡಗಿರೆ ಸ-
ಜ್ಜನರಿಗೆ ಟೀಕಾಂಜನದಿಂದ ತೋರಿಸಿ
ಘನ ಸುಖಸಾಧನ ಮಾಡಿದ್ಯೊ ಧೀರ ೬

ಅರ್ಥಿಮಂದಾರ ವೇದಾರ್ಥ ವಿಚಾರ ಸ-
ಮರ್ಥ ಶ್ರೀಕೃಷ್ಣ ಪಾದಾಂಬುಜಲೋಲ ಪ್ರ-
ತ್ಯರ್ಥಿ ಮತ್ತೇಭಕಂಠೀರವಕ್ಷೋಭ್ಯ-
ತೀರ್ಥಕರ ಜಾತ ಜಯತೀರ್ಥ ಯತೀಂದ್ರ ೭

೧೮೪

ಎನ್ನ ಬಿಂಬಮೂರುತಿಯ ಪೂಜಿಪೆ ನಾನು
ಮನಮುಟ್ಟಿ ಅನುದಿನ ಮರೆಯದೆ ಮರೆಯದೆ ಪ

ಗಾತ್ರವೆ ಮಂದಿರ ಹೃದಯವೆ ಮಂಟಪ
ನೇತ್ರವೆ ಮಹದೀಪ ಹಸ್ತ ಚಾಮರವು
ಯಾತ್ರೆ ಪ್ರದಕ್ಷಿಣೆ ಶಯನ ನಮಸ್ಕಾರ
ಶಾಸ್ತ್ರ ಮಾತುಗಳೆಲ್ಲ ಮಂತ್ರಂಗಳು ೧

ನುಡಿವ ಶಬ್ದಗಳೆಲ್ಲ ಹೂವುಗಳಾಯಿತು
ನಡೆವುದೆಲ್ಲವು ಬಹು ನಾಟ್ಯಂಗಳು
ಉಡುವ ಹೊದಿಕೆಯೆಲ್ಲ ಉಚಿತವಾದ ವಸ್ತ್ರ
ಕೊಡುವ ಭೂಷಣವೆಲ್ಲ ದಿವ್ಯಾಭರಣ ೨

ಧರಿಸಿದ ಗಂಧವೆ ಚರಣಕ್ಕೆ ಗಂಧವು
ಶಿರದಲ್ಲಿ ಮುಡಿಯುವ ಪುಷ್ಪವೆ ಮಾಲೆ

ಸ್ಥಿರವಾಗಿ ಕೂಡಿದ ಬುದ್ಧಿಯೆ ಆರುತಿ
ಅರಿತೊಡಲಿಗೆ ಉಂಬನ್ನವೆ ನೈವೇದ್ಯ ೩

ಎನ್ನ ಸ್ವರೂಪವೆಂಬುದೆ ರನ್ನಗನ್ನಡಿ
ಎನ್ನ ಮನೋವೃತ್ತಿ ಎಂಬುದೆ ಛತ್ರ
ಇನ್ನು ನುಡಿವ ಹರಿ ನಾಮಾಮೃತವೇ ತೀರ್ಥ
ಎನ್ನ ಮನವೆಂಬುದೆ ದಿವ್ಯ ಸಿಂಹಾಸನ ೪

ಅನ್ಯ ದೇವತೆ ಯಾಕೆ ಅನ್ಯ ಪ್ರತಿಮೆಯು ಯಾಕೆ
ಅನ್ಯವಾದ ಮಂತ್ರ ತಂತ್ರವ್ಯಾಕೆ
ಎನ್ನಲ್ಲಿ ಭರಿತ ಸಾಧನ್ನಂಗಳಿರುತಿರೆ
ಚೆನ್ನಾಗಿ ಶ್ರೀಕೃಷ್ಣ ಸ್ವಾಮಿಯ ಪೂಜಿಪೆ ೫

## ೧೮೫

ಎನ್ನ ಮನ ಕಂಡಕಡೆಗೆ ಎರಗುತಿದೆ
ನಿನ್ನಲ್ಲಿ ನಿಲಿಸಿ ಕಾಯೊ ಪ

ಚಕ್ಷುರಿಂದ್ರಿಯಗಳಿಂದ ಚದುರೆಯರ
ಈಕ್ಷಿಸಿ ನೊಂದೆನ್ನೆಯ
ಶಿಕ್ಷಕನು ನೀನೆ ಎನಗೆ ಸಿರಿಯರಸ
ಭಕ್ಕುತರೊಳಿಟ್ಟು ಕಾಯೋ ೧

ಶ್ರೋತ್ರೇಂದ್ರಿಯಗಳಿಂದ ಸತತ ದು-
ರ್ವಾರ್ತೆಗಳ ಕೇಳಿ ಕೆಟ್ಟೆ
ಕರ್ತೃ ಎನಗೆ ನಿನ್ನಯಾ ಕಥೆಗಳನು
ಅರ್ಥಿಯಿಂದೆರೆದು ಕಾಯೋ ೨

ಘಾಣೇಂದ್ರಿಯಂಗಳಿಂದ ದುರ್ಗಂಧಗಳ
ಘ್ರಾಣಿಸಿ ನೊಂದೆನ್ನೆಯ
ಪ್ರಾಣೇಶ ನಿನಗರ್ಪಿತ ಪರಿಮಳವ
ಮಾಣದೆ ಇತ್ತು ಕಾಯೋ ೩

ರಸನೇಂದ್ರಿಯಂಗಳಿಂದ ಷಡ್ರಸಗಳನು
ಹಸಿದು ನಾ ಸೇವಿಸಿದೆನೋ
ಬಿಸಜಾಕ್ಷನೇ ನಿನ್ನಯ ಪ್ರಸಾದವನು
ಆಸ್ವಾದಿಸೆನಗೆ ದೇವ ೪

ತ್ವಚೇಂದ್ರಿಯಂಗಳಿಂದ ತಾಮಸರ
ಸೋಕಿ ನಾ ಕೆಟ್ಟೆನೆಯ್ಯ

ಕಾಕು ಮಾಡದೆ ಎನ್ನನು ಸಿರಿಕೃಷ್ಣ
ಸಾಕಾರನಾಗಿ ಸಲಹೋ ೫

### ೧೨೭

ಎಲ್ಲಿ ಮಾಯಾವಾದನೆ ರಂಗಯ್ಯನು
ಎಲ್ಲಿ ಮಾಯಾವಾದನೆ ಪ

ಎಲ್ಲಿ ಮಾಯಾವಾದ ಫುಲ್ಲನಾಭಕೃಷ್ಣ
ಚೆಲ್ಲೆ ಗಂಗಳೆಯರು ಹುಡುಕ ಹೋಗುವ ಬನ್ನಿ ಅ.ಪ.

ಮಂದ ಗಮನೆಯರೆಲ್ಲ ಕೃಷ್ಣನ ಕೂಡೆ
ಚೆಂದದಿ ಇದ್ದೆವಲ್ಲ
ಕಂದರ್ಪ ಬಾಧೆಗೆ ಗುರಿಯ ಮಾಡಿದನಲ್ಲ
ಮಂದಮತಿ ನಮಗೆ ಬಂದು ಒದಗಿತಲ್ಲ ೧

ಸರಸಿಜಾಕ್ಷಿಯರು ಕೂಡಿ ಕೃಷ್ಣನ ಕೂಡೆ
ಸರಸವಾಡುತಲಿದ್ದೆವೆ
ಕರೆಕರೆಗೊಳಿಸಿ ಮನ್ಮಥ ಬಾಧೆಗೊಪ್ಪಿಸಿ
ಚರಣ ಸೇವಕರಾದ ತರಳೆಯರನು ಬಿಟ್ಟು ೨

ಭಕ್ತವತ್ಸಲ ದೇವನು ತನ್ನವರನ್ನು
ಅಕ್ಕರದಲಿ ಪೊರೆವನು
ಸಿಕ್ಕದೆ ಹೋಗನು ಹುಡುಕುತ್ತ ಹೋಗುವ
ಅಕ್ಕಯ್ಯ ಬನ್ನಿರೆ ಉಡುಪಿ ಶ್ರೀಕೃಷ್ಣನು ೩

ಬಾಲಕೃಷ್ಣನಿಗೆ ಗೋಪಿ (ಯಶೋದೆ) :

### ೧೨೮

ಬಾಲಕೃಷ್ಣನಿಗೆ ಗೋಪಿ (ಯಶೋದೆ) ಅಲಂಕಾರ ಮಾಡಿದ್ದರ ಸವಿವರ ವರ್ಣನೆ ಇದು :ಅಲ್ಲಲ್ಲಿ ವಿರೋಧಾಭಾಸವನ್ನು ತರಲಾಗಿದೆ. 'ಪೊಡವಿಯನು ಅಳೆದ ಪುರುಷೋತ್ತಮನಿಗೆ ಮೆಲ್ಲಡಿಯನಿಡು' ಎಂದು ನಡೆಯ ಕಲಿಸುವುದರಲ್ಲಿ ಸೊಗಸಾದ ಕಲ್ಪನೆ ಬಂದಿದೆ.

## ೧೨೮

ಎಷ್ಟು ಜನ್ಮದಲಿ ಮಾಡಿದಳೊ ಗೋಪಿ ಶ್ರೀ-
ಕೃಷ್ಣನ ಲೀಲೆಯನು ನೆನೆದು ಹಿಗ್ಗುವ ಸುಕೃತ ಪ

ಅಂಬುರುಹನಾಭನಿಗೆ ಅರಳೆಲೆಯಲಂಕರಿಸಿ
ತುಂಬೆಗುರುಳಿಗೆ ಸುತ್ತ ಜಡೆಯನ್ನು ಹೆಣೆದು
ಸಂಭ್ರಮದಿ ಚಂಡಿಕೆಗೆ ಸರಸಮಲ್ಲಿಗೆ ಸುತ್ತಿ
ನಂಬಿಸುತ ನಗಿಸಿ ಮುದ್ದಾಡುವೊ ಸುಕೃತ ೧

ಮದನ ಜನಕನಿಗೆ ಮಾಗಾಯಿ ಬಾವುಲಿಯಿಟ್ಟು
ಪದಕ ವೈಜಯಂತಿಯನೆ ಕೊರಳಿಗ್ಹಾಕಿ
ಮುದದಿ ಕೌಸ್ತುಭ ತುಲಸಿ ವನಮಾಲೆಯನು ಧರಿಸಿ
ಪದುಮನಾಭನ ಪಾಡಿ ಪೊಗಳುವೊ ಸುಕೃತ ೨

ಕಸ್ತೂರಿಯಿಟ್ಟು ಕಂಗಳಿಗೆ ಕಾಡಿಗೆ ಹಚ್ಚಿ
ಮತ್ತೆ ಕದಪಿನಲಿ ಕುಂಕುಮವನೊತ್ತಿ
ಮುತ್ತಿನಂದದೊಳಿರುವ ಬೆವರ ಸೆರಗಿನೊಳೊರೆಸಿ
ಮುತ್ತು ತಾರೈಯೆಂದು ಮುದ್ದಾಡುವೋ ಸುಕೃತ ೩

ಅಸುರಕುಲ ಹರಣನಿಗೆ ಅಂಗಿಯನು ತೊಡಿಸಿ ಬಲು
ಕುಶಲದಿ ಪೀತಾಂಬರವನ್ನು ಉಡಿಸಿ
ಪೊಸ ರತುನ ಬಿಗಿದ ಮಣಿಮಯದ ಮಕುಟವ ಮಂಡೆ-
ಗೊಸವಿಟ್ಟು ನಲಿ ನಲಿದು ಮುದ್ದಾಡುವೊ ಸುಕೃತ ೪

ಶಂಖ ಚಕ್ರಾಂಕಿತಗೆ ಭುಜಕೀರ್ತಿಯನೆ ಧರಿಸ್ಯ-
ಲಂಕಾರದಲಿ ತಾರೆ ಮಣಿಯ ಕಟ್ಟಿ
ಕಂಕಣವು ಕಡಗ ಥಳಥಳಿಪ ಪವಳದಿ ರಚಿಸಿ
ಬಿಂಕದಲಿ ತೊಟ್ಟಿಲೊಳಗಿಟ್ಟು ತೂಗುವ ಸುಕೃತ ೫

ಮುಂಗೈಯ ಮುರಿ ಮುತ್ತಿನುಂಗುರವು ಥಳಥಳಿಸೆ
ರಂಗು ಮಾಣಿಕದ ಒಡ್ಯಾಣ ಹೊಳೆಯೆ
ಕಂಗೊಳಿಸುತಿಹ ಕಾಂಚಿದಾಮವಲಂಕರಿಸಿ ಸ-
ರ್ವಾಂಗದೊಳು ಗಂಧ ಪರಿಮಳವ ಸೂಸುವ ಸುಕೃತ ೬

ಕಡಗ ಪೊಂಗೆಜ್ಜೆ ಕನಕದ ಘಂಟೆ ಸರಪಳಿಯ
ಬಿಡದೆ ಶ್ರೀಹರಿಯ ಚರಣದಲ್ಲಿ ಧರಿಸಿ
ಪೊಡವಿಯನು ಅಳೆದ ಶ್ರೀಪುರುಷೋತ್ತಮನಿಗೆ ಮೆ-
ಲ್ಲಡಿಯನಿಡು ಎಂದೆನುತ ನಡೆಯ ಕಲಿಸುವ ಸುಕೃತ ೭

ನೆಲನ ಈರಡಿಮಾಡಿ ಬಲಿಯ ಮೆಟ್ಟಿದ ಪಾದ
ಚೆಲುವ ಚರಣದಿ ಭೂಮಿಯಳೆದ ಪಾದ

ಶಿಲೆಯೆಡಹಿ ಬಾಲೆಯನು ಮಾಡಿದ ದಿವ್ಯವಾದ
ಒಲಿದಿಟ್ಟು ನಡೆಯೆಂದು ನಡೆಯ ಕಲಿಸುವ ಸುಕೃತ ೮

ಅಂದಿಗೆ ಪಾಯ್ವಟ್ಟು ಕುಂದಣದ ಕಿರುಗೆಜ್ಜೆ
ಸಂದಣಿಸಿ ಕಿರಿಬೆರಳೊಳುಂಗುರಗಳು
ಚೆಂದದ ಕಡಗ ಪಾಡಗ ಘಂಟೆ ಸರಪಣಿಯು
ಮಂದಗಮನನ ಪಾದಪದ್ಮಕ್ಕಿಡುವೊ ಸುಕೃತ೯

ಪನ್ನಂಗಶಯನ ಆನೆಯನಾಡು ಶ್ರೀಕೃಷ್ಣ
ಹೊನ್ನು ತಾ ಹೊನ್ನು ತಾ ಗುಬ್ಬಿಯೆಂದೆನುತ
ತನ್ನ ಕರಗಳಲಿ ತಾರಮ್ಮಯ್ಯನಾಡಿಸುತ
ರನ್ನ ರಂಗಯ್ಯ ತೋಳಾಡು ಎಂಬುವ ಸುಕೃತ ೧೦

ದಿನಕರ ನಿಭಾಂಗ ಕೇಶವ ರಾಮಚಂದ್ರ ಮುನಿ
ಸನಕಾದಿವಿನುತ ಕುಣಿದಾಡು ಎನುತ
ತನ್ನ ಕರಗಳಲಿ ತಕ್ಕೈಸಿ ಕೃಷ್ಣನ ದಿವ್ಯ
ಘನ್ನ ಚರಿತೆಯ ಪಾಡಿ ಪೊಗಳುವ ಸುಕೃತ ೧೧

## ೧೨೯

ಎಸಳುಗಂಗಳ ಕಾಂತಿ ಹೊಳೆವ ಮುಖದ ಥಾಳ
ಶಶಿಮುಖಿ ಚೆಲುವಿಕೆಯ ಪ

ಕುಸುಮನಾಭನ ಕೂಡೆನೆಂಬೋ ಭರದಿಂದ
ಬಿಸಿ ಹಾಲನೆ ಹೊತ್ತಳು ಅ

ಹಾಲಕೊಂಡೀರೆಂದು ಸಾರಿದಡಾ ಬಾಲೆ
ಕೇರಿ ಕೇರಿಯ ಒಳಗೆ
ಹಾಲಿನ ಬೆಲೆಯನ್ನು ಹೇಳೆ ಮಾನಿನಿ ರನ್ನೆ
ಕೇಳಿದ್ದು ಕೊಡುವೆನೆಂದ ೧

ಕಮ್ಮನೆ ಕಾದಿಹ ಎಮ್ಮೆಯ ಹಾಲಿಗೆ
ಒಮ್ಮನ ಹೊನ್ನೆಂದಳು
ಬೆಣ್ಣೆಗಳ್ಳ ಕೃಷ್ಣ ಕಣ್ಣು ಸನ್ನೆಯ ಮಾಡಿ
ನಿನ್ನ ಮೋಹಿಪೆನೆನ್ನಲು ೨

ಕೆಟ್ಟೆ ಕೆಟ್ಟೆನೊ ಕೃಷ್ಣ ಇತ್ತಲೇತಕೆ ಬಂದೆ
ಅತ್ತೆ ಮಾವಂದಿರುಂಟು
ಥಟ್ಟನೆ ಕಂಡರೆ ಬಿಟ್ಟು ಬಿಡರು ನಿನ್ನ
ಮುಟ್ಟದಿರೆಂದಳಾಕೆ ೩

ಎಂದ ಮಾತಿಗೆ ನಾನಂಜುವನಲ್ಲವೆ
    ಇಂದಿನ ದಿನದೊಳಗೆ
ಮಂದಿರದೊಳಗಿದ್ದು ಮರುದಿನ ಪೋಗೆಂದು
    ಮುಂಗೈಯ ಪಿಡಿದುಕೊಂಡ ೪

ಗಂಡನುಳ್ಳವಳ ಮುಂಗೈಯ ಪಿಡಿವಂಥ
    ಪುಂಡುತನವು ಸರಿಯೆ
ಪುಂಡರೀಕಾಕ್ಷಿ ಕೇಳ್ ದುಂಡುಮಲ್ಲಿಗೆ ಹುವ್ವ
    ಕಂಡರೆ ಬಿಡುವರೇನೆ ೫

ಬಾಳುವ ಹೆಣ್ಣಿನ ತೋಳನೆ ಪಿಡಿವುದು
ನ್ಯಾಯವೇನೋ ನಿನಗೆ
ಫುಲ್ಲನಯನೆ ಕೇಳೆ ಆಯ್ದ ಮಲ್ಲಿಗೆ ಹುವ್ವ
ಬಲ್ಲವರು ಬಿಡುವರೇನೆ ೬

ಬೈಗಾಯಿತು ಬೈದಾರು ಮನೆಯಲ್ಲಿ
    ಬಿಡು ಬಿಡು ಎಲೊ ಗೋವಳ
ಐಗಾರ ನಾ ಕಾಣೆ ಜಗದಲ್ಲಿ ಜೀವರ
    ಹಿಡಿದು ಬಿಡುವನಲ್ಲವೆ ೭

ಸಕ್ಕರೆ ಚಿಲಿಪಾಲು ಅರ್ಥಿ ಆಯಿತೆಂದು
    ಎತ್ತಿಕೊಂಡು ಕುಡಿದ
ಅಕ್ಕರೆಯಿಂದಲಿ ಬೇಡು ನೀ ಕೇಳಿದ
    ವಸ್ತುವ ಕೊಡುವೆನೆಂದ ೮

ವಸ್ತುವೇತಕೆ ಪರವಸ್ತುವೆ ನಾ ನಿನ್ನ
    ಮೆಚ್ಚಿ ಬಂದೇನೆಂದಳು
ಭಕ್ತರ ಸಿರಿಕೃಷ್ಣ ಕುಕ್ಷಿಯೊಳಗೆ ಇಟ್ಟು
    ರಕ್ಷಿಸು ಎಂದಳಾಕೆ ೯

೧೮೭

ಇದೊಂದು ವ್ಯಾಜನಿಂದಾಸ್ತುತಿಯ ಜನಪ್ರಿಯ ಹಾಡು. :
ಇದೊಂದು ವ್ಯಾಜನಿಂದಾಸ್ತುತಿಯ ಜನಪ್ರಿಯ ಹಾಡು. ಪುರಂದರದಾಸರ 'ಏನ ಬೇಡ'ಲಿ ಸ್ವಾಮಿ' ಎಂಬ ಹಾಡಿಗೆ ಇದುವೆ ಪ್ರೇರಣೆಯೆಂದು ಕಾಣುತ್ತದೆ.

ಏನ ಬೇಡಲೊ ನಿನ್ನ ದೇವಾಧಿ ದೇವ ಪ

ಏನಹುದೊ ನಿನ್ನೊಳಗೆ ಮಹಾನುಭಾವ ಅ.ಪ

ಮನೆಯ ಬೇಡಲೆ ವನಧಿ ಹಾಸಿಗೆಯು ವಟಪತ್ರ
ವನಿತೆಯರ ಬೇಡಲೆ ಬ್ರಹ್ಮಚಾರಿ
ಘನ ಸಖ್ಯವನು ಬಯಸೆ ನೆನೆಯುವರ ಮನದಲಿಹೆ
ತಿನುವುದಕೆ ಕೇಳುವೆನೆ ನವನೀತಚೋರ ೧

ಒಡವೆಗಳ ಬಯಸೆ ಶಿಖಿಪಿಂಛ ತುಳಸಿ ಪತ್ರ
ಕಡು ಸೈನ್ಯವನೆ ಬಯಸೆ ಗೋಪಾಲನು
ಬಿಡದೆ ರೂಪವ' ಬಯಸೆ ನೀಲಮೇಘಶ್ಯಾಮ
ಉಡುವುದಕೆ ಕೇಳುವೆನೆ ಸ್ತ್ರೀವಸನ ಚೋರ ೨

ಶಕ್ತಿಯನು ಗೋಪಿಕಾ ಸ್ತ್ರೀಯರಲಿ ವ್ರಯಗೈದೆ
ಭಕ್ತಿಯನು ಸತ್ಯವಂತರಿಗಿತ್ತಿಹೆ
ಭಕ್ತರನು ವಂಚಿಸುತ ನೀನು ಬಚ್ಚಿಟ್ಟಿರುವ
ಮುಕ್ತಿ ಕಾಂತೆಯ ಕೊಡು ಸುಖಿಪೆನೊ ಶ್ರೀಕೃಷ್ಣ ೩

## (೨) ಹರಿದಾಸವರ್ಗ

೧೭೪

ಏನು ಸುಖವೊ ಎಂಥಾ ಸುಖವೊ ಹರಿಯ
ಧ್ಯಾನ ಮಾಡುವರ ಸಂಗ ಪ

ತಂಬೂರಿ ಮೀಟುತ ದ್ವಯ
ಅಂಬಕದಿ ಬಾಷ್ಪ ಬಿಂದು
ತುಂಬಿ ಆನಂದದಿಂದ
ಸಂಭ್ರಮವಾಗಿಹರ ಸಂಗ ೧

ಗೆಜ್ಜೆಯ ಕಾಲಲ್ಲಿ ಕಟ್ಟಿ
ಲಜ್ಜೆಬಿಟ್ಟು ಹರಿಯ ನಾಮ
ಗರ್ಜನೆ ಮಾಡುತ್ತ ಅಘ-
ವರ್ಜಿತರಾಗಿಪ್ಪರ ಸಂಗ ೨

ಪುಷ್ಪದಿ ಸುಗಂಧ ಹ್ಯಾಗೆ
ಇಪ್ಪುದೊ ತದ್ವತು ಜಗ-
ದಪ್ಪ ಬ್ರಹ್ಮಾದಿಗಳೊಳ
ಗಿಪ್ಪನೆನ್ನುವರ ಸಂಗ ೩

ತುಚ್ಛ ವಿಷಯವ ತೊರೆದು
ನಿಶ್ಚಲ ಭಕುತಿಯಿಂದ
ಅಚ್ಯುತಾನಂತನ ಪಾದ
ಮೆಚ್ಚಿಸಿದವರ ಸಂಗ ೪

ದರ್ವಿಯಂತೆ ಜೀವವನ್ನು
ಸರ್ವತ್ರ ತಿಳಿದು ಶೇಷ
ಪರ್ವತವಾಸನ ಕಂಡು
ಉರ್ವಿಯೋಳಿಹರ ಸಂಗ ೫

ನಡೆವುದು ನುಡಿವುದು
ಕೊಡುವುದು ಕೊಂಬುವುದು
ಒಡೆಯನ ಪ್ರೇರಣೆಯೆಂದು
ನುಡಿದು ಹಿಗ್ಗುವರ ಸಂಗ ೬

ಸೃಷ್ಟಿಗೊಡೆಯನ ಮನ-
ವಿಟ್ಟು ಭಜಿಸುತ ಜ್ಞಾನ
ಶಿಷ್ಟರಾಗಿ ಸಿರಿ ಕೃಷ್ಣ-
ಗಿಷ್ಟರಾಗಿಪ್ಪರ ಸಂಗ ೭

## ೧೫೮

ಏನೆಂಬೆ ನಿಮ್ಮ ಕರುಣವು ದೇವವರ್ಯ, ಶ್ರೀಮ- ಪ

ದಾನಂದತೀರ್ಥಾರ್ಯ ಹರಿಕಾರ್ಯಧುರ್ಯ ಅ.ಪ.

ವಾರಿಧಿಯ ಗೋಷ್ಪಾದ ನೀರಂತೆ ದಾಟ್ಯಂದು
ಮಾರು ಮಲೆತಾಕ್ಷನನು ಮುರಿದು ಮೆರೆದೆ
ಸಾರಿ ಬಹ ರಕ್ಕಸರ ಮುರಿದೊಟ್ಟಿ ನೀನಿಂದು
ಮೇರೆಯಿಲ್ಲದ ಭವಾಂಬುಧಿಯ ದಾಟಿಸಿದೆ ೧

ದಾನವನಶೋಕವನ ಕಿತ್ತು ಈಡ್ಯಾಡಂದು
ಶ್ರೀನಾಥಗೆನುತ ಲಂಕೆಯನುರುಪಿದೆ

ಮಾನವರ ಶೋಕವನ ಬೇರೊರಸೆ ಕಿತ್ತಿಂದು
ದಾನವರಿಹ ಪುರವ ಪೂರೈಸಿ ಮೆರೆದೆ ೨

ಬೇಗ ಸಂಜೀವನವ ತಂದಿತ್ತು ಪೊರೆದ್ಯಂದು
ನಾಗಪಾಶದಿ ನೊಂದ ಕಪಿಕಟಕವ
ಈಗ ಹರಿಭಕುತಿ ಸುಧೆಯ ನೆರೆದು ಪಾಲಿಸಿದೆ
ರಾಗದಿಂ ಭವಪಾಶಬದ್ಧ ಜನರುಗಳನ್ನು ೩

ಮೂಲ ರಾಮಾಯಣವ ಪಾಡಿ ಪಾಡಿದೆ ಅಂದು
ಓಲ್ಯಾಡಿ ಹರಿಭಕ್ತಿ ಸಾಗರದೊಳು
ಮೂಲೋರ್ಕದೊಳಗೆಲ್ಲ ಅದರ ಸಾರವ ಬೀರಿ
ತೇಲಿಸಿದೆ ಭವಾಬ್ಧಿ ಮಗ್ನ ಜನಗಳನಿಂದು ೪

ಹತ್ತು ದಿಕ್ಕನು ಗೆಲಿದು ರಾಜಸೂಯದಿ ಅಂದು
ಚಿತ್ತೈಸಿ ಹರಿಗಗ್ರ ಪೂಜೆಯನು ಮಾಡಿದೆ
ಹತ್ತೆರಡು ಮತ್ತೊಂದು ದುರ್ಭಾಷ್ಯ ಜರಿದಿಂದು
ಬಿತ್ತರಿಸಿದೆ ಭಾಷ್ಯದಿಂದಗ್ರಪೂಜೆಯನು ೫

ದ್ರೌಪದಿಯ ಸಂತವಿಟ್ಟಂದು ಮುಡಿ ಪಿಡಿದೆಳೆದ
ಪಾಪಿ ದುಶ್ಶಾಸನನ ಬಸುರನ್ನು ಬಗೆದೆ
ಪಾಪಿ ಜನರುಗಳೆಳೆಯೆ ವೇದಾಂತ ದೇವಿಯರ
ಶ್ರೀಪತಿಗೆ ಸೇರಿಸಿದೆ ಭಾವವರಿದಿಂದು ೬

ಅಂದು ಕಲಿಯಂಶ ದುರ್ಯೋಧನನ ಸಂದುಗಳ
ಕುಂದದೆ ಮುರಿದೆ ಗದೆಯಿಂದ ಸದೆದು
ಇಂದು ಕಲಿಯನನೇಕ ಶಾಸ್ತ್ರ ಶಸ್ತ್ರಗಳಿಂದ
ಕೊಂದೆಳೆದೆ ಹರಿಯ ಮನ್ನೆಯದಾಳು ಭಳಿರೆ ೭

ಶ್ರುತಿಪಂಕಜಗಳರಳೆ ಅಜ್ಞಾನ ತತಿಯೋಡೆ
ಗತಿಗಳಡಗೆ ಮಿಥ್ಯವಾದಿ ಖಳರ
ಕುಮತಗಳು ಮುರಿಯೆ ಸತ್ಪಥವು ಕಾಣಿಸಲು
ವಿತತವಾಯಿತು ನಿನ್ನ ಪ್ರಭೆ ಸೂರ್ಯನಂತೆ ೮

ಜ್ಞಾನಚಂದ್ರಿಕೆ ಪೊಳೆಯೆ ಭಕ್ತಿವಾರಿಧಿಯುಕ್ಕೆ
ಮನ ಚಕೋರವು ವಿಷ್ಣುಪದದಿ ನಲಿಯೆ
ದೀನ ಜನ ಭಯವಡಗೆ ತಾಪತ್ರಯಗಳೋಡೆ
ಆನಂದತೀರ್ಥೇಂದು ಶ್ರೀ ಕೃಷ್ಣ ತಾ ಮೆಚ್ಚೆ ೯

೧೮೮

'ಮದ್ದಳೆಯ ಇಲಿ'– ಇದರ ಹಿಂದೆ ಜಾನಪದ ಕತೆ ಇದೆ. ಇಲಿಯೊಂದು ಮದ್ದಳೆಯ ಒಳಗೆ ಸೇರಿಕೊಂಡಿರುತ್ತದೆ. ಅದು ಗೊತ್ತಿಲ್ಲದೆ ಮದ್ದಳೆ ವಾದಕನು ಬಾರಿಸುತ್ತಲೇ ಇರುತ್ತಾನೆ. ಸೆರೆ ಸಿಕ್ಕ ಆ ಇಲಿ ಒದ್ದಾಡುತ್ತದೆ. ವಿಷಯ ವಾಸನೆಗಳ ಜಂಜಡದಲ್ಲಿ ಮನುಷ್ಯ ದೇಹದ ಒದ್ದಾಟ ಅದೇ ರೀತಿಯದು.

ಒಂದರಿಂ ಸುಖವಿಲ್ಲ ಹುಟ್ಟು ಮೊದಲು ಡಂಭ– ಪ

ದಿಂದ ಭೈರೂಪ ತೊಟ್ಟು ತಿರುಗುತಿದೆ ಅ.ಪ

ಕಾಯ ದುರಾಸೆಯಲಿ ಕರಗಿಹೋಯಿತು ವೃಥಾ
ಪ್ರಾಯದಿರುವಿಕೆಯು ಬಯಲಾಗಿ ಹೋಯ್ತು
ಸಾಯ ಬಟ್ಟೆ ಸಂಸಾರ ವಿಷಯ ಕೋಟಲೆಗೊಂಡು
ನಾಯ್ ಬಾಯ ಕೊಚೆಯಂತೆ ನಸಿಯುತಿದೆ ದೇಹ೧

ಬುದ್ಧಿ ದೃಢ ದುರ್ಮಾರ್ಗದಿಂದ ನೋಡದೆ ಹೋಯ್ತು
ಶುದ್ಧ ಸತ್ಕರ್ಮವಿಲ್ಲದೆ ಸೂರೆ ಹೋಯ್ತು
ದುರ್ದೆಸೆಯ ಪಥದ ಲಂಪಟ ಮಾಯಕೆ ಸಿಲುಕಿ
ಮದ್ದಳೆಯ ಇಲಿಯಂತೆ ಆಯಿತೀ ದೇಹ ೨

ಭೋಗ ಸಂಗವಮಾಡಿ ಪೋಗಲೈಸಿತು ದೇಹ
ರಾಗಲೋಭವು ಹೆಚ್ಚಿ ವೈರಾಗ್ಯ ಹೊಯ್ತು
ಆಗಮವ ತಿಳಿಯದೆ ಕೃಷ್ಣನ್ನ ಧ್ಯಾನಿಸದೆ
ಜೋಗಿ ಕೈ ಕೋಡಗನಂತೆ ತಿರುಗುತಿದೆ ೩

## ೩. ನೀತಿಬೋಧೆ

### ೨೦೬

ಓಲಗ ಸುಲಭವೋ ರಂಗೈಯನ ಪ

ಓಲಗ ಸುಲಭವೊ ಪುಸಿಯಲ್ಲ ಕರುಣಾಲ–
ವಾಲನಾದ ಕರಿರಾಜ ವರದನ ಅ.ಪ

ದೂರ ಹೋಗಲಿಬೇಡ ತೊಡೆಯ ಗುದ್ದಲಿ ಬೇಡ
ನೀರ ನೆರೆಯಬೇಡ ನಿಗಡದಲ್ಲಿರಬೇಡ
ನಾರಾಯಣನೆಂಬ ನರನ ಯೋಗಕ್ಷೇಮ
ಭಾರ ತನ್ನದೆಂಬ ಪ್ರಹ್ಲಾದ ವರದನ೧

ಸಂತೇಲಿ ಮಾಡಿದ ಸಾಷ್ಟಾಂಗ ನಮಸ್ಕಾರ
ದಂತೆ ಅಲ್ಲವೆ ಅನ್ಯರ ಭಜಿಸುವುದು
ಅಂತರಂಗದಲ್ಲಿ ಹರಿ ನೀನೆ ಗತಿಯೆಂದು
ಚಿಂತಿಸಿದರೆ ಕಾಯ್ವ ಶ್ರೀರಾಮಚಂದ್ರನ ೨

ತಪ್ಪು ಸಾಸಿರಗಳ ತಾಳಿ ರಕ್ಷಿಸುವ
ತಪ್ಪು ಮೇಘವರ್ಣ ಕಾಂತಿಯಿಂದೊಪ್ಪುವ
ಸರ್ಪಶಯನನಾದ ಸರ್ವಲೋಕೇಶನ
ಅಪ್ರಮೇಯ ನಮ್ಮಪ್ಪ ಶ್ರೀಕೃಷ್ಣನ ೩

## ೧೭೭

### ೧೭೭-೧೭೮

ಪುರಂದರದಾಸರನ್ನು ಕುರಿತ ಇವೆರಡು ಹಾಡುಗಳು ಸುಪರಿಚಿತವಾದವುಗಳು. ಸ್ವಯಂ ಯತಿ-ಶ್ರೇಷ್ಠರಾಗಿ, ಪುರಂದರದಾಸರಿಗೆ ದಾಸದೀಕ್ಷೆಯನ್ನು ಇತ್ತವರಾಗಿ, ವ್ಯಾಸರಾಯರು ಅವರನ್ನು ಕುರಿತು ಧನ್ಯನಾದೆನು ನಾನು ಮನುಜನ್ಮದಿ ಪುಟ್ಟಿ ದಾಸರನು ಚೆನ್ನಾಗಿ ಸ್ಮರಿಸಿ ಪಾವನನಾದೆನು ಎಂಬಷ್ಟು ಗೌರವದಿಂದ ಕಂಡಿದ್ದುದು ಅಪೂರ್ವದ ಸಂಗತಿಯಾಗಿದೆ.

ಕಂಗಳಿಗೆ ಹಬ್ಬವಾಯಿತಯ್ಯ
ಮಂಗಳಾತ್ಮಕ ಪುರಂದರದಾಸರನು ಕಂಡು ಪ

ಸಕಲ ತೀರ್ಥಕ್ಷೇತ್ರ ಯಾತ್ರೆ ಮಾಡಿದ ಫಲವು
ಸಕಲ ಸತ್ಕರ್ಮ ಸಾಧಿಸಿದ ಫಲವು
ಭಕುತಿಯಿಂ ಭಾಗೀರಥೀ ಮಜ್ಜನದ ಫಲವು
ರುಕುಮಿಣಿ ಪತಿಯ ಪದ ಭಕುತರನು ಕಂಡು ೧

ಇವರ ನರರೆಂದವರು ನರಕದಲಿ ಬೀಳುವರು
ಕವಿಜನರು ಒಪ್ಪಿ ಕೈಹೊಡೆದು ಹೇಳಿರಲು
ಅವನಿಯೊಳಗತಿ ದುರ್ಲಭವು ನಂದಗೋಪನ್ನ
ಕುವರನಿದ್ದೆಡೆಯ ವೈಕುಂಠವೆಂಬುವರ ಕಂಡು ೨

ಧನ್ಯನಾದೆನು ನಾನು ಮನುಜನ್ಮದಿ ಪುಟ್ಟಿ
ಮಾನ್ಯನಾದೆನು ಇನ್ನು ಈ ಜಗದೊಳಗೆ
ಪನ್ನಂಗಶಯನ ಶ್ರೀಕೃಷ್ಣನ ದಾಸರನು
ಚೆನ್ನಾಗಿ ಸ್ಮರಿಸಿ ಪಾವನ್ನನಾದೆನಿಂದು ೩

೧೦೩

ಕಂಡೆ ಕನಸಿನಲಿ ಕಾರುಣ್ಯ ಮೂರುತಿ ಹರಿಯ ಪ

ಪುಂಡರೀಕಾಕ್ಷ ಪುರುಷೋತ್ತಮನ ಸಿರಿಯ ಅ.ಪ

ಚಂಡು ರನ್ನದ ತಾಯ್ತಿ ಮಲುಕು ಅರಳೆಲೆ ಹೊನ್ನ
ಗೊಂಡೆಗಳ ಬಿಗಿದ ಶಿಖಿ ದಾರದೆಡೆಯ
ದುಂಡು ಮಲ್ಲಿಗೆಯ ಪರಿಮಳವು ಘಮಘಮಿಪ ಅಳಿ-
ವಿಂಡುಗಳ ಜರಿವಂಥ ಸುಳಿಗುರುಳಿನಿರವ ೧

ಶಶಿವದನ ನಯನ ನಾಸಾಪುಟದ ಚಲುವಿಕೆಯ
ನೊಸಲ ಸಿರಿ ನಾಮ ಕಸ್ತೂರಿ ತಿಲಕದ
ಎಸೆವ ಕುಡಿ ಹುಬ್ಬುಗಳ ಕುಂಡಲದ ಕಾಂತಿಗಳ
ದೆಸೆದೆಸೆಗೆ ಬೆಳಗುತಿಹ ವರದೀಪ್ತಿಗಳನು ೨

ಕೆತ್ತನೆಯ ಪದಕೆ ಕೆಲಬಲಕೆ ಒಲಿದಾಡುತಿಹ
ಮುತ್ತು ಮಾಣಿಕದ ಹುಲಿಯುಗುರು ಸರದ
ಚಿತ್ತಾರದ ಹೊನ್ನ ಬಂದಿಯ ಯಣ್ಣೆ ಮಣಿ ಇದರ
ಒತ್ತಿನಲಿ ಶಿರಿವತ್ಸ ವೈಯಾರದಿರವ ೩

ತೋಳ ಬಳೆ ತಾಯ್ತಿ ಕಡಗ್ಡವಳ ಕಂಕಣವಾಕು
ನೀಲ ಮಾಣಿಕ್ಯದ ಬೆರಳುಂಗುರಗಳ
ಸಾಲು ಗಂಟೆಗಳ ರಂಜಿಸುವ ಕಾಂತಿಗಳ ಈ-
ರೇಳು ಭುವನಗಳ ಧರಿಸಿದ ಉದರವನು ೪

ಬಟ್ಟದೊಡೆಗಳಿಗೆ ಬಿಗಿದುಟ್ಟ ಚಲ್ಲಣ ಮೈಯ
ತೊಟ್ಟ ಜರತಾರದಂಗಿಯ ಚರಣದಿ
ಕಟ್ಟಿರುವ ಗೆಜ್ಜೆ ಸರಪಣಿ ಕಾಲ ಕಡಗಗಳ
ದಟ್ಟಡಿಯನಿಡುತ ಬಹ ಪುಟ್ಟ ಗೋಪಾಲಕನ ೫

ಬಾಲಕನು ಕರೆಯೆ ಬಹು ಕಂಬದಲಿ ಬಂದೊಡೆದು
ಬಾಲಕನ ತರಿದು ಸಾಂದೀಪಗಿತ್ತ
ಬಾಲೆ ಚೀರಿದರೆ ಅಕ್ಷಯವಿತ್ತ ದೇವಕಿಯ
ಬಾಲಕನ ಬಹು ಬಗೆಯ ಲೀಲೆಗಳನೆಲ್ಲ ೬

ಪೊಗಳಲೆನ್ನಳವಲ್ಲ ಪೊಸಬಗೆಯ ಮಹಿಮೆಗಳ
ಅಘಹರನ ಅಗಣಿತದ ಗುಣ ಗಣಗಳ
ನಿಗಮ ನಿಕರಕೆ ಮೈಯಗೊಡದ ಉಡುಪಿನ ಕೃಷ್ಣ
ನೊಗುಮಿಗೆಯ ಉನ್ನತದ ವೈಯಾರಗಳನು ೭

೧೩೦

ಕಂದನಿಗೆ ಕಾಲಿಲ್ಲವಮ್ಮ, ಪುಟ್ಟ- ಪ

ದಂದಿಂದ ಈ ಅಂಬೆಗಾಲು ಬಿಡದಮ್ಮ ಅ.ಪ

ಮಳೆ ಹೊಳೆ ಕತ್ತಲೊಳು ತರಳ ಮಗ ಬೆದರಿದನೊ
ಕಳೆಯುಳ್ಳ ಮುಖಕೀಗ ಗ್ರಹ ಸೋಕಿತೋ
ಎಳೆಯ ಬೆಳದಿಂಗಳೋಳೆತ್ತಣ ದೃಷ್ಟಿ ತಾಕಿತೊ
ಲಲನೆ ಮೀಸಲ ಹಾಲು ಮೆರೆದೆರೆದ ಪರಿಯೊ ೧

ಬೆಣ್ಣೆಯನು ಮೆಲ್ಲುತ ಬೆದರಿ ಬಾಯಾರಿದನೊ
ಉಣ್ಣೆ ಪೂತನಿ ಮೊಲೆಯ ವಿಷ ಸೋಂಕಿತೋ
ಅಣ್ಣ ಪಾಪಿಯ ಭಯಕೆ ಅಂಜಿ ಕಾಲಿಟ್ಟನೊ
ಹೆಣ್ಣು ದೈತೇಯರ ಕಾಲಲಿ ಬಂದ ಸರಕೊ ೨

ಧುರವಿಜಯ ಶ್ರೀಕೃಷ್ಣರಾಯಗೆ ನಿಮ್ಮ
ಹರದೇರಂದವ ತೋರಬಂದ ಪರಿಯೋ
ಧರೆಗಧಿಕ ವಿದ್ಯನಗರವಳಿತೆಂದು ಉದಯ
ಗಿರಿಯಿಂದ ಬಂದ ಮುದ್ದು ಬಾಲಕೃಷ್ಣಗೆ ೩

೧೩೧

ಕಡೆಗೋಲ ತಾರೆನ್ನ ಚಿನ್ನವೆ- ಮೊಸ
ರೊಡೆದರೆ ಬೆಣ್ಣೆಬಾರದು, ಮುದ್ದುರಂಗ (ಮಗುವೆ ಪಾ)

ಅಣ್ಣನ ಒಡಗೊಂಡು ಬಾರೈಯ-ಸವಿ
ಬೆಣ್ಣೆಯ ಮುದ್ದೆಯ ಮೆಲುವಿರಂತೆ
ಬಣ್ಣದ ಸರವನ್ನು ಕೊರಳಲ್ಲಿ ಹಾಕುವೆ
ಚಿಣ್ಣರೊಡನೆ ಆಡಕಳುಹುವೆ ರಂಗ ೧

ಪುಟ್ಟ ಬಚ್ಚಿಯ ತಂದು ನಿನ್ನಯ ಚಿನ್ನದ
ತೊಟ್ಟಿಲ ಕಾಲಿಗೆ ಕಟ್ಟಿಸುವೆ
ಬಟ್ಟಲು ತುಂಬಿದ ಸಕ್ಕರೆ ನಿನಗೀವೆ
ಕಟ್ಟಾಣಿ ಮುತ್ತಿನ ಸರವನೀವೆ ೨

ಬಡವರ ಭಾಗ್ಯದ ನಿಧಿಯೆ ಗೋಕುಲ-
ದೊಡೆಯನೆ ಮಾಣಿಕ್ಯದ ಹರಳೆ
ಕಡುಮುದ್ದು ಉಡುಪಿನ ಬಾಲಕೃಷ್ಣಯ್ಯ
ದುಂಡುಕು ಮಾಡುವರೇನೊ ಪೆಂಗಳೊಳುರಂಗ ೩

## ೧೩೨

ಕಣ್ಣಿಗೆ–ಕಟ್ಟಿದಂತಿದೆ ಪ

ಬಣ್ಣದ ಕೊಳಲ ಭಾವಿಸಿ ನೋಡಬಾರದೆ ಅ.ಪ.

ಕೂಡಿಹ ಸೋಗೆಗರಿಯ ಕಡುಸೊಂಪು
ಸೊಗಸುವಡೆದ ಸುಳಿಗುರುಳಿನ ಗುಂಪು
ಆಡುವ ಮುರುಹು ಮಾಗಾಯ್ಗಳ ಪೆಂಪು
ಕೂಡಿ ಕುಣಿವ ಕುಡಿಹುಬ್ಬಿನಲಂಪು ೧

ಕೊಳಲೆಡೆಗೆಡೆಗೆ ತೋರುವ ಕೆಂಬೆರಳು
ಕೊನಬು ವಡೆದ ಕೊಂಕಿದ ಗೆರೆಗೊರಳು
ಥಳಥಳಿಸುವ ತೇಲುವ ಕಣ್ಣರಳು
ತನುಗಂಪನು ಸೂಸುವ ಸುಯ್ಯೆಲರು ೨

ಸಿರಿಯೆದೆಯಲಿ ತೊಳಲುವ ಪುಲಿಯುಗುರು
ಸಿಂಗರಿಸಿದ ಸಿರಿ ಗಂಧದ ತಿಗುರು
ಕೊರಳ ದಂಡೆಯ ತುಳಸಿಯ ಹೊಸ ಚಿಗುರು
ಕೊನೆ ಮುಸುಕಲು ಪೊನ್ನುಗುರಿನ ಪೊದರು ೩

ಮುಳಿದು ಯಶೋದೆ ಕಟ್ಟಿದ ಪೊಡೆದಾರ
ಮುದ್ದು ಪೊಳೆಯನೇವಳದುಡಿದಾರ
ಬಳಸಿದ್ದವಳಸರದ ಶೃಂಗಾರ
ಬಣ್ಣದುಡಿಯ ಬಿಗಿದುಟ್ಟ ವೈಯಾರ ೪

ಒಂದಡಿ ನೆಲದೊಳು ನಿಂದಿಹ ನಿಲುವು, ಮ–
ತ್ತೊಂದಡಿ ಸಾರ್ಚಿಪ ಬಲು ಗೆಲುವು
ಮುಂದೆ ಪಶುಗಳ ಮನ್ನಿಪನಿಲವು
ತಂದೆ ಶ್ರೀಕೃಷ್ಣನಂದಿಗೆ ಪಾದದೊಲವು ೫

## ೧೦೪

ಕರೆತಾರೆಲೆ ರಂಗನ ಶ್ರೀಹರಿಯ ನೀ
ಕರೆತಾರೆಲೆ ರಂಗನ ಪ

ಕರೆದು ತಾರೆಲೆ ಕಮಲನಾಭನ
ಕರೆದು ತಾರೆಲೆ ಕರುಣನಿಧಿಯನು
ಕರೆದು ತಾ ಕಾಲಲ್ಲಿ ಗಂಗೆಯ
ಸುರಿದ ಬಾಲ ಬ್ರಹ್ಮಚಾರಿಯ ಅ.ಪ

ಮಧು ಕೈಟಭಾಸುರರ ಸಂಹರಿಸಿದ,
            ಮತ್ಸ್ಯಾವತಾರನನು
ಮುದದಿ ಮಂದರಗಿರಿಯನೆತ್ತಿದ
ಸುರರಿಗಮೃತವನಿತ್ತ ಕೂರ್ಮನ
ಧರೆಯನುದ್ಧರಿಸಿದ ವರಾಹನ
ತರುಣಿ ನೀನೀಗ ತಂದು ತೋರೆಲೆ ೧

ಬಾಲನಿಗೊಲಿದವನ,
    ಭಕ್ತ ನಿಧಿಯಾದ ನರಸಿಂಹನ
ಧರೆಯ ನೀರಡಿ ಅಳೆದ ವಾಮನ
ದೊರೆಯ ನಾನಿನ್ನೆಂದು ಕಾಂಬೆನೆ
ಭರದಿ ಭಾರ್ಗವನಾದ ರಾಮನ
ತರುಣಿ ತ್ವರಿತದಿ ತಂದು ತೋರೆಲೆ ೨

ದಶಶಿರ ನಳಿದವನ ಗೋಕುಲದಲ್ಲಿ,
            ದಧಿಘೃತ ಮೆದ್ದವನ
ದುರುಳ ತ್ರಿಪುರರ ಗೆಲಿದ ಬೌದ್ಧನ
ಹರುಷದಲಿ ಹುಯವೇರಿ ಮೆರೆದನ
ಸುಜನ ರಕ್ಷಕನಾದ ಕೃಷ್ಣನ
ಸುದತಿ ನೀನೀಗ ತಂದು ತೋರೆಲೆ ೩

## ೨೧೮

ಕರ್ಪೂರದಾರತಿಯ ತಂದೆತ್ತಿರೆ ಚೆಲ್ವ
ಸುಪ್ರಕಾಶಗೆ ಸುಜನರ ಕಾಯ್ವಗೆ
ಪಾಂಡವಭಾವಗೆ ದೇವರ ದೇವಗೆ
ನಿರ್ಜರೇಂದ್ರನ ಬಲಿ ಗರ್ಜಿಸುತಿರೆ ಕಂಡು
ಅರ್ಜುನಪ್ರಿಯ ತಾನು ಕುಬ್ಜನಾಗಿ
ಹೆ್ಜ್ಜೆ ಭೂಮಿಯ ಬೇಡಿ ಬಲಿಯ ಗರ್ವವನು
ನಿರ್ಜಿಸಲು ಬಂದ ವಾಮನಗೆ ನಿಸ್ಸೀಮನಿಗೆ
    ಪೂರ್ಣ ಕಾಮನಿಗೆ ೧

ನಳಿನನಾಭನೆಂದು ತಿಳಿದು ಬೇಗನೆ ಬಲಿ
ಕೆಳದಿಯ ಕರೆದುದಕವತರಿಸಿ
ಚಲುವ ಪಾದವ ತೊಳೆದಿಳೆಯ ದಾನವ ಮಾಡೆ

ನಳಿನಜಾಂಡಕ್ಕಾಗಿ ಬೆಳೆದವಗೆ ಬಹು ತಳೆದವಗೆ-
ಭೂಮಿಯಳೆದವಗೆ ೨

ಬಲಿಯ ಭಕ್ತಿಗೆ ಮೆಚ್ಚಿ ಚೆಲುವ ಉಡುಪಿನ ಕೃಷ್ಣ
ಉಳಿದ ಭೂಮಿಯ ತೋರೆನ್ನುತ ನುಡಿಯೆ
ಸತಿ ನಾಚಿಕೆಯಿಂದ ತನ್ನಳೆದುಕೋ ಎನ್ನ
ತಲೆಯ ಮೆಟ್ಟಿದ ಬಹು ವಿಕ್ರಮಗೆ ಪರಾಕ್ರಮಗೆ ತ್ರಿವಿಕ್ರಮಗೆ ೩

೧೩೩

ಕಾಣದೆ ನಿಲ್ಲಲಾರೆ, ಕಮನೀಯ ಮೂರುತಿಯ
ಪ್ರಾಣೇಶನ ತೋರೆ ಗಿಣಿಯೆ ಪ

ಮಾಣಿಕ್ಯ ಪದಕವ ಮನ್ನಿಸಿ ನಿನಗೀವೆ
ಜಾಣೆ ಕೃಷ್ಣನ ತೋರೆ ಗಿಣಿಯೆ ಅ.ಪ.

ಮಕರಕುಂಡಲಧರನ ಮಕರಧ್ವಜನ ಪಿತನ
ಮಕುಟ ಭೂಷಣನ ತೋರೆ ಗಿಣಿಯೆ
ಮಕರಾಕ್ಷ ಸಂಹರನ ಮಕರಾರಿ ರಕ್ಷಕನ
ಮಕರ ಶಿಕ್ಷಕನ ತೋರೆ ಗಿಣಿಯೆ ೧

ಇಂದುಕುಲ ಪಾವನನ ಇಂದು ರವಿಲೋಚನನ
ಇಂದು ನೀ ಕರೆತಾರೆ ಗಿಣಿಯೆ
ಇಂದುಶೇಖರನುತನ ಇಂದಿರೆಯರಸನ
ತಂದು ತೋರೆ ಮುದ್ದುಗಿಣಿಯೆ ೨

ಒಂದು ನಿಮಿಷವೊಂದು ಯುಗವಾಗಿ ತೋರಿತೆ
ಸೌಂದರ್ಯನ ತೋರೆ ಗಿಣಿಯೆ
ಮಂದಮಾರುತ ಸೋಕೆ ಮರುಳುಗೊಂಡೆನೆ ಎನ್ನ
ಮಂದಿರಕೆ ಕರೆತಾರೆ ಗಿಣಿಯೆ ೩

ಕಾಯಜನ ಬಾಣದಲಿ ಕಾಯವೆಲ್ಲವು ಬಹಳ
ಘಾಯವಾಯಿತು ನೋಡೆ ಗಿಣಿಯೆ
ಮಾಯೆಗಳ ಮಾಡದೆ ಮಮತೆಯಿಂದಲಿ ಎನ್ನ
ನಾಯಕನ ಕರೆತಾರೆ ಗಿಣಿಯೆ ೪

ಪಂಕಜೋದ್ಭವ ಪಿತನ ಪಂಕಜನಯನನ
ಪಂಕಜನಾಭನ ತೋರೆ ಗಿಣಿಯೆ
ಪಂಕಜಾಕ್ಷ ಸಿರಿಕೃಷ್ಣನ ಪದಪದ್ಮ
ಶಂಕೆಯಿಲ್ಲದೆ ತೋರೆ ಗಿಣಿಯೆ ೫

### ೧೩೪

ಕಾಳಿಂಗನಾ ಮೆಟ್ಟಿ ನಾಟ್ಯವಾಡಿದ ಕಂಜನಾಭ ಕೃಷ್ಣನು ಪ

ಕಾಳಿಂಗನಾ ಮೆಟ್ಟಿ ಆಡಿದ ಭರದಲ್ಲಿ
ಶ್ರೀವತ್ಸ ಉರದಲ್ಲಿ ಕೊರಳಲ್ಲಿ ವನಮಾಲೆ
ತರಳತನದಲ್ಲಿ ಯಮುನೆಯ ಮಡುವಿನಲ್ಲಿ
ಆಡುತ್ತ ಪಾಡುತ್ತ ಅ.ಪ.

ಕಾಲಲಿ ಗೆಜ್ಜೆ ಘಲುಘಲು ಘಲುಕೆನ್ನೆ
ಫಾಲದಿ ತಿಲಕವು ಹೊಳೆ ಹೊಳೆಯುತ್ತ
ಜ್ವಲಿತ ಮಣಿಮಯ ಲಲಿತ ಪದಕಹಾರ
ಜ್ವಲಿತ ಕಾಂತಿ ಬೆಳಗುತ ದಿಕ್ಕುಗಳಲ್ಲಿ ೧

ಸುರರು ದುಂದುಭಿಯ ಢಣಢಣ ಢಣರೆಂದು
ಮೊರೆಯೆ ತಾಳಗಳು ಝಣಝಣ ಝಣಾರೆಂದು
ಹರಬ್ರಹ್ಮ ಸುರರು ತಥೈತಥೈಯೆನ್ನಲು
ನಾರದ ತುಂಬುರ ಸಿದ್ಧರು ವಿದ್ಯಾ-
ಧರರು ಅಂಬರದಲ್ಲಿ ಆಡುತ್ತ ಪಾಡಲು ೨

ಯೋಗಿಗಳೆಲ್ಲ ಜಯ ಜಯ ಜಯಯೆನ್ನೆ
ಭೋಗಿಗಳೆಲ್ಲ ಭಯಭಯ ಭಯವೆನ್ನೆ
ನಾಗಕನ್ಯೆಯರು ಅಭಯ ಅಭಯವೆನ್ನೆ
ನಾಗಶಯನ ಸಿರಿಕೃಷ್ಣ ಜನನಿಯ ಕಂಡು
ಬೇಗನೆ ಬಿಗಿದಪ್ಪಿ ಮುದ್ದನು ತೋರಿದ ೩

### ೨೦೭

ಕೃಷ್ಣ ಕೃಷ್ಣ ಕೃಷ್ಣಯೆಂದು ಮೂರುಬಾರಿ ನೆನೆಯಿರೊ ಪ

ಸಂತುಷ್ಟವಾಗಿ ಮುಕುತಿ ಕೊಟ್ಟು ಮಿಕ್ಕ ಭಾರ
ಹೊರುವನೋ ಅ.ಪ

ಸಕಲ ವೇದ ಶಾಸ್ತ್ರ ಪಠಿಸಿ ಸಾರವನ್ನು ತಿಳಿದರೇನು
ಮಕರ ಕುಂಡಲಧರನ ನಾಮಕೆ ಸರಿಯಿಲ್ಲವೊ ೧

ಕಮಲನಾಭನ ಚಿನ್ಹೆಯನ್ನು ಧರಿಸಿಕೊಂಡು ಮೆರೆಯಿರೊ
ಯಮನ ಭಟರು ನೋಡಿ ಅಂಜಿ ಅಡವಿ ಹೊಗುವರೋ ೨

ಜನ್ಮವೆತ್ತಿ ಮಧ್ವಮತವ ಅನುಸರಿಸಿ ನಡೆಯಿರೊ
ಸುಮ್ಮಾನದಿ ಸಿರಿಕೃಷ್ಣ ತನ್ನ ಲೋಕ ಕೊಡುವನೋ ೩

೧೩೫

ಕೃಷ್ಣಾ ನೀ ಬೇಗನೆ ಬಾರೊ
ಮುಖವನೆ ತೋರೋ ಪ

ಕಾಶೀ ಪೀತಾಂಬರ ಕೈಯಲಿ ಕೊಳಲು
ಪೂಸೀದ ಶ್ರೀಗಂಧ ಮೈಯೊಳಗಮ್ಮ ೧

ಉಡಿಯಲ್ಲಿ ಉಡಿಗೆಜ್ಜೆ ಬೆರಳಲಿ ಉಂಗುರ
ಕೊರಳಲಿ ಹಾಕಿದ ಹುಲಿಯುಗುರಮ್ಮ ೨

ತಾಯಿಗೆ ಬಾಯಲ್ಲಿ ಜಗವನ್ನೆ ತೋರಿದ
ಜಗದೋದ್ಧಾರಕ ನಮ್ಮ ಉಡುಪಿಯ ಶ್ರೀಕೃಷ್ಣ ೩

೧೩೬

ಕೇಳೆ ಯಶೋದೆ ನಿನ್ನ ಮಗನ ಲೂಟಿಯ ಪ

ತಾಳಲಾರೆವೆ ನಾವು ತರಳನ ದುಡುಕು
ಪೇಳಬಾರದೆ ಗೋಪಾಲಕೃಷ್ಣಗೆ ಬುದ್ಧಿ
ಅಮ್ಮಾ-ಇದು ಚೆನ್ನಾಯಿತು ತಿಳಿದವನಲ್ಲವೆ
ನೀ ಕೇಳೆ ಯಶೋದೆ ನಿನ್ನ ಮಗನ ಲೂಟಿಯ ಅ.ಪ.

ಬಾಲಕನೆಂದು ಲಾಲಿಸಿ ಕರೆದರೆ
ಮೂಲೆ ಮನೆಯೊಳಗೆ ಪೊಕ್ಕು
ಪಾಲು ಮೊಸರು ಬೆಣ್ಣೆಗಳ ಮೆದ್ದು
ಕೋಲಲಿ ನೀರ ಕೊಡಗಳೊಡೆದ
ನೀಲವರ್ಣದ ದಿಟ್ಟ ನಿತ್ಯವೀ ಹೋರಾಟ
ಬಾಲೆಯರಲ್ಲಿ ನೋಟ ಬಹಳ ಬಗೆಯಲ್ಲಿ
ತಿಳಿದೆವೆಂದರೆ ಮೇಲೆ ಎಂಜಲುಗುಳಿ ಪೋದ
ಅಮ್ಮಾ ಇದು ಚೆನ್ನಾಯ್ತು ತಿಳಿದವನಲ್ಲವೆ
ನೀ ಕೇಳೆ ಯಶೋದೆ ನಿನ್ನ ಮಗನ ಲೂಟಿಯ ೧

ಮತ್ತೆ ಭಾಮಿನಿಯರೆಲ್ಲರು ಕೂಡಿ
ಮಡುವಿನೊಳು ಜಲಕ್ರೀಡೆಯನಾಡಲು
ಚಿತ್ತಚೋರ ನಮ್ಮ ಸೀರೆಗಳೆಲ್ಲವ
ಹೊತ್ತು ಕೊಂಡು ಮರವನೇರಿದ
ಬತ್ತಲೆ ಭಾಮೆಯರೆಲ್ಲ ಬೇಡಿದರೆ ಕೊಡನಲ್ಲ

ಯುಕ್ತಿ ಬಹುಬಲ್ಲ ಹತ್ತಿಲಿ ಬಂದು ಕರ
ವೆತ್ತಿ ಮುಗಿದರೆ ವಸ್ತ್ರ ಕೊಡುವೆನೆಂದ
ಅಮ್ಮಾ ಇದು ಚೆನ್ನಾಯ್ತು ತಿಳಿದವನಲ್ಲವೆ
ನೀ ಕೇಳೆ ಯಶೋದೆ ನಿನ್ನ ಮಗನ ಲೂಟಿಯ ೨

ಸದ್ದು ಮಾಡದೆ ಸರಿ ಹೊತ್ತಿಲಿ
ನಿದ್ದೆಗಣ್ಣಿಲಿ ನಾನಿರಲು
ಮುದ್ದು ಕೃಷ್ಣ ನಮ್ಮ ಮನೆಯವರಂತೆ
ಮುದದಿಂದಲೆನ್ನನು ತಾ ಕೂಡಿದ
ಎದ್ದು ನೋಡುವೆನಲ್ಲ ಆಹ ಏನೆಂಬುವರೆಲ್ಲ
ಬುದ್ಧಿ ಮೋಸ ಬಂತಲ್ಲ ಪೊದ್ದಿ ಸಲ್ಲಿಸಿದೆ
ಬುದ್ಧಿವಂತನೆಂದರೆ ಪರಿಹಾಸ್ಯ ಮಾಡಿ ನಗುವ
ಅಮ್ಮಾ ಇದು ಚೆನ್ನಾಯ್ತು ತಿಳಿದವನಲ್ಲವೆ
ನೀ ಕೇಳೆ ಯಶೋದೆ ನಿನ್ನ ಮಗನ ಲೂಟಿಯ ೩

## ೧೩೭

ಕೊಡೋ ಕೊಡೋ ಕೊಡೋ
ತಡಮಾಡಬೇಡ ಹರಿ
ಮಡದಿಯರುಡುವ ಸೀರೆಗಳ ಪ

ದೀನರಕ್ಷಕ ಎಮ್ಮ ಮಾನವನುಳಿಸೋ
ಮಾನಿನಿ ಲೋಲಾ ಮಮತೆಯ ನಿಲಿಸೋ ೧

ಭಂಡು ಮಾಡದಿರೊ ಭಾವಜನೈಯನೆ
ಪುಂಡರೀಕಾಕ್ಷ ನೀ ದಯಮಾಡೊ ೨

ಗರತಿಯರನು ಗೇಲಿ ಮಾಡುವುದೇಕೊ
ಸರಸಿಜನಾಭ ಶ್ರೀಕೃಷ್ಣರಾಯ ೩

## ೧೩೮

ಕೊಳಲನೂದುವ ಚದುರನ್ಯಾರೆ ಪೇಳಮ್ಮಯ್ಯ
ತಳಿರಂದದಿ ತಾ ಪೊಳೆವ ಕರದಿ ಪಿಡಿದು ಪ

ನಾದದಿ ತುಂಬಿತು ಗೋವರ್ಧನಗಿರಿ
ಯಾದವಕುಲ ಘನ ಒರೆದಿತು ಖಗಕುಲ

ಸಾಧಿಸಿ ನೋಡಲು ಕೃಷ್ಣನ ಈಗಲೆ
ಸಾಧ್ಯವೆ ನೀ ಬೃಂದಾವನದೊಳು ೧

ಮೇವು ಮರೆತವು ಗೋವುಗಳೆಲ್ಲವು
ಸಾವಧಾನದಿ ಹರಿದಳು ಯಮುನಾ
ಆವು ಕಾವುತಲಿ ಗೋವಳರೆಲ್ಲರ
ಹಾವ ಭಾವದಲಿ ಬೃಂದಾವನದೊಳು ೨

ಸುರರು ಸುರಿದರಾಕಾಶದಿ ಸುಮಗಳ
ಸರಿದು ಪೋಗಿ ನೋಡೆ ಬೃಂದಾವನದೊಳು
ಸಾರಿ ಸಾರಿ ಈ ಕೃಷ್ಣನು ಈಗಲೆ
ತುರಗಳ ಕಾಯ್ವ ಕದಂಬ ವನದೊಳು ೩

## ೧. ದೇವದೇವತಾ ಸ್ತುತಿ

### (ಅ) ಶ್ರೀ ಗಣೇಶ ಸ್ತವನ

೧೦೦

ಗಜಮುಖನೆ ಸಿದ್ಧಿದಾಯಕನೆ ವಂದಿಪೆ ಶರಣು
ಭಜಕರಿಷ್ಟವ' ಕೊಡುವೊ ಗ'ಣನಾಥ ಶರಣು ಪ.

ತ್ರಿಜಗ ವಂದಿತನಾದ ದೇವ ದೇವನೆ ಶರಣು
ಸುಜನರಿಗೆ ವಿಘ್ನವನು ಪರಿಹರಿಪೆ ಶರಣು ಅ.ಪ

ಮಂದ ಮತಿಯನು ಬಿಡಿಸಿ ಚಂದ ಜ್ಞಾನವನಿತ್ತು
ಇಂದಿರೇಶನ ಪಾದ ಹೊಂದಿಪ್ಪ ತೆರದಿ
ಸುಂದರಾಂಗನೆ ನಿನ್ನ ಪದದ್ವಂದ್ವಕೆರಗುವೆನು
ಸಂದೇಹ ಮಾಡದಲೆ ಇಂದು ಕರುಣಿಪುದು ೧

ಹರನ ತನಯನೆ ಕರುಣಾಕರನೆ ಸುರನರ ವರದ
ಮೊರೆಯ ಲಾಲಿಸಿ ಎನ್ನ ಕರಗಳನೆ ಪಿಡಿದು
ಪೊರೆಯದಿದ್ದರೆ ಬಿಡೆನು ನೆರೆದೆ ನಿನ್ನಡಿಗಳನು
ತ್ವರಿಯದಿಂದಲಿ ನೋಡು ಶರಣೆಂಬೆ ನಿನಗೆ ೨

ಸಿದ್ಧಿದಾಯಕ ನಿನ್ನ ಹೊದ್ದಿ ಮೆರೆವೆನೊ ನಾನು
ಅಬ್ಧಿಶಯನನ ಮಹಿಮೆ ಶಬ್ದದಲಿ ಪೇಳ್ವ
ಶುದ್ಧಮತಿಯನು ಕೊಟ್ಟು ಉದ್ಧರಿಸಬೇಕೆನ್ನ
ಮಧ್ವವಲ್ಲಭವೇಣುಕೃಷ್ಣಗತಿಪ್ರಿಯ ೩

೧೯೦

ಗೋವಿಂದ ಗೋವಿಂದ ಕೃಷ್ಣ ಹರಿ ಪ

ಗೋವಿಂದ ಮುಕುಂದ ಗೋಪಾಲಕೃಷ್ಣ ಅ.ಪ

ಕಡೆಗಣ್ಣಿಲಿಂದೊಮ್ಮೆ ನೋಡೋ ನಿ-
ನ್ನಡಿಗೆರಗುವೆನೋ ನೀ ದಯಮಾಡೋ
ಬಿಡದೆನ್ನ ನಿನ್ನವರೊಳು ಕೂಡೋ ಎ-
ನ್ನೊಡೆಯ ನಿತ್ಯಾನಂದ ನೀ ನಲಿದಾಡೋ ೧

ಮಕ್ಕಳಿಗೊಡೆಯ ನೀನಾಗಿ ಹಸು
ಮಕ್ಕಳ ಕೂಡೆ ನೀನಾಡ ಹೋಗಿ
ಸಿಕ್ಕದೆ ಬಹು ದಿನಕಾಗಿ ದಿಂಧಿ-
ಮಿಕ್ಕೆಂದು ಕುಣಿಸುವೆ ಬಾ ಚೆನ್ನಾಗಿ ೨

ಹೃದಯ ಕಮಲದೊಳಗೆನ್ನ ನಿನ್ನ
ಪದಕಮಲವನೀ ದಯೆಗೈಯೊ ಮುನ್ನ
ಚದುರಕುಣಿಯೊ ಚೆಲ್ವರನ್ನ ವಿ-
ಬುಧರೊಡೆಯನೆ ನಿತ್ಯಾನಂದ ಕೃಷ್ಣ ೩

೧೯೧

ಚಿತ್ತಗೊಟ್ಟು ಸಿರಿಕೃಷ್ಣ ಕಾಯಿ ಕಂಡ್ಯ ಪ

ಮತ್ತೊಬ್ಬ ನಾನಲ್ಲ ನಿನ್ನ ಭೃತ್ಯರ ಭೃತ್ಯ ಅ.ಪ

ಕಾಲನವರ ಮುನ್ನ ಮುಂಚೂಣಿ ದಾಳಿಗೆ
ಕೀಳು ಮನಮಂತ್ರಿ ಮೂಲೆಯ ಪೊಗಲು
ಮೂಲ ಬಲದಾಳಿಗೆ ಮುರಿದು ನಾನೋಡಲು
ಕಾಲಗೆಟ್ಟು ನಾನಿಹ ಕಾಲದಲ್ಲಿ ೧

ಪಿತ್ತವೆಂಬ ಕಿಚ್ಚು ವಾತಕೂಡ್ವೆಚ್ಚಿತು
ಹತ್ತಿಕೊಂಡು ದೇಹಪುರ ಸುಡುವಾಗ
ಮತ್ತೆ ಶ್ಲೇಷ್ಮವು ಕೂಡಿ ಸುತ್ತು ಮುತ್ತೆಳೆವಾಗ
ಎತ್ತ ಹೋಗಲೆಂಬ ಸಂಕಟದೊಳಗೆ ೨

ತಿಂದೋಡಿ ಬಂಧುಗಳೆಲ್ಲ ಕೈಬಿಟ್ಟರು
ಮುಂದೆಮದೂತರು ಬಂದು ನಿಂದಾಗ
ಎಂದಿಗಾದರು ಒಮ್ಮೆ ನೆನೆದುದ ಕೈಗೊಂಡು
ಹಿಂದಿಟ್ಟುಕೊಂಡೆನ್ನ ಕಾಯಿ ಕಂಡ್ಯ ಕೃಷ್ಣ ೩

## ೨೦೮

ಛೀ ಛೀ ಮನವೆ ನಾಚದ ತನುವೆ
ನೀಚವೃತ್ತಿಯ ಬಿಟ್ಟುನೆನೆ ಕಂಡ್ಯ ಹರಿಯ ಪ.

ಕಿವಿಗೊಟ್ಟು ಗಂಟೆಯ ನಾದಕ್ಕೆ ಹುಲ್ಲೆಯ
ನಿವಹ ಬಲೆಗೆ ಸಿಕ್ಕಿ ಬಿದ್ದುದನರಿಯ
ನವ ಯೌವನೆಯರ ಕೋಕಿಲಾಲಾಪದ
ಸವಿನುಡಿಗೇಳದಚ್ಯುತನ ಕಥೆ ಕೇಳೊ ೧

ಪಣ್ಣೆಂದು ಭ್ರಮಿಸಿ ಪತಂಗ ದೀಪದಿ ಬಿದ್ದು
ಉಣ್ಣದುರಿವುದ ನೀ ಕಂಡು ಕಂಡರಿಯ
ಬಣ್ಣದಬಲೆಯರ ರೂಪಿಗೆ ಮರುಳಾಗಿ
ಮಣ್ಣ ತಿನ್ನದೆ ಮಾಧವನ್ನ ನೀ ಸ್ಮರಿಸೋ ೨

ಗಾಣದ ತುದಿಯ ಮಾಂಸವ ಮೆಲ್ಲುವ ಮತ್ಸ್ಯ
ಪ್ರಾಣವ ಬಿಡುವುದಂಗನೆಯರಧರವ
ಮಾಣದೆ ಬಯಸಿ ಕೆಡದೆ ಶ್ರೀಮನ್ನಾರಾ-
ಯಣ ನಾಮಾಮೃತಸವಿ ಎಲೆ ಮನವೆ ೩

ಅಳಿಯೆದ್ದು ಕರಿ ಕರಿಣಿಯ ಸ್ಪರುಶಕೆ ಪೋಗಿ
ಕುಳಿಯ ಬಿದ್ದುದ ನೀ ಕಂಡು ಕಂಡರಿಯ
ಲಲನೆಯರಾಲಿಂಗನಕೆ'ಳೆಸದೆ ಸಿರಿ-
ಲಲನೇಶನಂಘ್ರಿಯ ಅಪ್ಪಿಕೋ ಮನವೆ ೪

ಅಳಿ ಪರಿಮಳಕ್ಕಾಗಿ ನಳಿನದೊಳಗೆ ಸಿಕ್ಕಿ
ಅಳಿವಂತಂಗನೆಯ ಮೃಗಂಧವ ಬಯಸಿ
ಬಳಲದೆ ವರದ ಶ್ರೀಕೃಷ್ಣನಂಘ್ರಿಯೊಳಿಪ್ಪ
ತುಳಸಿಯನಾಘ್ರಾಣಿಸು ಕಂಡ್ಯಮನವೆ ೫

## ೧೯೨

ಜನುಮ ಜನುಮದಲ್ಲಿ ಕೊಡು ಕಂಡ್ಯ ಹರಿಯೆ ಪ

ಅನಿಮಿತ್ತ ಬಂಧು ಕೃಷ್ಣ ದಯದಿಂದಲೆನಗೆ ಅ.ಪ

ಮೆರೆವ ಊರ್ಧ್ವ ಪುಂಡ್ರ ಎರಡಾರು ನಾಮವು
ಕೊರಳೊಳು ತುಲಸಿಯ ವನಮಾಲೆಯು

ಮೆರೆವ ಶಂಖಚಕ್ರ ಭುಜದೊಳೊಪ್ಪುತ ನಿಮ್ಮ
ಸ್ಮರಿಸುತ್ತ ಹಿಗ್ಗುವ ವೈಷ್ಣವ ಜನುಮವ ೧

ಹರಿಯೆ ಸರ್ವೋತ್ತಮ ರಾಣಿ ಲಕುಮಿ ಬೊಮ್ಮ
ಹರ ಇಂದ್ರಾದ್ಯಖಿಳರು ತವ ಸೇವಕರು
ವರ ತಾರತಮ್ಯ ಪಂಚ ಭೇದ ಸತ್ಯವೆಂದು
ನೆರೆ ಪೇಳುವ ವಾಯುಮತದ ಸುಜ್ಞಾನವ ೨

ಸಕಲ ವಿಬುಧೋತ್ತಮರಲ್ಲಿ ನಮ್ರತೆಯು
ಸುಖ ತೀರ್ಥರಲಿ ಮುಖ್ಯ ಗುರು ಭಾವನೆಯು
ಮುಕುತಿ ಪ್ರದಾಯಕ ಸಿರಿ ಕೃಷ್ಣ ನಿನ್ನಲ್ಲಿ
ಅಕಳಂಳವಾದ ನವವಿಧ ಭಕುತಿಯನು ೩

## ೧೫೯

ಜಯ ವಾಯು ಹನುಮಂತ ಜಯ ಭೀಮ ಬಲವಂತ ಪ

ಜಯಪೂರ್ಣ ಮತಿವಂತ ಜಯ ಸಲಹೊ ಸಂತ ಅ.ಪ.

ಅಂಜನೆಯಲಿ ಹುಟ್ಟಿ ಅಂದು ರಾಮನ ಸೇವೆ
ನಂದದಿಂದಲಿ ಮಾಡಿ ಕಪಿ ಬಲವ ಕೂಡಿ
ಸಿಂದು ಲಂಘಿಸಿ ಖಳರ ವನ ಭಂಗಿಸಿ ಸೀತೆ-
ಗುಂಗುರವ ಕೊಟ್ಟೆ ಲಂಕಾಪುರವ ಸುಟ್ಟೆ ೧

ಹರಿಗೆ ಚೂಡಾಮಣಿಯನಿತ್ತು ಹರಿಗಳ ಕೂಡಿ
ಶರಧಿಯನು ಕಟ್ಟಿ ಅರಿಬಲವ ಕುಟ್ಟಿ
ಉರಗ ಬಂಧನದಿಂದ ಕಪಿವರರು ಮೈಮರೆಯೆ
ಗಿರಿಯ ಸಂಜೀವನವ ತಂದು ಬದುಕಿಸಿದೆ ೨

ದ್ವಾಪರಾಂತ್ಯದಿ ಪಾಂಡು ಭೂಪನಾತ್ಮಜನೆನಿಸಿ
ಶ್ರೀ ಪಾರ್ಥಸಾರಥಿಯ ಭಜಕ ನೀನಾದೆ
ಪಾಪಿ ಮಾಗಧ ಬಕ ಕೀಚಕ ಹಿಡಿಂಬಕರ
ಕೋಪದಿಂದಲಿ ತರಿದೆ ಮೂಜ್ಜಗದಿ ಮೆರೆದೆ ೩

ಧುರದಲಿ ದುರ್ಯೋಧನನ ಬಲವನು ತರಿದೆ
ಅರಿತು ದುಶ್ಶಾಸನನ ಒಡಲನ್ನು ಬಗೆದೆ
ಉರವ ತಪ್ಪಿಸಿ ಕೌರವನ್ನ ತೊಡೆಗಳ ಮುರಿದೆ
ಹರಿಯ ಕಿಂಕರ ಧುರಂಧರರಗಾರು ಸರಿಯೆ

ಕಲಿಯುಗದಲಿ ಕಳ್ಳರುದಿಸಿ ದುರ್ಮತಗಳನು
ಬಲಿಸಿ ಶ್ರೀಹರಿಯ ಗುಣಗಳನು ಮರೆಸಿ

ಕಲಿಯನನುಸರಿಸಲು ಗುರುವಾಗಿ ಅವತರಿಸಿ
ಖಳರ ದುರ್ಮತ ಮುರಿದೆ ಶ್ರೀಕೃಷ್ಣಪರನೆಂದೆ

**೧೬೦**

ಜಾಣ ನೀನಹುದೋ ಗುರು
ಮುಖ್ಯಪ್ರಾಣ ನೀನಹುದೊ  ಪ

ರಾಣಿ ಭಾರತೀ ರಮಣ ನಿನಗೆಣೆ
ಕಾಣೆ ತ್ರಿಭುವನದೊಳಗೆ ಸರ್ವ
ಪ್ರಾಣಿಗಳ ಹೃದಯದಲಿ ಮುಖ್ಯ
ಪ್ರಾಣನೆಂದೆನಿಸಿದೆಯೊ ಧಿಟ್ಟ  ಅ.ಪ

ಧೀರ ನೀನಹುದೋ ವಾಯುಕುಮಾರ ನೀನಹುದೊ
ಸಾರಿದವರ ಮನೋರಥಂಗಳ
ಬಾರಿ ಬಾರಿಗೆ ಕೊಡುವೆನೆನುತಲಿ
ಕ್ಷೀರನದಿ ತೀರದಲಿ ನೆಲೆಸಿಹ
ಮಾರುತಾವತಾರ ಹನುಮ  ೧

ಧಿಟ್ಟ ನೀನಹುದೊ ಬೆಟ್ಟವ ತಂದಿಟ್ಟವ ನೀನಹುದೊ
ರೆಟ್ಟೆ ಹಿಡಿದಕ್ಷಯ ಕುಮಾರನ
ಕುಟ್ಟಿ ದೈತ್ಯರ ಕೆಡಹಿ ಬೇಗದಿ
ಸುಟ್ಟು ಲಂಕೆಯ ಸೀತೆಗುಂಗುರ
ಕೊಟ್ಟೆ ಜಗಜಟ್ಟಿ ಹನುಮ  ೨

ಚಂಡ ನೀನಹುದೊ ದುರಿತ ಮಾರ್ತಾಂಡ ನೀನಹುದೊ
ಕುಂಡಲ ಕಿರಿಘಂಟೆ ಉಡಿಯಲಿ
ಪೆಂಡೆ ನೂಪುರ ಕಾಲಲಂದಿಗೆ
ತಂಡ ತಂಡದಿ ಕೃಷ್ಣನಂಘ್ರಿ
ಪುಂಡರೀಕಕೆ ಕೈಯ ಮುಗಿದ  ೩

**೧೩೯**

ತಣ್ಣನೆ ಹೊತ್ತಿಲಿ ನಾವು ಬೆಣ್ಣೆ ತೆಗೆಯುವ ಸಮಯದಿ
ಚಿಣ್ಣ ಬಂದು ಕಣ್ಣು ಮುಚ್ಚಿ ಬೆಣ್ಣೆ ಸವಿದು ಪೋದನೆ  ಪ

ಹಿಂಡುಗೆಳೆಯರ ಕೂಡಿಕೊಂಡು
ಬಂದು ಬಾಗಿಲೊಳಾಡುತ
ಚೆಂಡು ಬುಗುರಿಯ ಹುಡುಕುತ ನಮ್ಮ
ದುಂಡು ಕುಚಗಳ ಪಿಡಿದನೆ  ೧

ಆಕಳ್ಹಾಲನು ಕಾಸಿ ನಾವು
    ಮೀಸಲೆಂದಿಟ್ಟಿದ್ದೇವೆ
ಜೋಕೆಯಿಂದಲಿ ಕೃಷ್ಣ ಬಂದು
    ಮೀಸಲಳಿದು ಪೋದನೇ ೨

ಇದ್ದ ಮಾನವನುಳುಹಿಕೊಂಡು
    ಎದ್ದು ಪೋಗುವುದುಚಿತವೆ
ಬುದ್ಧಿ ಪೇಳಬಾರದೆ ನಮ್ಮ
    ಮುದ್ದು ಶ್ರೀಪತಿ ಕೃಷ್ಣಗೆ ೩

## ೧೪೦

ತುಂಬಿತು ಬೆಳೆದಿಂಗಳು-ಈ ವನದೊಳು
ತುಂಬಿತು ಬೆಳೆದಿಂಗಳು ಪ

ತುಂಬಿತು ಬೆಳೆದಿಂಗಳೀವನದೊಳಗೆಲ್ಲ
ಅಂಬುಜನಾಥನು ಬಾರ ಕಾಣಕ್ಕ ಅ.ಪ.

ಮಾಗಿ ಹೋಗಿ ವಸಂತವು ಬರುತಿದೆ
ಕೋಗಿಲೆ ತುಂಬಿಲ್ಲಿ ಕೂಗುತಿದೆ
ಆಗಲೆ ಎಳೆಮಾವು ತಳಿರೇಳುತಲಿದೆ
ನಾಗಶಯನ ಕೃಷ್ಣ ಬಾರ ಕಾಣಕ್ಕ ೧

ಕಟ್ಟಿದ್ದ ಬಿಳಿಯೆಲೆ ತೊಟ್ಟಾರುತಲಿದೆ
ಪಟ್ಲ ಜಾಜಿಯ ಮೊಗ್ಗು ಅರಳುತಿದೆ
ಬಟ್ಟೆ ಬಟ್ಟೆಲಿ ನೋಡಿ ಕಣ್ಣು ಝುಮ್ಮಿಟ್ಟಿತು
ಧಿಟ್ಟತನದ ರಂಗ ಬಾರ ಕಾಣಕ್ಕ ೨

ಕಾದ ನೀರು ಎಲ್ಲ ಆರಿ ಹೋಗುತಲಿದೆ
ಕಾಯ್ದ ಮಲ್ಲಿಗೆ ಹೂವು ಬಾಡುತಿದೆ
ಮದನನ ಬಾಧೆಯು ಬಹಳವಾಗಿದೆ ಈಗ
ಮದನನೈಯನು ಕೃಷ್ಣ ಬಾರ ಕಾಣಕ್ಕ ೩

ಅಡವಿಲಿ ಕೆರೆಕಟ್ಟೆ ಕುಡಿವೋರಿಲ್ಲದೆ ಬತ್ತಿ
ನಡೆವೋರಿಲ್ಲದೆ ದಾರಿ ಹಸಗೆಟ್ಟಿತು
ಕಾಡಮಲ್ಲಿಗೆ ಹೂವ ಕುಯ್ದು ಮುಡಿವರಿಲ್ಲ
ನೋಡದೆ ಎನ್ನ ಜೀವ ಹಸಗೆಟ್ಟಿತಮ್ಮ ೪

ಹಾಸಿದ್ಹಾಸಿಗೆ ಮಂಚ ಹಸಗೆಟ್ಹೋಗುತಿದೆ
ಪೂಸಿದ ಶ್ರೀಗಂಧ ಬೆವರುತಿದೆ

ಲೇಸಾದ ನಮ್ಮೆದೆ ಮಿಂಚೇರುತಲಿದೆ
ವಾಸುದೇವನು ಕೃಷ್ಣ ಬಾರಕಾಣಕ್ಕ ೫

ಕಾಯ ಹೊಳವು ಮಾಡಿ ಕುಚವ ಸೋರೆಯಮಾಡಿ
ಮನವೆಂಬ ತಂತಿಯ ಹೂಡಿಕೊಂಡು
ಎರಡು ಕಂಗಳನ್ನು ಎರಡು ತಾಳವ ಮಾಡಿ
ಮೇಳಕೊಪ್ಪುವೆ ರಂಗ ಬಾರ ಕಾಣಕ್ಕ ೬

ಒಳದೊಡೆ ನಡುಗಿತೆ, ನೆರಿಯು ಹಾರುತಲಿವೆ
ಕಳಕಳಿಸುತಲಿದೆ ಕಳವಳವು
ಪುಳಕವಾಗುತಲಿದೆ ಕಳೆಯುಗುಂದುತಲಿದೆ
ನಳಿನಾಭನು ಕೃಷ್ಣ ಬಾರ ಕಾಣಕ್ಕ ೭

೧೪೧

ತುಳಸಿ ಮಧ್ಯದಿ ಇರುವ ಕೃಷ್ಣನ
ಬಳಸಿ ನೋಡುವ ಬನ್ನಿರೆ ಪ

ಗೊಲ್ಲ ಸತಿಯರ ಗಲ್ಲ ಪಿಡಿದು
ಎಲ್ಲ ನಟನೆಯ ತೋರುವ
ಫುಲ್ಲ ನಾಭನಮೆಲ್ಲ ಮೆಲ್ಲನೆ
ಎಲ್ಲ ಹೆಂಗಳು ನೋಡಿರೆ ೧

ಕಾಮಿ ಜನರಿಗೆ ಕಾಮಿತಾರ್ಥವ
ಪ್ರೇಮದಿಂದಲಿ ಕೊಡುತಿಹ
ಕಾಮನೈಯನ ಚರಣ ಕಮಲವ
ನಂಬಿ ಬದುಕುವ ಬನ್ನಿರೆ ೨

ಅಂಗರಾಗ ಶ್ರೀರಂಗ ಮಂಗಳ
ಸಿಂಗರದಿ ತಾ ನಿಂತಿಹ
ಮಂಗಳಾಂಗನ ಮಂಗಳಾರತಿ
ಎಲ್ಲ ಹೆಂಗಳು ನೋಡಿರೆ ೩

ಒಂದು ಕೈಯಲಿ ಗಂಧಪುಷ್ಪ ಮ–
ತ್ತೊಂದು ಕೈಯಲಿ ರಂಗನು
ಮಂದಹಾಸದಿ ಇಂದುಮುಖಿಯರಿ–
ಗ್ವೊಂದಿಸುವನತಿ ಚಂದದಿ ೪

ಶುಕ್ರವಾರದಿ ಪೂಜೆಗೊಂಬುವ
ಚಕ್ರಧರ ಶ್ರೀಕೃಷ್ಣನು

ನಕ್ರಹರ ತ್ರಿವಿಕ್ರಮನು ಮನ-
    ವಾಕ್ರಮಿಸಿ ಸುಖ ಕೊಡುತಿಹ ೫

## ೧೯೩

ತೊಂಡನು ಕಂಡುದ ಬಿನ್ನೈಸುವೆನು
ಪಾಂಡವ ಪ್ರಿಯ ಎನ್ನ ತಪ್ಪು ಕಾಯಯ್ಯ ಪ

ಹರಿ ನಿನ್ನ ನಾಮ ಕಾಮಧೇನುವಿಗೆ
ದುರಿತದೊಟ್ಟಿಲು ಮೇವು ಭವಾಂಬುಧಿಯು
ಅರಸಿ ಕುಡಿವ ನೀರೆರೆವಡೆನ್ನಲ್ಲಿ
ಭರಿತವಾಗಿರೆ ಒಲಿದು ಎನ್ನೊಳ್ಯಾಕಿರಿಸೆ ೧

ಮುನಿಗಳ ಮನದ ಮೊನೆಯಾದ ಕೊನೆಯಲ್ಲಿ
ಘನಭಕ್ತಿ ಪಾಶದಿ ಸಿಲುಕಲ್ಯಾಕೆ
ಎನ್ನ ಚಿತ್ತ ಚಂಚಲದುಯ್ಯಾಲೆಯಲಿ
ನಿನ್ನ ಮನಬಂದಂತೆ ಓಲ್ಯಾಡಲಾಗದೆ ೨

ಕರ್ಣರಂಧ್ರದಿ ಮನವನು ಪೊಕ್ಕು ಪಾಪವ
ನಿನ್ನವರಲಿ ತಳವರಸಲ್ಯಾಕೆ
ಎನ್ನೊಳ ಹೊರಗೆ ಪಾಪರಾಸಿಗಳಿವೆ
ನಿನ್ನ ಮನಬಂದಂತೆ ಸೂರೆಗೊಳ್ಳೆಲೊ ಕೃಷ್ಣ ೩

## ೧೦೪

ತೋರೆ ಬೇಗನೆ ತೋಯಜನಯನೆ
    ಮದವಾರಣ ಗಮನೆ ಪ

ಮಾರನ ತಾಪವ ಸೈರಿಸಲಾರೆನೆ
    ನೀರೆ ನಿನಗೆ ಮುತ್ತಿನ್ಹಾರವ ಕೊಡುವೆನೆ ಅ.ಪ

ನೀರೊಳು ಮುಳು ಮುಳುಗಾಡುತ ಬಂದು
    ಮಥಿಸಿದ ಪಯ ಸಿಂಧು
ಧಾರುಣಿ ಚಿಮ್ಮುತ ಮೇಲಕೆ ತಂದು
    ದನುಜನ್ನ ಕೊಂದು
ಮೂರುಪಾದವ ಬೇಡುತ ನಿಂದು
    ಮುನಿಕುಲದಲಿ ಬಂದು
ನಾರಿಬಿಟ್ಟು ಪರನಾರಿಯರಾಳಿದ
    ತೋರೆರಮಣಿ ಹಯವೇರಿ ಮೆರೆದನ ೧

ಕತ್ತಲೆ(ತಾಮಸ ದೈತ್ಯ)ನೊಡನೆ ಕಾದಿದನು ಧೀರ
    ಕಡೆದನು ಕೂಪಾರ
ಕುತ್ತಿ ಮಣ್ಣಗಿದು ಮೆದ್ದನು ಬೇರ
    ದಾನವ ಸಂಹಾರ
ಒತ್ತಿ ಬಲಿಯನು ಕಾಯ್ದನು ಶೂರ
    ಕುಜನ ಕುಠಾರ
ಹತ್ತು ಶಿರನ ಕತ್ತರಿಸಿ ಗೋಕುಲದೊಳು
    ಬತ್ತಲೆ ರಾಹುತನಾಗಿ ಮೆರೆದನ    ೨

ನಿಗಮ ಕದ್ದವನ ನೀಗಿದ ಧಿಟ್ಟ
    ನೆಗಹಿದ ಬೆಟ್ಟ
ಅಗಿದು ಮಣ್ಣನೆ ಜಠರದಲ್ಲಿಟ್ಟ
    ಘುಡಿ ಘುಡಿಸುವಸಿಟ್ಟ
ಜಗಕೆಲ್ಲ ನೋಡೆ ಎರಡಡಿಯಿಟ್ಟ
    ಕೊಡಲಿಯ ಪೆಟ್ಟ
ಮೃಗವ ಕೆಡಹಿ ಕುಂತಿಮಗಗೆ ಸಾರಥಿಯಾಗಿ
    ಜಗವ ಮೋಹಿಸಿ ಹಯವೇರ್ದ ಶ್ರೀಕೃಷ್ಣನ    ೩

## ೧೭೮ , ೧೭೭-೧೭೮

ಪುರಂದರದಾಸರನ್ನು ಕುರಿತ ಇವೆರಡು ಹಾಡುಗಳು ಸುಪರಿಚಿತವಾದವುಗಳು. ಸ್ವಯಂ ಯತಿ-ಶ್ರೇಷ್ಠರಾಗಿ, ಪುರಂದರದಾಸರಿಗೆ ದಾಸದೀಕ್ಷೆಯನ್ನು ಇತ್ತವರಾಗಿ, ವ್ಯಾಸರಾಯರು ಅವರನ್ನು ಕುರಿತು ಧನ್ಯನಾದೆನು ನಾನು ಮನುಜನ್ಮದಿ ಪುಟ್ಟಿ ದಾಸರನು ಚೆನ್ನಾಗಿ ಸ್ಮರಿಸಿ ಪಾವನನಾದೆನು ಎಂಬಷ್ಟು ಗೌರವದಿಂದ ಕಂಡಿದ್ದುದು ಅಪೂರ್ವದ ಸಂಗತಿಯಾಗಿದೆ.

ದಾಸರೆಂದರೆ ಪುರಂದರದಾಸರಯ್ಯ    ಪ

ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವ    ಅ.ಪ

ಗ್ರಾಸಕಿಲ್ಲದೆ ಪೋಗಿ ಪರರ ಮನೆಗಳ ಪೊಕ್ಕು
ದಾಸನೆಂದು ತುಲಸಿ ಮಾಲೆ ಧರಿಸಿ
ಬೇಸರಿಲ್ಲದೆ ಅವರ ಕಾಡಿ ಬೇಡಿ ಬಳಲಿಸುತ
ಕಾಸುಗಳಿಸುವ ಪುರುಷನವ ದಾಸನೇ    ೧

ಡಂಭಕದಿ ಹರಿಸ್ಮರಣೆಮಾಡಿ ಜನರಾ ಮುಂದೆ
ಸಂಭ್ರಮದಿ ತಾನುಂಬ ಊಟ ಬಯಸಿ
ಅಂಬುಜೋದ್ಭವ ಪಿತನ ಆಗಮಗಳರಿಯದಲೆ
ತಂಬೂರಿ ಮೀಟಲವ ಹರಿದಾಸನೇ೨

ಯಾಯವಾರವ ಮಾಡಿ ವಿಪ್ರರಿಗೆ ಮೃಷ್ಟಾನ್ನ
ಪ್ರೀಯದಲಿ ತಾನೊಂದು ಕೊಡದ ಲೋಭಿ
ಮಾಯ ಸಂಸಾರದಲಿ ಮಮತೆ ಹೆಚ್ಚಾಗಿಟ್ಟು
ಗಾಯನವ ಮಾಡಲವ ದಾಸನೇನೈಯ ೩

ಪಾತಕನ ತೆರದಲ್ಲಿ ಪದಗಳನೆ ತಾ ಬೊಗಳಿ
ಕೂಟ ಜನರ ಮನವ ಸಂತೋಷಪಡಿಸಿ
ಗೂಟ ನಾಮಗಳಿಟ್ಟುಕೊಂಡ್ಡಿರಿಯ ತಾನೆನುತ,
ತೂಟಕವ ಮಾಡಲವ ದಾಸನೇನೈಯ ೪

ನೀತಿಯೆಲ್ಲವನರಿತು ನಿಗಮವೇದ್ಯನ ನಿತ್ಯ
ವಾತಸುತನಲ್ಲಿಹನ ವರ್ಣಿಸುತಲಿ
ಗೀತ ನರ್ತನದಿಂದ ಕೃಷ್ಣನ್ನ ಪೂಜಿಸುವ
ಪೂತಾತ್ಮ ಪುರಂದರ ದಾಸರಿವರೈಯ ೫

## ೨೦೯

ದೂರಕ್ಕೆ ದೂರನೆಂದು ಹೆರೆ ಸಾರಲಿ ಬೇಡ
ಸಾರಿಗೆ ಸಾರಿ ನಮ್ಮ ಕೃಷ್ಣನ್ನ ಸಾರಿರೈಯ ಪ

ಅನಂತ ಜನುಮದೊಳೊಂದೆ ಜನುಮ
ಅನಂತ ಕ್ಷಣದೊಳಗೊಂದೆ ಕ್ಷಣ
ಅನಂತ ನಾಮದೊಳೊಂದೇ ನಾಮವ
ಮುನಮುಟ್ಟಿ ನೆನೆದರೆ ಬೆನ್ಹತ್ತಿ ಬಿಡನೈಯ ೧

ಅನಂತರೂಪದೊಳೊಂದೆ ರೂಪ
ಅನಂತ ಗುಣದೊಳಗೊಂದೆ ಗುಣ
ಅನಂತ ಜೀವರೊಳಗಾವನಾದರುಂ
ಕನಸಿಲಿ ನೆನೆದರೆ ಋಣಿಯಾಗಿಪ್ಪನೈಯ ೨

ಒಂದೆ ಹೂವು ಒಂದೆ ಫಲವೊಂದೆ
ಬಿಂದು ಜಲವೊಂದೆ ತುಳಸಿ
ಒಂದೇ ವಂದನೆಯೊಂದೆ ಪ್ರದಕ್ಷಿಣೆ
ಒಂದನರ್ಪಸಿದೊಡಂ ಕುಂದದಾನಂದವೀವನೈ ೩

ಹರಿ ಚಿನ್ಹಾಂಕನ ಹರಿದಿನದುಪವಾಸ
ನೆರೆಯೂರ್ಧ್ವ ಪುಂಡ್ರ ತುಳಸಿಮಾಲೆ
ಹರಿಯುತ್ಸವ ಸೇವೆ ಹರಿದಾಸರ ಸಂಗ
ದುರಿತಾಬ್ಧಿಗೆ ಕುಂಭಸಂಭವನಲ್ಲವೆ ೪

ಹರಿಪಾದ ತೀರ್ಥವು ಹರಿಯ ನಿರ್ಮಾಲ್ಯವು
ಹರಿ ಆರತಿ ಧೂಪ ಶೇಷಂಗಳು
ಹರಿಯ ಪ್ರಸಾದ ಶಂಖೋದಕ ಪ್ರತ್ಯೇಕ
ದುರಿತ ರಾಸಿಗಳನ್ನು ಸೋಕಲು ಸುಡದೆ ೫

ಒಮ್ಮೆ ಪಾಡಿದಡಂ ಒಮ್ಮೆ ಪೊಗಳಿದೊಡಂ
ಒಮ್ಮೆ ಬೇಡಿದಡಂ ಒಮ್ಮೆ ನೋಡಿದಡಂ
ಒಮ್ಮೆ ಸಾರಿದಡಂ ಮತ್ತೊಮ್ಮೆ ಕರೆದಡಂ
ನಮ್ಮಾತನಿವನೆಂದು ಕೈಯ ನೀಡುವನ್ನೆಯ ೬

ತನ್ನಲ್ಲಿಪ್ಪನಾಗಿ ದೂರನಲ್ಲ ನರ
ಹೊನ್ನು ಬೇಡ ಲಕುಮಿರಮಣಗೆ
ಅನ್ಯವ್ಯಾತಕ್ಕೆ ಈ ಪರಿಪೂರ್ಣಾನಂದಗೆ
ನಿನ್ನವನೆಂದರೆ ತನ್ನನೀವನು ಕೃಷ್ಣ ೭

'ಬಿಗಿಯದಿರು ಬೀಗರು' ಎಂದು ಎಚ್ಚರಿಸುತ್ತ ವ್ಯಕ್ತಿತ್ವದ, ಹಾಗೂ ಬದುಕಿನ ಹಲವಾರು ಅಂಗಗಳಲ್ಲಿ ಯಾರು ಯಾರು ಶ್ರೇಷ್ಠರು ಎನ್ನುವಲ್ಲಿ ಪೌರಾಣಿಕ ವ್ಯಕ್ತಿಗಳನ್ನು ಹೆಸರಿಸಿದ್ದಾರೆ. ವಿಶಿಷ್ಟ ಮಾದರಿಯ ಪದ್ಯವಿದು.

ಇದೇ ನಿಲುವಿನ ಜಾನಪದ ಹಾಡು ರಚಿತವಾಗಿದೆ. 'ಗರ್ವ ನಿನಗ್ಯಾಕೊ ತೆರ್ವಾಯಿ ಮನುಜಾ' ಎಂದು ಆರಂಭವಾಗಿ ರೂಪ, ದಾನ, ಶೌರ್ಯ ಮುಂತಾದ ಗುಣಗಳಿಗೆ ಹೆಸರಾದ ೧೯ನೆಯ ಶತಮಾನದ ವ್ಯಕ್ತಿಗಳನ್ನು ಹೆಸರಿಸಿದ್ದಾರೆ.

೧೭೦

**ಶ್ರೀ ಶ್ರೀಪಾದರಾಜರು**

ಧರೆಯೊಳು ಮೂರೇಳು ಕುಮತರ ಭಾಷ್ಯವ
ಕಿರುಕು ಹಾವಿಗೆ ಎಂದದಿ ರಚಿಸೆ
ಚರಣದಿಂದಲಿ ತುಳಿದು ಶತ್ರು ಖಳರಾ ಕರೆದು
ಮೊರೆಯಿಡುತಿವೇ ಶಾಸ್ತ್ರಸೆರೆಯ ಬಿಡಿಸೀರೆಂದು ಪ

. . .

ಹರಿಪ್ರೀತಿಗಾಗೆ ನಿರ್ಮಿಳ ಸುಕೃತಂಗಳಾ
ಧರಿಸಿದಾ ಕುಸುಮಪರಿಮಳಂಗಳಾ
ನರನೊಬ್ಬ ದೂಷಿಸೆ ಕೇಳಿ ಸರ್ವವನುಳುಹೆ
ಅರಕ್ಷಣದಿ ಅವನ ತನು ಬಿರಿಯೆ ರಕ್ಷಿಸಿದೆ ೨

ಸುರನಾಥಪುರಕಂದು ಘನ ಪುಷ್ಪವಿಮಾನದಿ
ಸರಿವುತ್ತಲಿರೆ ರಘುನಾಥೇಂದ್ರರ

ವರಯೋಗಿ ವೃಂದಾವನ ಪ್ರದಕ್ಷಿಣೆ ಗೈಸಿ
ಕರೆದು ಭಾಷಿಸಿ ಕಳುಹಿದಾಶ್ಚರ್ಯ ಚರಿತಾ ೩

ಸರಸಿಜಾಕ್ಷನ ಧ್ಯಾನದೊಳಿರೆ ವ್ಯಾಸಮುನಿಯಾ
ಉರಗ ಬಂಧಿಸಲು ಧ್ಯಾನದೊಳೀಕ್ಷಿಸಿ
ಮರುತ ವೇಗದಿ ಪೋಗಿ ಫಣಿಪನೊಡನೆ ಭಾಷಿಸಿ
ತೊಡರು ಬಿಡಿಸಿದ ಅಹಿಪಾಶವ ಗುರುರಾಯ ೪

ಸಿರಿಕೃಷ್ಣ ಪದಕಂಜಭೃಂಗನೆಂದಿನಿಸುವ
ವರ ಹೇಮವರ್ಣತೀರ್ಥರ ಕುವರ
ಸುರನರೋರುಗರೊಳು ಪ್ರಖ್ಯಾತರೆನಿಸುವ
ಅರಿಶರಭ ಭೇರುಂಡನೆನಿಪ ಶ್ರೀಪಾದರಾಯ ೫

## ೧೬೧

ಧೀರನ ನೋಡಿರೈ ಕರುಣಾಪೂರನ ಪಾಡಿರೈ ಪ

ವಾರಿಜವದನ ಸಮೀರಜ ಕಪಿನೃಪ, ದ್ವಿಜನ ಭಾವಿ ಅಜನ ಅ.ಪ

ಕಣಕಾಲಂದಿಗೆ ಒಪ್ಪುವ ಸರ, ಕಂಠಮಣಿಯ ವಜ್ರದ ಖಣಿಯ
ಮಣಿಯದ ಬಹಳ ಕಠಿಣ ದಿತಿಜರನೆಲ್ಲ ಹಣಿಯಬೇಕೆಂಬ ಧಣಿಯ
ಪ್ರಣತಿಸಿ ನಾರಾಯಣ ಪದ ಭಕ್ತಾಗ್ರಣಿಯ, ಚಿಂತಾಮಣಿಯ
ತೃಣೀಕೃತಮರಪತಿವಿಶೋ(?) ಮಾಧವ ಫಣಿಯ
    ಕಪಿಶಿರೋಮಣಿಯ- ೧

ಮಂದಸ್ಮಿತಯುತ ಕುಂದಕುಟ್ಮಲಸಮರದನ ಪೂರ್ಣಚಂದ್ರವದನ
ಇಂದುಧರಾದಿಸುರ ವೃಂದವಂದಿತ ಪದಯುಗನ ಹಸ್ತಾಯುಧನ
ಬಂದೀಕೃತ ಸುರಸುಂದರೀ ಸಮುದಯ ಸದನ ಜಿತನೇಕಮದನ
ಮಂದಮತಿ ಜರಾಸಂಧನಂಗವ ಸೀಳಿದನ ಬಹು ಬಲ್ಲಿದನ ೨

ಮುದ್ದು ಮುಖವ ನೋಡಿ ತಿದ್ದಿ ಮಾಡಿದ
    ಮೈಸಿರಿಯ ಇನ್ನೊಮ್ಮೆ ದೊರೆಯ
ಒದ್ದಕ್ಷಕುವರನ ಗುದ್ದಿಬಿಸುಟ ಹೊಂತಕಾರಿಯ ಭಾರತಿ ದೊರೆಯ
ಶುದ್ಧಾನಂದ ಸಮುದ್ರ ಶ್ರೀಕೃಷ್ಣಗೆ ಕಿರಿಯ ಮಿಕ್ಕ ಜಗಕ್ಹಿರಿಯ
ಅದ್ವೈತಶಾಸ್ತ್ರದ ಸದ್ದಡಗಿಸಿದ ಆರ್ಯಾ ನಮ್ಮ ಮಧ್ವಾಚಾರ್ಯಾ ೩

ಈ ಹಾಡಿನ ಕೊನೆಯ ನುಡಿಯಲ್ಲಿ ಬರುವ ಅಕ್ಷಕುವರನು ರಾವಣನ ಒಬ್ಬ ಮಗ. ಹನುಮಂತನು ಅವನನ್ನು ಸಂಹರಿಸಿದನು. 'ಗುದ್ದಿ ಬಿಸುಡಿ ಹೊಂತಕಾರಿಯ' ಎಂಬುದು, ವಂಚಕನಾದ

ಕೀಚಕನನ್ನು ಗುದ್ದಿ ಕೊಂದ ಭೀಮಸೇನನ ಸಾಹಸದ ವಿಷಯವಾಗಿದೆ. ಶ್ರೀಕೃಷ್ಣನಿಗೆ ಕಿರಿಯ, ಮಿಕ್ಕ ಜಗಕ್ಹಿರಿಯ ಎನ್ನುವಲ್ಲಿಯ ಉಕ್ತಿಚಾತುರ್ಯವನ್ನು ಗಮನಿಸಬೇಕು.

೧೦೯

ನಂಬಿ ಕೆಟ್ಟವರಿಲ್ಲವೊ, ರಂಗೈಯನ
ನಂಬದೆ ಕೆಟ್ಟರೆ ಕೆಡಲಿ ಪ

ಅಂಬುಜನಾಭನ ಅಖಿಳ ಲೋಕೇಶನ
ಕಂಬು ಕಂಧರ ಕೃಷ್ಣ ಕರುಣಾ ಸಾಗರನ ಅ.ಪ

ತ'ರಳ ಪ್ರಹ್ಲಾದ ಸಾಕ್ಷಿ ಸರಸಿಯೊಳಿದ್ದ
ಕರಿರಾಜನೊಬ್ಬ ಸಾಕ್ಷಿ

ಮರಣಕಾಲದಿ ಅಜಾಮಿಳ ಮಗನನು ಕರೆಯೆ
ಗರುಡನೇರಿ ಬಂದ ಗರುವ ರಹಿತನ

ದೊರೆಯೂರು ಯೇರಬಂದ ಪುತ್ರನನ್ನು
ಕೊರಳ್ಹಿಡಿದ್ದೊರಡಿಸಲು

ಅರಣ್ಯದೊಳಗವನಿದ್ದ ಸ್ಥಳದಲ್ಲಿ
ಭರದಿಂದೋಡಿ ಬಂದ ಭಕ್ತವತ್ಸಲನ್ನ

ತರುಣಿ ದ್ರೌಪದಿ ಸೀರೆಯ-ದುಶ್ಶಾಸನ
ಸರಸರ ಸೆಳೆಯುತಿರೆ

ಕರುಣಿ ತನ್ನೊಡತಿಯೊಡನೆ ಆಡುವುದ ಬಿಟ್ಟು
ತ್ವ'ರದಿ ಅಕ್ಷಯವಿಟ್ಟ ಸಿರಿ ಕೃಷ್ಣರಾಯನ

ಇದೊಂದು ಜನಪ್ರಿಯ ಕೀರ್ತನೆ. ಪ್ರಹ್ಲಾದ, ಗಜೇಂದ್ರ, ಅಜಾಮಿಳ, ದ್ರೌಪದಿ-ಈ ಭಕ್ತರನ್ನು ಉದ್ಧರಿಸಿದ ಬಗೆ ಇಲ್ಲಿದೆ. ೨ನೆಯ ನುಡಿಯಲ್ಲಿ ಬಾಲಕನಾದ ಧ್ರುವನ ಉದ್ಧಾರದ ಪ್ರಸಂಗವಿದೆ. ಈ ಹಾಡಿನ ಪಲ್ಲವಿಯನ್ನು ಬಳಸಿಕೊಂಡಿರುವ ಪುರಂದರದಾಸರ ಕೀರ್ತನೆಯೂ ಒಂದಿದೆ.

ದ'ೊರೆಯೂರು-ದೊರೆಯ+ಊರು. ದ'ೊರೆಯ ತೊಡೆಯನ್ನು ಏರಬಂದ ಧ್ರುವನ ಕತೆ.

## ಉ) ರುದ್ರದೇವರು

### ೧೬೬

ನಮೋ ಪಾರ್ವತೀಪತಿ ನುತಜನಪರ ನಮೋ ವಿರೂಪಾಕ್ಷ ಪ

ರಮಾರಮಣನಲ್ಲಮಲ ಭಕುತಿ ಕೊಡು ನಮೋ ವಿಶಾಲಾಕ್ಷ ಅ.ಪ

ನೀಲಕಂಠ ತ್ರಿಶೂಲ ಡಮರು ಹಸ್ತಾಲಂಕೃತ ರಕ್ಷ
ಫಾಲನೇತ್ರ ಕಪಾಲ ರುಂಡಮಣಿ ಮಾಲಾಧೃತ ವಕ್ಷ
ಶೀಲರಮ್ಯ ವಿಶಾಲ ಸುಗುಣ ಸಲ್ಲೀಲ ಸುರಾಧ್ಯಕ್ಷ
ಶ್ರೀ ಲಕುಮೀಶನ ಓಲೈಸುವ ಭಕ್ತಾವಳಿಗಳ ಪಕ್ಷ ೧

ವಾಸವನುತ ಹರಿದಾಸ ಈಶ ಕೈಲಾಸವಾಸ ದೇವ
ದಾಶರಥಿಯ ಔಪಾಸಕ ಸುಜನರ ಪೋಷಿಪ ಪ್ರಭಾವ
ಭಾಸಿಸುತಿಹುದಶೇಷ ಜೀವರಿಗೆ ಈಶನೆಂಬ ಭಾವ
ಶ್ರೀಶನಲ್ಲಿ ಕೀಲಿಸು ಮನವ ಗಿರಿಜೇಶ ಮಹಾದೇವ ೨

ಮೃತ್ಯುಂಜಯ ನಿನ್ನುತ್ತಮ ಪದಯುಗ ಭೃತ್ಯನೊ ಸರ್ವತ್ರ
ಹತ್ತಿರ ಕರೆದು ಅಪತ್ಯನಂದದಿ ಪೊರೆಯುತ್ತಿರೊ ತ್ರಿನೇತ್ರ
ತೆತ್ತಿಗನಂತೆ ಕಾಯುತ್ತಿಹ ಬಾಣನ ಸತ್ಯದಿ ಸುಚರಿತ್ರ
ಕರ್ತೃ ಉಡುಪಿ ಸರ್ವೋತ್ತಮ ಕೃಷ್ಣನ ಪೌತ್ರ ಕೃಪಾಪಾತ್ರ ೩

### ೧೯೫

ನಾನೆಲ್ಲಿ ಜ್ಞಾನಿಯು ನಾನೆಲ್ಲಿ ಸುಜನನು
ಹೀನ ವಿಷಯಗಳುಂಬ ಶ್ವಾನನಂತಿರುವೆ ಪ

ಮೂತ್ರದ ಮನೆಗಾಗಿ ಗಾತ್ರ ಬಳಲಿಸಿ ಮದನ
ಸೂತ್ರ ಬೊಂಬೆಯು ಎನಿಸಿ ನೇತ್ರದಿಂದ
ಪಾತ್ರದವರನು ನೋಡಿ ಸ್ತೋತ್ರಮಾಡುತ ಹಿಗ್ಗಿ
ರಾತ್ರೆ ಹಗಲು ಕೆಟ್ಟ ವಾರ್ತೆಯಲ್ಲಿರುವೆ ೧

ಧನದಾಸೆ ಘನವಾಗಿ ಅಣು ಮಹತ್ಕಾರ್ಯದೊಳು
ತಣಿಸಿ ದಣಿಯಲು ತೃಣವು ದೊರೆಯದಿರಲು
ಮನೆ ಮನೆಗೆ ಬಾಯ್ದೆರೆದು ಶುನಕನಂತೆ ದಿನಗಳೆವೆ
ಮನುಜ ಪಶುವಿಗೆ ಇನ್ನು ಮುನಿಯೆಂಬಿರೆಂತೋ ೨

ನಾಲಗೆಯ ರುಚಿಯಿಂದ ಸಾಲದಾಯಿತು ಬಯಕೆ
ಕಾಲ ಕಾಲಕೆ ನೆನಸಿ ಹಾಳಾದರೂ
ಶೀಲಗಳ ಕಳಕೊಂಡು ಚಾಲುವರಿಯುತ ಪರರ
ಆಲಯದ ಉಚ್ಚಿಷ್ಟ ಮೇಲಾದ ಸವಿಯ ೩

ಸ್ನಾನಧ್ಯಾನವನರಿಯೆ ಸಾನುರಾಗದಿ ಭಕ್ತಿ
ಕೂನ(ಗುರುತು)ವಿಲ್ಲದೆ ಡಂಭ ಮೌನಿಯೆನಿಸಿ
ನಾನಾ ವಿಷಯ ಮನದಿ ನಾ ನೆನೆಸುವೆ ನಿತ್ಯ
ಏನಾದರೂ ಕಷ್ಟ ಕಾಣದಂತಿರುತಿಪ್ಪೆಳೆ

ಪತಿತರೊಳು ಎನ್ನಂಥ ಪತಿತರೊಬ್ಬರ ಕಾಣೆ
ಗತಿಯು ನೀನಲ್ಲದೆ ಅನ್ಯರಿಲ್ಲ
ಪತಿತ ಪಾವನನೆಂಬೊ ಬಿರುದುಂಟುಮಾಡುವ
ಕ್ಷಿತಿಪತಿ ಶ್ರೀಕೃಷ್ಣರಾಯ ನೀನಹುದೋ ೫

ಆತ್ಮನಿವೇದನೆಯ ಕಾಲಕ್ಕೆ ಆತ್ಮನಿಂದನೆಯಲ್ಲಿ :
**೧೯೪, ೧೯೫, ೨೦೨**

ಆತ್ಮನಿವೇದನೆಯ ಕಾಲಕ್ಕೆ ಆತ್ಮನಿಂದನೆಯಲ್ಲಿ ಸಾಮಾನ್ಯವಾಗಿ ಹರಿದಾಸರು ತೊಡಗುವುದುಂಟು. ಆದರೆ 'ದೇಹ ಜೀರ್ಣವಾಯಿತಾದರೂ ಧನನೇಹ ಜೀರ್ಣವಾಗದು ; ಕಣ್ಣು ಕಿವಿ ಮಂದವಾದರೂ ಹೆಣ್ಣು ಮಣ್ಣಿನಾಶೆ ಮಂದವಾಗದು' ಎಂಬ ಮಾತು ವ್ಯಾಸರಾಯರ ವೈಯಕ್ತಿಕ ಜೀವನದಲ್ಲಿ ನಡೆದದ್ದೇನಲ್ಲ. 'ಜೇನಿನೊಳಗೆ ಬಿದ್ದ ನೊಣದಂತೆ ಸತಿ-ಸುತ ಜನಪಾಶಬದ್ಧನಾದೆ' (ಕೀ. ೨೦೧)ಎಂಬುದಂತೂ ಸಾಮಾನ್ಯ ಸಂಸಾರಿಗನಿಗೇನೆ ಅನ್ವಯಿಸುವ ಮಾತು. 'ಅದರಂತೆ ನಾನೆಲ್ಲಿ ಜ್ಞಾನಿಯು, ನಾನೆಲ್ಲಿ ಸುಜನನು ಹೀನ ವಿಷಯಗಳುಂಬ ಶ್ವಾನನಂತಿರುವೆ' ಎಂಬುದು ಅವರಿಗೆ ಎಷ್ಟು ಮಾತ್ರಕ್ಕೂ ಅನ್ವಯಿಸುವಂತಹದಲ್ಲ. ಅದು ಲೋಕರೂಢಿಯ ಮಾತೆಂದೇ ಬಗೆಯತಕ್ಕದು.

**೧೯೬**

ನಿದ್ರೆ ಬಂತಿದೆಕೋ ಅನಿ- ಪ

ರುದ್ಧನ ಸೇವೆಗೆ ವಿಘ್ನವ ಮಾಡುತ್ತ ಅ

ಅಸ್ತಮಾನದಿಂದ ಉದಯವಾಗೋತನಕ
ಸ್ವಸ್ಥದಿ ಪಗಡೆ ಪಂಜಿಯನಾಡುತ
ವಿಸ್ತಾರದಿ ವೇಷನೋಡೆ ನಿದ್ರೆಯಿಲ್ಲ
ಪುಸ್ತಕ ಹಿಡಿಯಲು ಮಸ್ತಕ ಮಣಿಸುತ ೧

ಹರಿಕಥಾಶ್ರವಣ ಮಾಡಬೇಕೆನುತಲಿ
ಪರಮ ಭಕುತಿಯಿಂದ ಕುಳ್ಳಿರಲು
ಕಿರಿಗಣ್ಣ ನೋಟದಿ ಸ್ಮರಣೆ ತಪ್ಪಿಸುತ್ತ
ಗುರುಗುರು ಗುಟ್ಟುತ ಕೊರಳ ತೂಗಿಸುತ ೨

ಇಲಿಗಳಿಗೆ ಬೆಕ್ಕು ಸಾಧಿಪ ಪರಿಯಂತೆ
ಹಲವು ಪರಿಯಲ್ಲಿ ಈ ನಿದ್ರೆಯು
ಛಲದಿಂದ ಮನುಜರ ನೇಮ ಕೆಡಿಸುತಿದೆ
ಒಲಿದು ಶ್ರೀಕೃಷ್ಣನ ಜಾಗರ ಮಾಳ್ಪಲ್ಲಿ ೩

## ೧೯೮

ನಿನಗಾರು ಸರಿಯಿಲ್ಲ-ಎನಗನ್ಯ ಗತಿಯಿಲ್ಲ ಪ

ನಿನಗೂ ನನಗೂ ನ್ಯಾಯ ಪೇಳುವರಿಲ್ಲ ಅ.ಪ

ಒಂದೇ ಗೂಡಿನೊಳು ಒಂದು ಕ್ಷಣವಗಲದೆ
ಎಂದೆಂದು ನಿನ್ನ ಪಾದ ಪೊಂದಿರುವೆ
ಬಂದ ವಿಷಯಂಗಳಿಗೆ ಎನ್ನನೊಪ್ಪಿಸಿಕೊಟ್ಟು
ಅಂದಗಾರನಂತೆ ನೋಡುವುದುಚಿತವೆ ೧

ಪರ ಸತಿಗಳುಪಲು ಪರಮ ಪಾತಕಿಯೆಂದು
ಪರಿ ಪರಿ ನರಕಕ್ಕೆ ಗುರಿಮಾಡುವಿ
ಪರಸತಿಯರ ಒಲುಮೆ ನಿನಗೊಪ್ಪಿತೆಲೊ ಕೃಷ್ಣ
ದೊರೆತನಕಂಜಿ ನಾ ಶರಣೆಂಬೆನಲ್ಲದೆ ೨

ನಿನ್ನಾಜ್ಞದವನೊ ನಾ ನಿನ್ನ ಪ್ರೇರಣೆಯಿಂದ
ಅನ್ನಂತ ಕರ್ಮವ ನಾ ಮಾಡಿದೆ
ಎನ್ನವಗುಣಗಳನೆಣಿಸಲಾಗದೊ ಸ್ವಾಮಿ
ಮನ್ನಿಸಿ ಸಲಹಯ್ಯ ಪರಮ ಪುರುಷ ಕೃಷ್ಣ ೩

ಪರಮಾತ್ಮನ ಧ್ಯಾನ ಮಾಡುವಾಗ ಅನ್ಯ ವಿಷಯಕ್ಕೆ ಮನ ಎರಗುತ್ತಿದೆ-ಎಂದು ಹೇಳುತ್ತ, ಸತಿಯು ಪತಿಯಿದ್ದಾಗ, ಪರಪುರುಷನನ್ನು ಬಯಸುವಂತೆ ಆಗಿದೆ ಎಂಬ ಉಪಮೆಯನ್ನು ಕೊಟ್ಟಿದ್ದಾರೆ (ಇನ್ನೊಂದು ಕೀರ್ತನೆಗಳಲ್ಲಿಯೂ ಈ ಅಂಶ ಬಂದಿದೆ) ಸಮಾಜದಲ್ಲಿ ಪುರುಷನು ಪರದಾರಾಗಮನ ಮಾಡುವುದು ಸಹಜವಾಗಿರುವಾಗ, ಇಲ್ಲಿ ಅದರ ತದ್ವಿರುದ್ಧವಾದ ನಡವಳಿಕೆ ಬಂದಿದೆ.

೧೧೧

ನಿನಗೆ ನೀನೇ ಕೃಷ್ಣ ದಯಮಾಡಿ ಸಲಹೋ
ಎನಗೊಂದು ಸಾಧನ ಲೇಶ ಕಾಣಬರದೋ ಪ

ಸ್ನಾನವ ಮಾಡಿ ನಿನ್ನ ಸಮತಿಸುವೆನೆಂದರೆ
ಸ್ನಾನ ಮಾಡದೆ ಕಪ್ಪೆ ಸರ್ವಕಾಲದಲೀ
ಧ್ಯಾನವ ಮಾಡಿ ನಿನ್ನ ಸಮತಿಸುವೆನೆಂದರೆ
ಧ್ಯಾನವ ಬಕ ಸರ್ವಕಾಲದಲೀ ೧

ಜಪವ ಮಾಡಿ ನಿನ್ನ ಸಮತಿಸುವೆನೆಂದರೆ
ಜಪದಲ್ಲಿ ಮನಸು ಎನ್ನಾಧೀನವೇನಯ್ಯ
ಉಪವಾಸವೆ ನಿನ್ನಾ ಸಾಧನವೆಂದರೆ
ಉಪವಾಸವಿರದೆ ಆ ಉರಗ ಸರ್ವ ಕಾಲದಲೀ ೨

ಸನ್ಯಾಸವೇ ನಿನ್ನ ಸಾಧನವೆಂದರೆ
ಸನ್ಯಾಸವಿರದೇ ಆ ರಾವಣಗೇ
ಕನ್ಯಾದಾನವೆ ನಿನ್ನಾ ಸಾಧನವೆಂದರೆ
ಕನ್ಯಾದಾನ ಮಾಡಾನೆ ಕಂಸಗೆ ಜರಾಸಂಧ ೩

ಜ್ಞಾತಿತ್ವವೆ ನಿನ್ನ ಸಾಧನವೆಂದರೆ
ದಿತಿ ಕಶೆಪಾಸುತರು ದೈತ್ಯರಾಗಿಹರೇ
ಭೂತಿಯೆ ನಿನ್ನ ಸಾಧನವೆಂದರೆ
ಭೂತಿ ಇರದೆ ಆ ದುರುಳ ದುರ್ಯೋಧನಗೆ ೪

ಬಂಧುತ್ವವೇ ನಿನ್ನ ಸಾಧನವೆಂದರೆ
ಬಂಧುತ್ವವಿರದೇ ಆ ಶಿಶುಪಾಲಗೆ
ಒಂದೂ ಸಾಧನ ಕಾಣೇ ಉಚಿತಾವೇ ಶ್ರೀಕೃಷ್ಣ
ಎಂದೆಂದಿಗೂ ನಿನ್ನ ದಾಸನೆನಿಸೊ ೫

ಶ್ರೀಹರಿಯನ್ನು ಒಲಿಸಿಕೊಳ್ಳಲು ಸ್ನಾನ, ಜಪ ಮುಂತಾದ ಬಾಹ್ಯ ಸಾಧನಗಳಾವವೂ ಪ್ರಯೋಜನಕ್ಕೆ ಬಾರವು. ಅವೆಲ್ಲಕ್ಕಿಂತ ಅವನ ದಾಸತ್ವವನ್ನು ವಹಿಸುವುದೇ ಸೂಕ್ತವಾದದ್ದು ಎಂಬುದು ಇಲ್ಲಿಯ ಭಾವ.

೧೯೬

ನಿನ್ನ ಧ್ಯಾನವ ಮಾಡುತ್ತ ಮಾಡುತ್ತ
ಎನ್ನ ಮನ ಅನ್ಯಕ್ಕೆರಗುತ್ತಿದೆ ಪ

ಪತಿ ಅಂಗ ಸಂಗದೊಳಿರುತಿದ್ದು ಇದ್ದು
ಸತಿ ಉಪಪತಿಯನ್ನು ಬಯಸುವಂತೆ

ಶ್ರುತಿ ತತ್ವ ಶಾಸ್ತ್ರಗಳರಿತಿದ್ದು ಇದ್ದು ದು–
ರ್ಮತಿ ದುಷ್ಟ ಚರಿತೆಗೆ ಎಳೆಯುತಿದೆ ಎನ್ನ ೧

ಪರಮಾನ್ನವನು ನಿತ್ಯ ಉಣುತಿದ್ದು ಇದ್ದು
ಸುರೆಯ ಚಿಂತಿಸಿ ರುಚಿಗೊಳ್ಳುವಂತೆ
ಕರಿ–ಸುರನದಿಯಲ್ಲಿ ಮೀಯುತಿದ್ದು ಇದ್ದು
ಪರಮ ಹರುಷದಿ ಕೆಸರ ಚೆಲ್ಲಿಕೊಂಬಂತೆ ೨

ಪರಮ ಪಾವನ ಗುಣಪೂರ್ಣನೆ ನಿನ್ನ
ಚರಣಯುಗಳವನ್ನು ಧ್ಯಾನಿಸುತ
ನೆರೆಹೊರೆಯಲಿ ಮನ ಹೋಗದಂದದಲಿ
ಕರುಣಿಸಿ ನಿಲ್ಲಿಸೊ ಸಿರಿಕೃಷ್ಣರಾಯ ೩

ಕೋಳು ಹೋಗದ ಮುನ್ನ–ಸೂರೆ ಹೋಗದ ಮುನ್ನ

ಆರು ಮೂರರ ಬಾಧೆ (೯)– ?

ಆರು ಎಂಟರ ಬಾಧೆ (೧೪)–ಷಡ್ರಿಪುಗಳು ಮತ್ತು ಅರ್ಥ, ಮದ ಇತ್ಯಾದಿ ೮ ಮದಗಳು.

ಕ್ರೂರರೈವರ ಬಾಧೆ (೫)–ಪಂಚೇಂದ್ರಿಯಗಳು

೧೪೨

ನಿನ್ನ ಮಗನೇನೆ ಗೋಪಿ
ಚೆನ್ನಾರಿ ಚೆಲುವ ಉಡುಪಿಯ ಕೃಷ್ಣರಾಯಾ ಪ

ಮುಂಗುರುಳು ಮುಂದಲೆಗೆ ಭಂಗಾರದರಳೆಲೆ
ರಂಗು ಮಾಣಿಕದುಂಗುರವಿಟ್ಟು
ಪೊಂಗೆಜ್ಜೆ ತೊಡರು ಅಂದಿಗೆ ಘಲು ಘಲುರೆನೆ
ಅಂಗಳದಲಾಡುತ ಈ ಮುದ್ದುಬಾಲ ೧

ಕಟವಾಯಿ ಬೆಣ್ಣೆ ಕಾಡಿಗೆಗಣ್ಣು ಕಟಿಸೂತ್ರ
ಪಟವಾಳಿ ಕೌಪೀನ ಕೊರಳಲ್ಲಿ ಪದಕ
ಸಟೆಯಿಲ್ಲ ಬ್ರಹ್ಮಾಂಡ ಉದರದಲಿಂಬಿಟ್ಟು
ಮಿಟಮಿಟನೆ ನೋಡುವ ನೀ ಮುದ್ದುಬಾಲ ೨

ಹರಿವ ಹಾವನು ಕಂಡು ಹೆಡೆ ಹಿಡಿದಾಡುವ
ಕರುವಾಗಿ ಆಕಳ ಮೊಲೆಯುಂಬುವ
ಹಿರಿದಾಗಿ ನೋಡಲು ಅಂತರಂಗದ ಸ್ವಾಮಿ
ಧರೆಯೊಳಂಬುಧಿ ತೀರ ಉಡುಪಿನ ಕೃಷ್ಣ ೩

## ೨೦೦

ನಿನ್ನಾಜ್ಞಧವನೊ ನಾನೆನ್ನನೊಪ್ಪಿಸದೆ
ಬಿನ್ನಹ ಚಿತ್ತೈಸಿ ಎನ್ನ ಪಾಲಿಸೊ ಕೃಷ್ಣ ಪ

ಏಳು ಸುತ್ತಿನಕೋಟೆ ಯಮನಾಳು ಮುತ್ತಿಕೊಂಡು
ಪಾಳು ಮಾಡೇವೆಂದು ಪೇಳುತಿರಲು
ಆಳು ಸಾಮಗ್ರಿಯ ಅಪಾರ ಬಲಮಾಡಿ
ಕೋಳುಹೋಗದ ಮುನ್ನ ಕೋಟೆ ರಕ್ಷಿಸಬೇಕು ೧

ಆರು ಮೂರರ ಬಾಧೆ ಆರು ಎಂಟರ ಬಾಧೆ
ಕ್ರೂರರೈವರ ಬಾಧೆ ಹೋರುತಲಿದಕೋ
ಆರಿಂದ ನಿರ್ವಾಹವಾಗದು ಇವರನು
ಮೇರೆಲಿಡುವನೊಬ್ಬ ಧೀರನ್ನ ಬಲಮಾಡೊ ೨

ಲಕ್ಷ ಎಂಭತ್ತು ನಾಲ್ಕು ಜೀವರಾಶಿಗಳೊಳು
ಸೂಕ್ಷ್ಮದ ಕೋಟೆಂದುಪೇಕ್ಷಿಸದೆ
ಪಕ್ಷಿವಾಹನ ನೀನು ಪ್ರತ್ಯಕ್ಷ ನಿಂತರೆ
ಅಕ್ಷಯ ಬಲವೆನಗೆ ರಕ್ಷಿಸೊ ಸಿರಿಕೃಷ್ಣ ೩

## ೧೪೩

ನಿನ್ನಿಂದ ನಿನ್ನ ದಾಸರೆ ಮಿಗಿಲೋ ಕೃಷ್ಣ ಪ

ನಿನ್ನಿಂದ ನಿನ್ನ ದಾಸರೆ ಮಿಗಿಲಾಗಿ
ಮನ್ನಿಸುವುದು ನಿನಗೇಸು ಪ್ರಿಯವೊರಂಗ ಅ.ಪ

ತನ್ನ ಸ್ಯಕಾಗಿ ಸತ್ಯಕಾಮನೆಂಬ
ನಿನ್ನ ಪ್ರತಿಜ್ಞೆಯ ಬಿಡಿಸನೆ ಭೀಷ್ಮನು ೧

ಮೂರ್ಲೋಕಪತಿಯೆಂಬ ನಿನ್ನ ಧರ್ಮರಾಯ
ಕಾಲು ತೊಳೆವ ಕೀಳು ಊಳಿಗಕ್ಕಿಕ್ಕನೆ ೨

ದೇವರಥಾಯೂಥಪತಿಯೆಂಬ ನಿನ್ನನು
ಬೋವನ ಮಾಡನೆ ಪಾರ್ಥನು ಬಂಡಿಯ ೩

ಬೊಮ್ಮಾದಿಗಳಗಮ್ಯಾಚೋರ ಪರ-
ಬ್ರಹ್ಮ ನಿನ್ನನು ಬಲಿ ಬಾಗಿಲ ಕಾಯ್ಸನೆ ೪

ಶ್ರೀಪತಿ ಭೂಪತಿ ಈ ಪೆಸರಿರಲು
ಗೋಪಾಂಗನೇಯರ ನೀ ಕೂಡಿದೆಯೊ ಕೃಷ್ಣ ೫

## ೨೦೧

ನೀನೆ ಗತಿ ಮುಕುತೆನೆಗೆ ಅನಂತ ಜನುಮಗಳಲಿ ಪ

ಆನೇನರಿಯೆ ಗರುಡಗಮನ ಸಿರಿಕೃಷ್ಣ ರಾಯಾ ಅ.ಪ

ಅನ್ಯವಾರ್ತೆ ಅನ್ಯಸಂಗ ಅನ್ಯಜನರಾರಾಧನೆ
ಅನ್ಯಸತಿ ಅನ್ಯಕರ್ಮ ಮೊದಲು ಸಕಲ
ತನ್ನು ಮನ್ನ(=ತನುಮನ) ವಾಕ್ಯಗಳಿಂದ ಜರಿದೆ ನಿನ್ನವರೊಳು
ಎನ್ನ ಕೂಡಿಸೊ ನಿನ್ನ ಚರಣ ಭಕುತಿಯಲಿ ಶ್ರೀಶ ೧

ಅಂದು ವೇದೋದ್ಭವಳ ಮೊರೆಯನು ಕೇಳಿ ಕಾಯ್ದಂತೆ
ಮಂದ ಗಜೇಂದ್ರನಿಗೊಲಿದು ರಕ್ಷಿಸಿದ ಪರಿಯಂತೆ
ತಂದೆತಾಯಿ ಬಂಧುಬಳಗ ಎಂದೆಂದು ನೀನೇ ದಯಾ-
ಸಿಂಧು ನಿನ್ನ ದಾಸರ ದಾಸನೆಂದೆನಿಸೆನ್ನ ೨

ರನ್ನನಖಾಂಗುಳಿ ಪಾದ ಜಂಘೆ ಜಾನೂರುಕಟಿ
ಘನ್ನ ಬಾಹು ಉದರವಕ್ಷ ಭುಜ ಕುಂತಳದಿ
ಚನ್ನ ಕಿರೀಟ ಸರ್ವಾಲಂಕಾರದಿಂ ಶೋಭಿಸುವ
ನಿನ್ನ ಮೂರ್ತಿಯನ್ನೆ ತೋರೊ ಭಕ್ತವತ್ಸಲ ಸಿರಿಕೃಷ್ಣ೩

## ೧೬೨

ನೀನೆ ವರಗುರು ಮುಖ್ಯಪ್ರಾಣ
ನಿರಂತರವು ನಂಬಿದೆನೊ ನಿಖಿಳ ಗುಣಪೂರ್ಣ ಪ

ಜಾಣೆ ಕೋಮಲೆ ಭಾರತೀಶ ಸಕಲ
ಪ್ರಾಣಿಗಳ ಹೃದಯಾಬ್ಜ ವಾಸ ಸುರೇಶ ಅ.ಪ

ವಾತಸುತನಾಗಿ ರಘುನಾಥ ಪ್ರಿಯ ದೂತ ಬಲು
ಯೂಥ ಲಂಕೆಯ ಪೊಕ್ಕು ಖ್ಯಾತಿಯನು ಪಡೆದೆ
ಸೀತೆಗುಂಗುರವಿತ್ತು ವೀತಿಹೋತ್ರಗೆ ಪುರವ
ಪ್ರೀತೆನಿಸಿದಾತ ದಿತಿಜಾತರಿಗೆ ಭೀತಿಕರ ೧

ಲಂಡ ಕೀಚಕ ಬಕರ ಮಂಡೆಯನು ಒಡೆದು ಉ-
ದ್ದಂಡ ಮಗಧಾಧಿಪನ ದಂಡವನು ಸೀಳಿ
ಭಂಡ ಕೌರವರ ಶಿರ ಚೆಂಡಾಡಿ ಪ್ರಬಲ ರಣ-
ಮಂಡಲದಿ ಚಂಡರಿಪು ದಂಡೆಗಳ ಖಂಡಿಸಿದೆ ೨

ಸಾಂಗದಲಿ ಮಧ್ವಮತದಂಗವನು ಏರ್ಪಡಿಸಿ
ಕಂಗೆಟ್ಟ ಕುಮತ ದುಸ್ಸಂಗಗಳನಳಿದು
ಗಂಗೆಪಿತ ಕೃಷ್ಣಪದ ಭೃಂಗ ಮೂಜ್ಜಗದೊಳಗೆ
ತುಂಗ ಭವಭಂಗ ದಯಾಪಾಂಗ ಯತಿಪುಂಗವನೆ ೩

೧೭೧

ನೆನೆದು ಬದುಕಿರೋ ಸತತ ನೆನೆದು ಬದುಕಿರೋ ಪ

ನೆನೆದು ಬದುಕಿ ಸುಜನರೆಲ್ಲ
ಘನಗುಣಾಂಬುಧಿ ಶ್ರೀಪಾದರಾಯರ ಅ.ಪ

ಇತರ ಧ್ಯಾನವೆಲ್ಲವನುಳಿದು
ಅತಿಶಯದ ವಿರಕ್ತಿ ಬಲಿದು
ಮತಿ ವಿಶೇಷವೆನಿಪ ಮಧ್ವ
ಮತಾಂಬುನಿಧಿಗೆ ಪೂರ್ಣಚಂದ್ರನ ೧

ಅಮಿತ ಪುಣ್ಯ ಅಗ್ರಗಣ್ಯನ
ವಿಮತ ಹರನ ವಿನಯ ಪರನ
ದ್ಯುಮಣಿತೇಜನ ದುರಿತ ದೂರನ
ಶಮದಮಾದಿ ಗುಣಸಮುದ್ರನ ೨

ಹೀನ ಕುಮತ ಮಾನಭಂಗನ
ಸೂನ ಶರನ ಗೆಲಿದ ಘನ್ನನ
ದಾನ ಕರ್ಣನ ದಯಾರ್ಣವನ
ಜ್ಞಾನಪೂರಿತ ಶುಭ ಚರಿತನ ೩

ವಾದಿಕುಂಜರ ಪಂಚಮುಖನ
ಸಾಧು ಸಜ್ಜನ ಕಲ್ಪವೃಕ್ಷನ
ವೇದ ಶಾಸ್ತ್ರ ಪುರಾಣದಲಿ
ಆದಿಶೇಷನ ಪೋಲ್ವ ಮುನಿಯ ೪

ವನಜನೇತ್ರ ಕೃಷ್ಣನ ಪ್ರಿಯನ
ಕನಕವರ್ಣ ತೀರ್ಥರ ಸುತನ
ಜನಸಮೂಹ ಸನ್ನುತ ಪರಮ
ವನಧಿ ಗಂಭೀರ ಶ್ರೀಪಾದರಾಯರ ೫

೨೦೨

ನ್ಯಾಯವೆ ನಿನಗೆ ಎನಗೆ ಸಿರಿಕೃಷ್ಣ ಪ

ಬಾಯಾಡಬಹುದೆ ಕೈಯೊಳಿತ್ತ ಹಣಗಳ ಅ.ಪ

ಆರು ಅರಿಯದ್ಹಾಂಗೆ ಒಂಭತ್ತು ಕೊಡುವಾಗ
ತೋರಿಯಾಡಿದೆ ಒಮ್ಮೆ ನಿನ್ನ ಹೆಸರ
ಗಾರುಮಾಡದೆ ಬಡ್ಡಿ ತೆತ್ತು ಬರುವೆನೆಂದು
ಹಾರೈಸಿ ಕೊಡದೆ ಚುಂಗುಡಿಯ ನಿಲಿಸುವರೆ ೧

ಸಾಲವ ಬೇಡಿದರೆ ಕೋಪವೇ ಕಮಲಾಕ್ಷ
ಕಾಲಿಗೆ ಎನ್ನ ಕೊರಳ ಕಟ್ಟಿಕೊಂಬೆ
ಆಲಯದವರ ಕೇಳದೆ ನಿನಗೊಳಗಾದೆ
ಭೋಳೆಯತನದಲ್ಲಿ ನಿನ್ನ ನಂಬಿದೆ ಹರಿ ೨

ಅಸಲು ನಿನಗೆ ಸಮರ್ಪಣೆಯಾಯಿತೆಲೊ ದೇವ
ಮೀಸಲು ಪೊಂಬೆಸರು ನಿರುತ ನಡೆಯಲಿ
ಶಶಿಧರ ಬ್ರಹ್ಮಾದಿ ವಂದ್ಯ ಸತ್ಯವೆಂಬ
ಮೀಸಲುಳುಹಿ ಎನ್ನ ಸಲಹೊ ಶ್ರೀಕೃಷ್ಣ ೩

### ೧೯೪, ೧೯೫, ೨೦೨

ಆತ್ಮನಿವೇದನೆಯ ಕಾಲಕ್ಕೆ ಆತ್ಮನಿಂದನೆಯಲ್ಲಿ ಸಾಮಾನ್ಯವಾಗಿ ಹರಿದಾಸರು ತೊಡಗುವುದುಂಟು. ಆದರೆ 'ದೇಹ ಜೀರ್ಣವಾಯಿತಾದರೂ ಧನನೇಹ ಜೀರ್ಣವಾಗದು ; ಕಣ್ಣು ಕಿವಿ ಮಂದವಾದರೂ ಹೆಣ್ಣು ಮಣ್ಣಿನಾಶೆ ಮಂದವಾಗದು' ಎಂಬ ಮಾತು ವ್ಯಾಸರಾಯರ ವೈಯಕ್ತಿಕ ಜೀವನದಲ್ಲಿ ನಡೆದದ್ದೇನಲ್ಲ. 'ಜೇನಿನೊಳಗೆ ಬಿದ್ದ ನೊಣದಂತೆ ಸತಿ–ಸುತ ಜನಪಾಶಬದ್ಧನಾದೆ' (ಕೀ. ೨೦೧)ಎಂಬುದಂತೂ ಸಾಮಾನ್ಯ ಸಂಸಾರಿಗನಿಗೇನೆ ಅನ್ವಯಿಸುವ ಮಾತು. 'ಅದರಂತೆ ನಾನೆಲ್ಲಿ ಜ್ಞಾನಿಯು, ನಾನೆಲ್ಲಿ ಸುಜನನು ಹೀನ ವಿಷಯಗಳುಂಬ ಶ್ವಾನನಂತಿರುವೆ' ಎಂಬುದು ಅವರಿಗೆ ಎಷ್ಟು ಮಾತ್ರಕ್ಕೂ ಅನ್ವಯಿಸುವಂತಹದಲ್ಲ. ಅದು ಲೋಕರೂಢಿಯ ಮಾತೆಂದೇ ಬಗೆಯತಕ್ಕದು

### ೨೦೩

ಪುಟ್ಟಿದೆ ಭುವಿಯೊಳು ಬಹುದಿನ ಕಳೆದೆನೊ
ಪುಟ್ಟಿಸ ಬೇಡವೆನ್ನ ಪ

ಪಟ್ಟಾಭಿರಾಮನೆ ಪರಮ
ಘಟ್ಯಾಗಿ ನಿನ್ನ ಪಾದಗಳ ನಂಬಿದೆ ದೇವ ಅ.ಪ

ಎಂಭತ್ತು ನಾಲ್ಕು ಲಕ್ಷ ಯೋನಿಯ
ಚೀಲಗಳಲಿ ಬಂದೆನೊ
ಕುಂಭಿಣಿಯೊಳು ಪುಟ್ಟಿ ಬಹು ಪಾಪಗಳ ಮಾಡಿ
ಕುಂಭೀಪಾಕದಿ ಬೆಂದೆನೊ

ಅಂಬುಜಮಿತ್ರನ ಸುತನಾಳುಗಳ ಕೈಲಿ
ಅಮಿತಯಾತನೆಗೊಂಡೆನೊ
ಅಂಬುಜನಾಭನೆ ಅಖಿಳ ಸುರರೊಡೆಯನೆ
ಅರ್ತಾರ್ತಿಹರನೆಂದು ಕೇಳಿ ಬಂದೆನು ನಾನು ೧

ಜೇನಿನೊಳಗೆ ಬಿದ್ದ ನೊಣದಂತೆ ಸತಿಸುತ
ಜನಪಾಶ ಬದ್ಧನಾದೆ
ಮೀನು ಮಾಂಸದಾಸೆಗ್ಹೋಗಿ ಸಿಕ್ಕಿದಂತೆ
ಮೋಸ ಹೋದೆನೊ ಬರಿದೆ
ಏಣವು ಕಿಂಕಿಣಿಧ್ವನಿಗೆ ಮರುಳಾದಂತೆ
ಇಳೆಯೊಳು ಮಂಕಾದೆನೊ
ಏನೆಂಬೆ ದಾಸರಿ ಕೋಡಗದಂದದಿ
ಕುಣಿಯುವೆ ನಾನೆಲ್ಲ ಜನಗಳ ಮುಂದೆ ೨

ಕಾಯ ಪೋಷಣೆಗಾಗಿ ಹೇಯಕರ್ಮಂಗಳ
ಕಾಲ ಕಾಲದಿ ಮಾಡ್ದೆನೊ
ಜಾಯಾದಿಗಳ ರಕ್ಷಣೆಮಾಡೆ ಅದರಿಂದ
ಜಾಗರೂಕನಾದೆನೊ
ನ್ಯಾಯರಹಿತನಾಗಿ ಗುರು ಹಿರಿಯರ ಪಾದ
ಭಜನೆ ಮಾಡದೆ ಪೋದೆನೊ
ಕಾಯಜನ್ಯೆಯನೆ ಶ್ರೀಕೃಷ್ಣರಾಯನೆ
ಕಾಯಬೇಕೆನ್ನಪರಾಧಗಳನು ದೇವ ೩

## ೧೬೩

ಪ್ರಾಣಪತೇ ನೀ ಸಲಹೊ ಪ

ಜಾಣ ಲಕ್ಷ್ಮಣನಿಗೆ ಪ್ರಾಣದಾನವ ಗೈದ ಅ.ಪ

ಧೀರಶೂರ ಗಂಭೀರ ಕಪಿ ವೀರನೆ
ಭಾರತಿಕಾಂತನೆ ಮರುತಾವತಾರನೆ ೧

ಸೀತಾಪತಿಯ ದೂತ ಖ್ಯಾತ ಹನುಮಂತನೆ
ಮತಿವಂತ ಭೀಮನೆ ಯತಿ ಮಧ್ವರಾಯ ೨

ದುಷ್ಟ ಶಿಕ್ಷ ಬಲು ಕಷ್ಟ ನಿವಾರಣ
ಇಷ್ಟವ ಪಾಲಿಪ ಸಿರಿಕೃಷ್ಣನ ದೂತನೆ ೩

೧೧೨

ಬಲ್ಲವಗಿಲ್ಲಿದೆ ವೈಕುಂಠ ಪ

ಬಲ್ಲವಗೆಲ್ಲೂ ಶ್ರೀಹರಿ ಪೂಜೆ ಅ

ಶ’ರೀರ ಹರಿಯ ಪಟ್ಟಣ ಹೃದಯ
ಸರೋಜವಾತನ ಅರಮನೆ
ಸೂರ್ಯಾದಿ ದೇವರು ಚಕ್ಷುರಾದಿಗಳಲ್ಲಿ
ದ್ವಾರಪಾಲಕರಾಗಿ ಇಪ್ಪರೆಂದು ೧

ನಡೆ ಸರ್ವದಾ ಶ್ರೀಹರಿಯ ಯಾತ್ರೆ
ನುಡಿ ಸರ್ವ ಶಬ್ದಾರ್ಥ ಹರಿಯನಾಮ
ಬಿಡದೆ ಶ್ರೀಹರಿಗೆರಗುವ ಚೇತನ
ಜಡಗಳೆಲ್ಲ ಶ್ರೀಹರಿಯ ಪ್ರತಿಮೆಯೆಂದು ೨

ನಾರಾಯಣ ಅನಿರುದ್ಧ ರೂಪಗಳಿಂದ
ಶ್ರೀರಮಣನೆ ಭೋಜ್ಯಗಳಲ್ಲಿಪ್ಪ
ಸಾರ ಅಂಶವನು ಪ್ರದ್ಯುಮ್ನ ಸಂಕರುಷಣ
ಮೂರುತಿಯಿಂದ ಭುಂಜಿಪನೆಂದು ೩

ಹರಿ ಚರಾಚರ ಸರ್ವ ಜಗದ್ಭರಿತ
ಮುರಹರನಿದ್ದುದೆ ವೈಕುಂಠ
ನರಹರಿಯಲಿ ನವವಿಧ ಭಕುತಿಗೆ
ಸರಿಸಮವೆಂದಿಗಿಲ್ಲವೆಂದು ೪

ಜಾಗರಾದಿಗಳಲ್ಲಿ ವಿಶ್ವಾದಿ ಮೂರುತಿ
ಯೋಗಿ ಶ್ರೀಕೃಷ್ಣನೆ ವಿಷಯಂಗಳ
ಭೋಗಿಪನೆಂಬ ಯೋಗಿಗೆ ವಿಹಿತ
ಭೋಗಂಗಳೆಲ್ಲ ಯಾಗಂಗಳೆಂದು ೫

ಶ್ರೀಹರಿಯು ಸರ್ವವ್ಯಾಪಿಯೆಂಬುದನ್ನು ಮಾಧ್ವ ತತ್ವ ಜ್ಞಾನದ ಹಿನ್ನಲೆಯಲ್ಲಿ ವಿವರಿಸಲಾಗಿದೆ. ಅವನನ್ನು ಪೂಜಿಸುವುದೆಂದರೆ, ನಮ್ಮ ಶರೀರವು ಒಂದು ಪಟ್ಟಣವಾಗಿ, ಹೃದಯವು ಆತನ ಅರಮನೆಯಾಗಿ, ಸೂರ್ಯ ಮುಂತಾದ ದೇವತೆಗಳು ನಮ್ಮ ಕಣ್ಣು ಮುಂತಾದ ಅಂಗಗಳಲ್ಲಿ ದ್ವಾರಪಾಲಕರಾಗಿ ತಿಳಿದು ಆರಾಧಿಸಬೇಕು. ಆಗ ನಮ್ಮ ನಡಿಗೆಯೇ ತೀರ್ಥಕ್ಷೇತ್ರಗಳಿಗೆ ಹೋಗುವ ಯಾತ್ರೆ, ನಾವು ನುಡಿದದ್ದು ಶ್ರೀ ಹರಿಯ ನಾಮೋಚ್ಚಾರ, ಚೇತನ, ಅಚೇತನ (ಜಡ) ವಸ್ತುಗಳೆಲ್ಲ ಅವನ ಪ್ರತಿಮೆಗಳಾಗುತ್ತವೆ. ಈ ಪರಿಕಲ್ಪನೆ ೧೮/೧೯ ಶತಮಾನದಲ್ಲಿದ್ದ ತಾಮ್ರಪರ್ಣಿ ಆಚಾರ್ಯರು ರಚಿಸಿದ ‘ಸತ್ತತ್ವರತ್ನ ಮಾಲಾ’ದಲ್ಲಿ ವಿವರವಾಗಿ ಬಂದಿದೆ. ಅದರಂತೆ ನಾವು ಸೇವಿಸುವ ಆಹಾರಾದಿಗಳಲ್ಲಿ ವಿವಿಧ ದೇವತೆಗಳಿದ್ದು, ಶ್ರೀಹರಿಯೇ ಪ್ರದ್ಯುಮ್ನ ಸಂಕರ್ಷಣ ರೂಪಗಳಿಂದ

ಅದನ್ನು ಸೇವಿಸುವನು. ಭೋಜ್ಯ ವಸ್ತುಗಳಲ್ಲಿಯ ದೇವತಾ ಸಾನ್ನಿಧ್ಯದ ವಿವರಗಳು ಜಗನ್ನಾಥದಾಸರ ಹರಿಕಥಾಮೃತಸಾರದ ನೈವೇದ್ಯ ಸಂಧಿಯಲ್ಲಿ ಬಂದಿವೆ.

'ಜಾಗರಾದಿ ವಿಶ್ವಮೂರುತಿ'.....ಎಂಬ ಕೊನೆಯ ನುಡಿಗೆ ಭಗವದ್ಗೀತೆಯಲ್ಲಿ ಬಂದ 'ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ' ಸಂಯಮೀ। ಯಸ್ಯಾಂ ಜಾಗ್ರತಿ ಭೂತಾನಿ ಸಾನಿಶಾ ಪಶ್ಯತೋ ಮುನೇಃ' ಎಂಬ ಶ್ಲೋಕದ (೨-೬೯) ಹಿನ್ನಲೆ ಇದೆ.

### ೧೧೩

ಬಾಯೊಳು ಉಂಗುಷ್ಟವನಿಟ್ಟ
ಮಾಯವ ನೋಡಮ್ಮಾ ಪ

ಶ್ರೀಯರಸನೀಲಮೇಘ
ಛ್ಛಾಯ ಕೃಷ್ಣರಾಯತನ್ನ ಅ.ಪ.

ಕಂಜಜಾತ ಕಾಶೀಶಾ ಮೃತ್ಯುಂಜಯಾಹಿ ವಿಷವಲ
ಭಂಜನಾದಿಗಳು ಈತನಿಗಂಜಿಕೊಂಬುವರು
ಮಂಜುಳಾತ್ಮ ನಿಜಕರ ಕಂಜದಿಂದ ಪಾದವೆತ್ತಿ
ಎಂಜಲ ಮಾಡುವನು ನಿರಂಜನ ತಾ ಲೀಲೆಯಿಂದ ೧

ಘಟಿತ ಹಾಟಕ ಮಣಿಘಟಿತ ಕಂಕಣಾಂಗದ
ಕಟಿಸೂತ್ರಗಳನಿಟ್ಟು ನಟನಂದದಿ
ವಟಪತ್ರ ಶಾಯಿ ಓಷ್ಠಪುಟದಿ ಪಾದವನಿಕ್ಕಿ
ಕಟಬಾಯೊಳಮೃತವ ಸ್ಫುಟವಾಗಿ ಸುರಿಸುತ ೨

ಲಿಂಗದೇಹ ಭಂಗವಾಗಿ ಸಂಗವನ್ನು ದೂರಗೈಸೆ
ತುಂಗಮತಿವಂತ ಋಷ್ಯಶೃಂಗಾದಿಗಳು
ಅಂಗೀಕರಿಸುವ ನಿತ್ಯ ಮಂಗಳ ದೇವಿಯರ
ಗಂಗೆಯ ಪಡೆದ ಶಿವನಂಗ ಶುದ್ಧಿಗೈಸಿದಾತನ ೩

ರ'ಮ್ಮೆ ಅರಸನು ತನ್ನ ಅಮ್ಮನೆಂಬ ಗೋಪಿ ಗೃಹ
ಕರ್ಮರತಳಾಗಿರಲು ಒಮ್ಮನದಿಂದ
ಅಮರಗಣಾರಾಧೀತ ಕ್ಷಮೆಯನಳೆದ ಪಾದ
ಸುಮ್ಮನೆ ಕರದೊಳೆತ್ತಿ ಕಮ್ಮಗಿಹದೆಂದು ತನ್ನ ೪

ಕರಪಲ್ಲವಾಮೃತ ಲೋಕವಂದ್ಯರೂಪ ಫಣಿಶೇ-
ಖರಾದ್ರಿವಾಸ ಭಕ್ತನಾಕ ಭೂರುಹ ನೀ
ಕರೆಸಿ ದುರಿತವ ಸೋಕದಂತೆ ನಮ್ಮನೀಗ
ಸಾಕುವ ಪರಮ ಕರುಣಾಕರ ಶ್ರೀಕೃಷ್ಣ ೫

ತನ್ನ ಬಾಯಿಯಲ್ಲಿ ಪಾದದ ಅಂಗುಷ್ಟವನ್ನಿರಿಸಿಕೊಂಡು ಬಾಲಲೀಲೆಯಲ್ಲಿ ತೊಡಗಿದ ಪರಮಾತ್ಮನನ್ನು ಇಲ್ಲಿ ವರ್ಣಿಸಿದ್ದಾಗಿದೆ. ಅವನ ಪಾದಮಹಿಮೆ ಈ ನಿಮಿತ್ತದಿಂದ ವರ್ಣಿತವಾಗಿದೆ.

೨೦೪

ಬಾರಯ್ಯ ಎನ್ನ ಮನ ಮಂದಿರಕೆ ಪ

ಬೇರೊಂದು ಯೋಚನೆ ಮಾಡದೆ ಸಿರಿಪತಿ ಅ.ಪ

ನಾ ರಾಜಸ ಬುದ್ಧಿಯೆಂಬಿಯ ನಿನ್ನ
ಕಾರುಣ್ಯದ ಸೋನೆ ಸೊರಗುವುದೆ
ವಾರ ವಾರಕೆ ಮೇಘವಾರಿಯ ಕರೆದರೆ
ಧಾರುಣಿಗೆ ಕ್ಷಾಮ ಬರುವುದೆ ಕೃಷ್ಣ ೧

ತಾಮಸ ಬುದ್ಧಿಯೆಂಬಿಯ ನಿನ್ನ
ಶ್ರೀಮೂರ್ತಿ ಹೊಳೆದರೆ ತಮವಡಗದೆ
ಶ್ರೀ ಮನೋಹರನೆ ಭಾನು ಉದಿಸಿದರೆ
ತಾಮಸವಡಗದೆ ಜಗದೊಳು ಕೃಷ್ಣ ೨

ನಾ ದೋಷಿ ಕಠಿಣನೆಂತೆಂಬೆಯ ನಿನ್ನ
ಪಾದಪದುಮ ಪಾಪಹರವಲ್ಲವೆ
ಆ ದುಷ್ಟ ಶಿಲೆ ಸೋಕೆ ಋಷಿಪತ್ನಿಯಾದಳು
ನೀ ದಯಮಾಡೆ ನಾ ನೀಚನೆ ಸಿರಿಕೃಷ್ಣ ೩

೧೪೪

ಬಾರೊ ಬೇಗ ನೀರಜಾಕ್ಷ
ದೂರು ಇದು ಯಾತಕೊ ಪ

ಮೊಸರು ಮಾರುವ ಗೊಲ್ಲತಿಯರ
ಅಸವಳಿಸಿ ಕೈಯ ಪಿಡಿದು
ವಶನಾಗು ಎಂದು ಪೇಳಿ
ನಸುನಗುತಲಿದ್ದೆಯಂತೆ ೧

ಕುಸುಮಶರನ ಪೆತ್ತವನೆ
ಬಸವನಾದೆ ಊರೊಳಗೆ
ಶಶಿಮುಖೇರ ದೂರು ಬಹು
ಪಸರಿಸಿತು ಪೇಳಲಾರೆ ೨

ಕಂದಕೇಳು ಇಂದುಮುಖಿಯರ
ಹೊಂದಿ ಆಡಲೇಕೆ ಈ
ಮಂದಿರದೊಳಾಡಿ ಸಲಹೊ
ತಂದೆ ಉಡುಪಿ ಸಿರಿಕೃಷ್ಣ ೩

## ೨೧೦

ಬಿಗಿಯದಿರು ಬಿಗಿಯದಿರು ಎಲೆ ಮಾನವಾ
ಧಿಗಿ ಧಿಗಿ ಧಿಗಿಯೆನುತ ನಿನಗೇಕೆ ಗರ್ವ ಅ

ವಿರಕ್ತಿಯಲಿ ಹನುಮನೆ ವಿವೇಕದಲಿ ವಸಿಷ್ಠನೆ
ಶೂರತನದಲಿ ಶಂತನುತನಯನೇನೊ
ಸ್ವರದಲಿ ತುಂಬುರನೆ ಗೀತದಲಿ ನಾರದನೆ
ಪರಾಶರ ಮುನಿಯೆ ವ್ರತತಿ ಪಟ್ಟದಲ್ಲಿ ೧

ಚೆಲುವಿನಲಿ ರಾಮನೆ ಸತ್ಯದಿ ಹರಿಶ್ಚ್ಚಂದ್ರನೆ
ಛ'ಲದಲ್ಲಿ ಋಷಿ ವಿಶ್ವಾಮಿತ್ರನೇನೋ
ಬಲದಲ್ಲಿ ವಾಲಿಯೇ ಹಲಧರನೆ ಹಿರಣ್ಯಕನೆ
ಬಿಲು ವಿದ್ಯದಲಿ ಪರಶುರಾಮನೇ ನೀನು ೨

ತ್ಯಾಗದಲಿ ಕರ್ಣನೇ ಭೋಗದಲಿ ಶತಮಖನೆ
ಯೋಗದಲಿ ಶುಕಸನಕ ಜನಕನೇನೋ
ಭಾಗ್ಯದಲಿ ಬಲಿಚಕ್ರವರ್ತಿಯೋ ದಶಶಿರನೊ
ದೀರ್ಘದಲಿ ಮೇರುವೇ ಮಂದರವೆ ನೀನು೩

ಭಕ್ತಿಯಲಿ ಭರತನೆ ಭಾವದಲಿ ಲಕ್ಷ್ಮಣನೆ
ಯುಕ್ತಿಯಲಿ ನೀನಿಂದುಸೂತನೇನೊ
ಶಕ್ತಿಯಲಿ ಕಾಲನೆ ಭುಕ್ತಿಯಲಗಸ್ತ್ಯನೆ
ಮುಕ್ತಿ ಪಡೆವಲ್ಲಿ ಖಟ್ವಾಂಗರಾಯನೇನೊ ೪

ಶಾಪದಲಿ ಬ್ರಹ್ಮನೆ ತಾಪದಲಿ ಸೂರ್ಯನೆ
ಕೋಪದಲಿ ಮಹೇಶನೇನೋ ನೀನು
ತಪದಲ್ಲಿ ಹನುಮನೆ ವ್ರತದಿ ರುಕ್ಮಾಂಗದನೆ
ಕೃಪೆಯಲ್ಲಿ ಶ್ರೀ ಕೃಷ್ಣದೇವನೆ ನೀನು ೫

೧೪೫

ಬಿಡದೆ ನಿಮ್ಮನು ಪೂಜಿಸುವ ದಾಸರಿಗೆ ಪ

ತಡೆಯದೆ ವೈಕುಂಠವಹುದು ಸೋಜಿಗವೆ ಅ.ಪ.

ಬಡತನವಾಗೆ ಬಾಲತ್ವದ ಸಖನೆಂದು
ಮಡದಿ ಪೋಗೆನ್ನೆ ಕುಚೇಲ ಬಂದು
ಪಿಡಿತುಂಬ ಅವಲಕ್ಕಿಯ ತಂದು ಕೊಡಲಾಗ
ಕಡು ಮೆಚ್ಚಿ ಅವನಿಗೆ ಸೌಭಾಗ್ಯವನಿತ್ತೆ ೧

ಷಡುರಸಾಯನದೂಟ ರಚಿಸಿರಲು ಕುರುಪತಿಯು
ಬಡವಿದುರನ ಮನೆಯ ಕುಡುತೆ ಪಾಲ್ಕುಡಿದು
ಪೊಡವಿಯನು ಮೆಟ್ಟಿ ಪಾಪಿಷ್ಠನನು ಕೆಡಹಿದೆ
ಬಡವರಾಧಾರಿಯೆಂಬ ಬಿರುದನು ಪಡೆದೆ ೨

ಕಡಲಶಯನನೆ ಕುಬುಜೆ ತಂದ ಗಂಧಕೆ ಮೆಚ್ಚಿ
ಒಡನೆ ಅವಳನು ಸುರೂಪಿಯ ಮಾಡಿದೆ
ಸಡಗರದಿ ಅನವರತ ಬಿಡದೆ ಪೂಜಿಸುವಂಥ
ದೃಢಭಕ್ತಗೇನುಂಟು ಏನಿಲ್ಲ ಸಿರಿಕೃಷ್ಣ ೩

'ಕುಬುಜೆ ತಂದ ಗಂಧಕೆ ಮೆಚ್ಚಿ'-ಕಂಸನ ಅರಮನೆಯ ದಾಸಿಯಾದ ಈ ಕುಬ್ಜೆ, ತ್ರಿವಕ್ರೆ, ಕುರೂಪಿ ಗಂಧದ ಬಟ್ಟಲನ್ನು ಹಿಡಿದು ಹೊರಟಾಗ ಕೃಷ್ಣ ಬಲರಾಮರು ಸಂಧಿಸಿದರು. ಅವಳಿಂದ ಗಂಧವನ್ನು ತೆಗೆದುಕೊಂಡರು. ಕೃಷ್ಣನು ಅವಳ ಅಂಕುಡೊಂಕುಗಳನ್ನು ಹೋಗಲಾಡಿಸಿ ಸುರೂಪಿಯನ್ನಾಗಿ ಮಾಡಿದನು.

೧೪೬

ಬೃಂದಾವನದಿ ನೋಡುವ ಬಾರೆ ಗೋ- ಪ

ವಿಂದನಾಡುವ ಸಂದಣಿ ಸಾಲದೆ ಸಖಿ ಅ.ಪ.

ಮುನಿಗಳು ತರು ಪಕ್ಷಿ ಮೃಗಂಗಳಾಗಿರೆ
ಸನಕಾದಿಗಳು ಗೋವುಗಳಾಗಿರೆ
ಅನಿಮಿಷರೆಲ್ಲರು ಗೋಪಾಲರಾಗಿರೆ
ದನುಜಾಂತಕನು ಮನುಜನಂತಾಗಿರೆ ೧

ತಳಿತ ತೋರಣದಿಂ ತಂಪಿನ ನೆಳಲಿಂ
ಮಳೆಯಾಗಿ ಸುರಿವಾ ಮಕರಂದ ಜಲದಿಂ

ಫಲ ಪುಂಜಗಳಿಂ ಶುಕಚಾಟುಗಳಿಂ
ನಳಿನನಾಭನನುಪಚರಿಪ ವೃಕ್ಷಗಳುಳ್ಳ ೨

ತಳಿತ ತರುಗಳೆಲ್ಲ ತಂತಮ್ಮ ಜಾತಿಯ
ಉಲುಹನುಳಿದು ಕಣ್ಣುಮುಚ್ಚಿ ತೆರೆಯುತ್ತ
ನಳಿನನಾಭನ ವೇಣುಗೀತೆಯ ರಸದಲ್ಲಿ
ಮುಳುಗಿ ಮುನಿಗಳಂತಿಪ್ಪ ಪಕ್ಷಿಗಳುಳ್ಳ ೩

ಚಿತ್ತಜನೈಯನ ವೇಣುನಾದವ
ಎತ್ತಿದ ಕಿವಿಯಿಂದ ಸವಿಯುತಲಿ
ಮತ್ತಾದ ಸುಖಜಲ ಕಡಲಾಗಿ ಹರಿಯಲು
ಚಿತ್ತರದಂತಿಪ್ಪ ತುರುವಿಂಡುಗಳುಳ್ಳ ೪

ರಂಗನ ಪದ ನಖ ತಿಂಗಳ ಬೆಳಕಿಗೆ
ತುಂಗ ಚಂದ್ರಕಾಂತ ಶಿಲೆ ಒಸರಿ
ಹಿಂಗದೆ ಹರಿದು ಕಾಳಿಂದಿಯ ಕೂಡಲು
ಗಂಗೆ ಯಮುನೆಯರ ಸಂಗಮದಂತಿಪ್ಪ ೫

ಸಿರಿಯರಸನ ನಗೆಮೊಗವೆಂಬ ಚಂದ್ರನು
ವರಕೌಸ್ತುಭವೆಂಬ ಬಾಲರವಿಯು
ಎರಡನು ಕಂಡು ಚಕೋರ ಚಕ್ರವಾಕ
ಇರುಳು ಹಗಲು ಎಂದು ಹೋಗುತಲಿರುತಿಪ್ಪ ೬

ಹರಿಯ ಕೊಳಲ ಸ್ವರದತಿ ಮೋಹನಕೆ
ತರುಮೊಗ್ಗೆಗಳಿಂ ಪುಳುಕಿತವಾಗೆ
ಗಿರಿಯು ಝುರಿಯಾ ನೆವದಿಂ ಕರಗಲು
ತೊರೆಯು ಸುಳಿಯ ನೆವದಿಂದ ತಾ ನಿಲ್ಲುವ ೭

ಅಳಿಗಳು ಗಾನದಿಂದುಲಿದುಲಿದಾಡುತ್ತ
ಹಲವು ವರ್ಣದ ವನದೇವತೆಗಳೆಲ್ಲ
ಚಲುವ ಕುಂಡಲ ತಾಳಮೇಳದ ರಭಸಕ್ಕೆ
ನಲಿನಲಿದಾಡುವ ನವಿಲ ಹಿಂಡುಗಳುಳ್ಳ ೮

ನಳನಳಿಸುವ ವನಮಾಲೆ ಇಂದ್ರಚಾಪ
ಪೊಳೆವ ಪೊಂಬಟ್ಟೆ ಮಿಂಚು ವೇಣುಗಾನ
ಎಳೆಯ ಗರ್ಜನೆ ಶ್ಯಾಮಮೇಘ ಕೃಷ್ಣ
ಮಳೆಯ ಮೇಘವೆಂದು ಚಾತಕ ನಲಿಯುತ ೯

೧೧೪

ಭವರೋಗ ಹರವಾದೊಂದೌಷಧಿ
ತ್ರೈಭುವನ ವಿಖ್ಯಾತವಾಗಿದೆ ಬುದ್ಧಿವಂತರಿಗೆ ಪ

ಚತುರ ವೇದಶಾಸ್ತ್ರ ಮೇಣಷ್ಟಾದಶವಾದ
ಸ್ಮೃತಿತರ್ಕ ಪೌರಾಣದಡವಿಯಲ್ಲಿ
ಮತಿವಂತ ಮುನಿಗಳಾರಿಸಿ ತಂದು ತಾವು
ಪ್ರತಿಗಂಡು ಲೋಕಕ್ಕೆ ಹಿತವಾಗಿ ತೋರುವ ೧

ಅಡವಿಯೊಳರಸಿ ಅಗಿಯಲಿಲ್ಲ ತಂದು
ಇಡಿದು ಚೂರ್ಣವಮಾಡಿ ಒಣಗಿಸಲಿಲ್ಲ
ಕುಡಿದು ಕಹಿಖಾರವೆಂದೆನಲಿಲ್ಲ ನೋಡೆ
ಬಡವ ಬಲ್ಲಿದರೆಲ್ಲರಿಗೆ ಸಾಧ್ಯವಾಗಿಪ್ಪ ೨

ಪಥ್ಯಪಾನದ ನೇಮಗಳಿಲ್ಲ ಹೋಗಿ
ಸ್ತೋತ್ರ ಮಾಡಿ ವೈದ್ಯನ ಬೇಡಲಿಲ್ಲ
ನಿತ್ಯಸೇವಿಸೆ ಆಲಸ್ಯಗಳಿಲ್ಲ ನೋಡೆ
ಮತ್ಯಾರ ಮಾತ ನಡೆಸುವ ಬಗೆಯಿಲ್ಲ ೩

ರಸಪಾಷಾಣಾದಿ ಮೂಲಿಕೆಯನು ತಂದು
ಕುಶಲದಿ ಶೋಧಿಪ ಕೋಟಲೆಯಿಲ್ಲ
ಮಿಸುಣಿ ವರ್ಣದ ಭಸ್ಮ ತೈಲಗಳೆಂತೆಂಬ
ಫಸಣೆಯಿಲ್ಲದೆ ಗಾಂಧರ್ವರು ಸೇವಿಪ ೪

ಒಮ್ಮೆ ಸೇವಿಸೆ ಜನ್ಮ ಜನ್ಮಂಗಳ ದು–
ಷ್ಕರ್ಮ ಸವೆದು ಸಕಲಾನಂದವೀವ
ಘಮ್ಮನೆ ಕೃಷ್ಣರಾಯನ ಪುರದಲಿ ಬಿಡ
ದೆಮ್ಮ ರಕ್ಷಿಪ ಮುದ್ದುಕೃಷ್ಣ ಕೃಷ್ಣಯೆಂಬ ೫

ಭವರೋಗ ನಿವಾರಣೆಗೆ ಔಷಧ–ಎಂದರೆ ಭಗವಧ್ಯಾನ. ಈ ಔಷಧಿ ಅಡವಿಯ ಗಿಡಮೂಲಿಕೆಯಿಂದ ಮಾಡಿದ್ದಲ್ಲ ; ಕುಡಿಯುವುದಕ್ಕೆ ಕಹಿಯಾದದ್ದಲ್ಲ. ಪಥ್ಯ–ಪಾನದ ನೇಮಗಳಿಲ್ಲ. ಮತ್ತೆ ಬಡವ ಬಲ್ಲದರೆಂಬ ಭೇದ ಇಲ್ಲಿಲ್ಲ. ಯಾರೂ ಸೇವಿಸಬಹುದು ನಿತ್ಯವೂ. ಈ ರೀತಿ, ಲೌಕಿಕ ಔಷಧಿಯ ಹೋಲಿಕೆಯನ್ನಿತ್ತದ್ದು ಮನೋಜ್ಞವಾಗಿದೆ.

೧೬೪

ಮಂಗಳ ಮುಖ್ಯ ಪ್ರಾಣೇಶಗೆ ಪ

ಜಯ ಮಂಗಳ ಶುಭಮಂಗಳ ವಾಯುಕುಮಾರನಿಗೆ ಅ.ಪ

ಅಂಜನಾದೇವಿಯ ಕಂದಗೆ ಮಂಗಳ
ಕಂಜಾಕ್ಷ ಹನುಮಂತಗೆ ಮಂಗಳ
ಸಂಜೀವನವ ತಂದಾತಗೆ ಮಂಗಳ
ಸಜ್ಜನ ಪರಿಪಾಲಗೆ ಮಂಗಳ ೧

ಅತಿ ಬಲವಂತ ಶ್ರೀಭೀಮಗೆ ಮಂಗಳ
ಪ್ರತಿಮಲ್ಲರ ಗೆಲಿದಗೆ ಮಂಗಳ
ಸತಿಯ ಸೀರೆಯ ಸೆಳೆದ ದೈತ್ಯನ ಕೊಂದು
ಪೃಥ್ವಿ ಮೇಲೆ ಚೆಂಡನಾಡಿದಗೆ ೨

ಸೀತಾದೇವಿಯ ಬಾಲಗೆ ಮಂಗಳ
ಶ್ರೀರಾಮನ ಭಂಟಗೆ ಮಂಗಳ
ಗೋಪಾಲ ಕೃಷ್ಣನ ಪೂಜೆಯಮಾಡುವ
ಗುರು ಮಧ್ವ ಮುನಿರಾಯಗೆ ಮಂಗಳ ೩

೧೪೭

ಮನ್ನಿಸೆನ್ನ ಮನ್ಮಥಜನಕ ಮಧು ಸೂ-
ದನ್ನ ಮಂದರೋದ್ಧಾರ
ನಿನ್ನ ನಂಬಿದೆ ನಿರಂತರದಿ ನೀನಿಹಪರದಲಿ ಕಾಯಯ್ಯ ಅ

ಶ್ರೀರಂಗ ಖಗ ತುರಂಗ ಜಗದಂತ'ರಂಗ
ವಿಧಿ ಕುರಂಗಧರ ನಮಿತ ಸಾರಂಗ
ಪರಿಪಾಲ ಸುಗುಣಜಾಲ ಲಕುಮಿಲೋಲ
ಕೃಪಾರಸತರಾಂಗಿತಾಪಾಂಗ ದುರಿತಭಂಗ
ಧೃ'ತರಥಾಂಗ ಶುಭಾಂಗ ೧

ಕಾರುಣ್ಯನಿಧಿ ಶರಣ್ಯವತ್ಸಲ ಲೋಕ
ಶರಣ್ಯ ದೇವವರಣ್ಯ ಘನಶ್ಯಾಮ
ಚರಣ ಕಮಲಕ್ಕೆ ಶರಣು ಹೊಕ್ಕೆ ತಾಮಸವ್ಯಾಕೆ
ಸಲಹೊ ಶ್ರೀಧರ ಯದುವೀರ ದುರಿತದೂರ
ವೇದಸಾರ ಗಂಭೀರ ೨

ಸನಂದನಾದಿ ಮುನಿಪ್ರಿಯ ಸಚ್ಚಿದಾನಂದ
ನಂದತನಯ ಏನೆಂದು ಪೇಳ್ವೆ ನಿನ್ನ ಮಾಯಾ
ಮರೆಯಲರಿಯೆ ಯುಧಿಷ್ಠಿರ ಧನಂಜಯ

ಸಹಾಯ ಶ್ರೀಕೃಷ್ಣರಾಯ ಸಹೃದಯ
ಗೇಯ ನಮೋ ನಮೋ ಜೀಯ ೩

## ೧೪೮

### ಗದ್ಯ ದಂಡಕ

ಮರುಗ ಮೊಲ್ಲೆ ಮಲ್ಲಿಗೆ ಜಾಜಿ ಸಂಪಿಗೆ
ತುರುಬಿಲೊಪ್ಪುವ ಚೂಡಾರತುನ ಮಾಣಿಕದ
ಮೆರೆವ ಚಂದ್ರ ಸೂರಿಯ ಮುಡಿಯಲೊಪ್ಪೆ
ಕುರುಳು ಗೂದಲು ಬೈತಲೆ ಥಳವುಗಳ
ಮೃಗನಾಭಿ ತಿಲಕನೊಸಲಲಿ ಹಚ್ಚೆ ಬಟ್ಟು
ಮದನ ಸಿಂಗಾಡಿ ಸೋಲಿಸುವ ಹುಬ್ಬುಗಳ
ಕುಡುತೆಗಂಗಳ ಥಾಳ ಜಗವ ಮೋಹಿಸುತಿಪ್ಪ
ಕಡೆಗಣ್ಣು ಕೆಂಪು ಹಚ್ಚೆಯ ರೇಖೆಗಳ
ಬೆಡಗು ಮುತ್ತಿನ ಮೂಗುತಿ ನಾಸಿಕದಲ್ಲಿ
ಕಡುಕೆಂಪು ಅಧರ ಚುಬುಕ ದಂತಗಳ

ಥ಼ಳಥಳಿಸುವ ಕದಪಿನ ಮೇಲೊಪ್ಪುವ
ಹೊಳೆವೊ ಮುತ್ತಿನವಾಲೆ ಕೊಪ್ಪುವೆಂಠೆಗಳ
ನಳನಳಿಸುವ ಎಳೆ ನೀಲದ ಬಾವುಲಿ
ಹೊಳೆವ ಆಣೆ ಮುತ್ತಿನಗೊಂಚಲುಗಳ
ಶಂಖ ತ್ರಿರೇಖೆಯಿಂದೊಪ್ಪುವ ಗಳದಲ್ಲಿ
ಕುಂಕುಮ ಕಸ್ತೂರಿ ಅಗರು ಚಂದನದ
ಮುತ್ತಿನ ಮಲುಕು ಪೆಂಡೆಯಸರ ಕೊರಳಲ್ಲಿ
ಹತ್ತೆಗಟ್ಟಿದ ವಾಗ್ಗೊರಳು ಮುತ್ತುಗಳ
ಮುತ್ತು ಮಾಣಿಕ ನವರತ್ನದ ಚಿಂತಾಕ-
ವತ್ತಿ ಸೇರಿದ ಕಂಠಮಾಲೆ ಸರಗಳ

ಪವಳದಸರ ಏಕಾವಳಿ ಸರಗಳು
ಪರಿಪರಿ ಒಪ್ಪುವ ಪದಕ ತಾಳಿಗಳ
ಕರಿಯ ಸೊಂಡಿಲು ಸೋಲಿಸುವ ತೋಳ್ಗಳ ಮೇಲೆ
ಮೆರೆವ ಭುಜಕೀರ್ತಿ ತೋಳ ಬಂದಿಗಳ
ಝುಡಿವೊದುಂಡು ರಕ್ಷೆಯ ಮಣಿ ತಾಯಿತ್ತು
ಮೆರೆವ ಹಮ್ಮೀರ ತಾಯಿತಿ ಕಾಂತಿಗಳ
ಕಡಗ ಕಂಕಣ ಸುರಿಗೆ ಬಿಚ್ಚು ಬಳೆಗಳು
ಹಿಡಿವುಡಿಯಲ್ಲಿ ವಜ್ರದ ಥಳವುಗಳ

ಕಡು ಮೋಹವಾದ ಮುರುಡಿಯ ಸರಪಣಿ
ಝುಡಿವ ಮುಂಗೈಯ ಮುರಾರಿ ಕವಡೆಯ

ಜಾತಿಪವಳ ಕೈ ಕಟ್ಟು ಮುಂಗೈಯಲ್ಲಿ
ಖ್ಯಾತಿವಡೆದ ಮುತ್ತಿನ ಕಂಕಣಗಳ
ಅರುಣನ ಉದಯ ಸೋಲಿಸುವ ಅಂಗೈಯಲ್ಲಿ
ಪಿಡಿದು ಕಡೆವ ಕಡೆಗೋಲು ನೇಣುಗಳ
ಬೆರಳ ಮುದ್ರಿಕೆ ರಂಗು ನೀಲ ಮಾಣಿಕ್ಯಗಳು
ಪ್ರತಿಫಲಿಸುವ ಚಂದ್ರಕಾಂತಿಯ ಚೆಳ್ಳುಗುರು
ಕನಕ ಕಲಶ ಕುಚಗಳ ಮೇಲೊಪ್ಪುವ
ಮಿನುಗುವ ಚಂದ್ರಗಾವಿಯ ರವಿಕೆಗಳ
ಉರದಲೊಪ್ಪುವ ಶ್ರೀವತ್ಸ ಕೌಸ್ತುಭರತ್ನ
ಮೆರೆವ ವೈಜಯಂತಿ ಮಾಲೆ ಶೋಭಿಸುವ

ಉರದ ತ್ರಿವಳಿನಾಭಿ ಕಟಿಯಮೇಲೊಪ್ಪುವ
ಪದುಮ ಪಟ್ಟೆಯ ಚುಂಗುನೆರೆಯ ಸೊಬಗಿನ
ನಡುವಿಲೊಪ್ಪುವ ಚಲತಮದೊಡ್ಯಾಣವು
ಕಡುಮುದ್ದು ಉಡಿಗಂಟೆ ಝುಡಿತನೇವಳದ
ಉರುಟು ಕದಳಿ ಕಂಭದಂತೆ ಪೇರ್ದೊಡೆಗಳ
ಮೆರೆವ ಜಾನುಜಂಘೆ ಚರಣ ಕಮಲದ
ಮೆರೆವ ಕಾಲಂದಿಗೆ ಕಿರುಗೆಜ್ಜೆ ಸರಪಣಿ
ವೀರಮುದ್ರಿಕೆ ಮೆಂಟಿಕೆಯ ಪಿಲ್ಲೆಗಳ
ಅಂಕುಶಧ್ವಜವಜ್ರ ರೇಖೆಯಿಂದೊಪ್ಪುವ
ಕುಂಕುಮಾಂಕಿತವಾದ ನಖ ಚಂದ್ರಿಕೆಯ

ಶಂಕೆಯಿಲ್ಲದ ಶಕಟನ ತುಳಿದ ಪಾದ
ಬಿಂಕದಿಂದಲಿ ಕಾಳಿಂಗನ ಶಿರದಿ ನಿ
ಶ್ಶಂಕನಾಗಿ ತುಳಿದ ಮುದ್ದು ಪಾದ
ದುರುಳ ಕೌರವನ ಧರೆಗೆ ಕೆಡಹಿದ ಪಾದ
ಶರಣ ಜನರು ಸೇವಿಸುವ ಶ್ರೀಪಾದ
ಸಿರಿಯರಸಿಯು ಸೇವಿಸುವ ಶ್ರೀಪಾದ
ನಿರುತ ಸೇವಿಪ ನಮ್ಮ ಗುರು ಮಧ್ವಮುನಿಯ
ಹೃದಯ ಕಮಲ ವಾಸವಾಗಿಪ್ಪ ಕೃಷ್ಣನ
ಪದುಮ ಚರಣಕ್ಕೆ ನಮೊ ನಮೊ ನಮೋ ಎಂಬೆ ನಾ.

### ೧೭೨

ಮಹಿಮೆ ಸಾಲದೆ, ಇಷ್ಟೇ ಮಹಿಮೆ ಸಾಲದೆ ಪ

ಅಹಿಶಯನನ ಒಲುಮೆಯಿಂದ
ಮಹಿಯೊಳೆಮ್ಮ ಶ್ರೀಪಾದರಾಯರ ಅ.ಪ

ಮುತ್ತಿನ ಕವಚ ಮೇಲ್ಕುಲಾವಿ
ರತ್ನ ಕೆತ್ತಿದ ಕರ್ಣಕುಂಡಲ
ಕಸ್ತೂರಿ ತಿಲಕ ಶ್ರೀಗಂಧ ಲೇಪನ
ವಿಸ್ತರದಿಂದ ಮೆರೆದು ಬರುವ ೧

ವಿಪ್ರ ಹತ್ಯ ದೋಷ ಬರಲು
ಕ್ಷಿಪ್ರ ಶಂಖೋದಕದಿ ಕಳೆಯೆ
ಅಪ್ರಬುದ್ಧರು ದೂಷಿಸೆ ಗೇರೆಣ್ಣೆ
ಕಪ್ಪು ವಸನ ಶುಭ್ರಮಾಡಿದ ೨

ಹರಿಗೆ ಸಮರ್ಪಿಸಿದ ನಾನಾ
ಪರಿಯ ಶಾಕಗಳನು ಭುಂಜಿಸೆ
ನರರು ನಗಲು ಶ್ರೀಶಕೃಷ್ಣನ
ಕರುಣದಿಂದಲಿ ಹಸಿಯ ತೋರಿದ ೩

### ೧೪೯

ಮಾನಾಗ, ಉರಿಯು ಹೆಣ್ಣು ಹೈಕಳ ಕೂಡೆ
ಶ್ರೀನಾಥ ನಿನಗೆ ಸಲ್ಲದು ಮಕ್ಕಳಾಟ ಪ

ತರಳ ನೀನೆಮ್ಮ ಸೀರೆಗಳನೆತ್ತಿಕೊಂಡು
ತರುವನೇರುತ ಕಕ್ಕಳ ಕೆಳೆವೆ
ತರುವಳಿತನ ಸಾಕು ನಿನ್ನ ಪೇರುರದಲಿ
ತರುಣಿ ನಗುತಾಳೆ ಪೊಕ್ಕಾಟ ಸಾಕು ೧

ಅರಸಿನ ಮಗನೆಂದು ತಾಳಿದೆವಲ್ಲದೆ
ಸರಸಿಜಾಕ್ಷಿಯ ಮನೆಯ ಮಳಲಲ್ಲಿ
ಸರಸದೊಳಿಹರೆ ನಿನ್ನಂಗದೊಳಿರ್ದ
ಸುರರೋಡಬೇಕು ಸಲ್ಲದು ಮಕ್ಕಳಾಟ ೨

ನಿನ್ನ ಪೊಕ್ಕಳ ಬೊಮ್ಮ ನಿನ್ನುದರದ ಜಗ
ನಿನ್ನ ಅಂಗದೊಳಿದ್ದ ಸುರಮುನಿಗಳು
ನಿನ್ನನೆ ನಗುವರೊ ನೀನರಿಯದೆ ಎಮ್ಮ
ಚೆನ್ನ ಹೆದ್ದಾಟ ಹೊಕ್ಕಾಟ ಸಾಕು ೩

ಎಸಳು ಕಂಗಳನೋಟ ನಸುನಗೆ ಕೌಂಸ್ತುಭ
ಎಸೆವ ಕಂಠದಲಿ ತುಳಸಿಯ ಮಾಲಿಕೆ
ಮಿಸುಣಿಯ ಸರಪಣಿ ಹೊಸ ಕಾಲ ಪೆಂಡೆಯು
ಹೊಸ ಹೊಸ ಚೆನ್ನಿಗ ಪರಿಹಾಸ ಸಾಕೋ ೪

ತುತಿಸಿ ತುತಿಸಿ ಕಾಣರು ಬ್ರಹ್ಮರುದ್ರರು
ಮತಿಗೊಳಗಾಗೆ ಮುನೀಶ್ವರರ
ಶ್ರುತಿಗಳು ನಿನ್ನನು ಪುಡುಕಲರಿಯವು ಬಾಲ
ಸತಿಯರೊಡನೆ ಖೇಳಮೇಳವೆ ಸಾಕು ೫

ಸ್ನಾನಮಾಡಲೀಯೆ ಮೌನಗೌರಿಯ
ನೋನಲೀಯದೆ ಮೌನವ ಕೆಡೆಸಿ
ಧ್ಯಾನ ಮಾಡಲೀಯೆ, ನಿನ್ನ ಚೆನ್ನಿಗರು
ಹಾನಿ ನೀಗುವರು ಎಂಬುದರಿಯೆವೊ ೬

ಚೆಲುವರರಸ ಶಿಖರ ಶಿಖಾಮಣಿಯೆ
ಲಲನೆಯರ ಮನ ಸೂರೆಗಾರ
ಫಲಿಸಿತು ವ್ರತ ನಮ್ಮ ಕೃಷ್ಣ ನಿನ್ನೊಲುಮೆಯ
ಬಲೆಗೆ ಸಿಕ್ಕದರಾರೊ ಸೊಬಗು ಸುಗ್ಗುಳಿಯೇ ೭

## ೧೫೦

ಯಾಕೆ ಬೃಂದಾವನ ಯಾಕೆ ಗೋಕುಲ ನಮಗೆ
ಯಾಕೆ ಬಂದೆಯೊ ಉದ್ಧವ ಪ

ಯಾಕೆ ಸ್ನೇಹದ ಮಾತು ಲೋಕಮೋಹಕ ತಾನು
ಆ ಕುಬ್ಜೆಯನು ಕೂಡಿದ ಉದ್ಧವ ಅ

ಬಿಲ್ಲುಗಾರನ್ನೆಯನ ಬ್ಯಾಟೆನಗೆ ನಡೆ ನೋಟ
ಇಲ್ಲದಂತಾಯಿತಲ್ಲ
ತಲ್ಲಣಿಸುತ್ತಿದೆ ತಾಪ ಮೈಯೊಳು ಹೆಚ್ಚಿ
ಪರವಶವಾಯಿತಲ್ಲ
ಎಲ್ಲರನಗಲಿಸಿದ ಖುಲ್ಲ ಅಕ್ರೂರ ನಮ್ಮ
ವಲ್ಲಭನ ಕರೆದೊಯ್ದನೊ
ಮಲ್ಲರ ಮರ್ದಿಸಿದ ಮಾವ ಕಂಸನ ಕೊಂದ
ವಲ್ಲಭನ ತೋರಿಸೈಯ, ಉದ್ಧವ ೧

ಅನುದಿನವಾದರಸಿ ಅಧರಾಮೃತವನಿತ್ತು
ಆನಂದವನು ತೋರುವ
ಮನದ ಮರ್ಮವ ತಿಳಿದು ಮನಸಿಜನ್ನೆಯನು
ಮಧುರ ಮಾತಿಲಿ ದಣಿಸುವ

ಕನಸಿನೊಳು ಕಂಡ ತೆರನಾಯಿತು ನೋಡು
ಮುನಿವಂದ್ಯ ತಾನೆ ಬಲ್ಲ
ವನಜಾಕ್ಷ ವಾಸುದೇವನ ತಂದು ತೋರಿಸಿ
ಒಡಗೂಡಿಸೈಯ ನೀನೆ ಉದ್ಧವ ೨

ಕರುಣಾಬ್ಧಿಯೆಂಬರಾ ಕಪಟನಾಟಕದವನ
ಸರಸ ವಿರಸ ಮಾಡಿದ
ಸ್ಮರಿಸಿದವರ ಕಾಯ್ವ ಶರಣಜನ ಪಾಲಕ
ಮರೆತನೇತಕೊ ಎಮ್ಮನು
ತ್ವರಿತದಿಂದಲಿ ಪೋಗಿ ತರುಣೇರ ಗೋಳ್ಹೇಳಿ
ಬರಮಾಡಬೇಕೆಂಬೆವೊ
ನೆರೆ ನಂಬಿದವರನ್ನು ಪೊರೆವ ಶ್ರೀಕೃಷ್ಣಗೀ
ಪರಿಯೆಲ್ಲ ಪೇಳಿ ಬಾರೊ ಉದ್ಧವ ೩

೧೫೧

ರಂಗ ಬಂದ ಬೃಂದಾವನದಲಿ ನಿಂದ
ಕೊಳಲಿನ ಧ್ವನಿ ಬಹು ಚೆಂದ ಪ

ನಂದಗೋಪಿಯರ ಕಂದ ಮುಕುಂದ
ಸುಂದರಿಯರ ಆನಂದ ಗೋವಿಂದ ಅ.ಪ

ಮಂದಗಮನೇರ ಕೂಡಿ ಸರಸವನಾಡುತ
ಇಂದಿರೆಯರಸ ನಗುತ ಕೊಳಲನೂದುತ
ಎಂದೆಂದಿಗೂ ತನ್ನ ನಂಬಿದ ಭಕ್ತರ
ಬಂದು ಪೊರೆವ ಗೋವಿಂದ ಮುಕುಂದ ೧

ಉದಧಿ ಸಂಚಾರ ಗುಣಗಂಭೀರನವನೀತ
ದಧಿ ಭಾಂಡಚೋರ ರುಗ್ಮಿಣಿ ಮನೋಹರ
ಮದನ ಗೋಪಾಲನು ಭಜಿಸುವ ಭಕುತರ
ಹೃದಯದೊಳಗೆ ನಿಂದು ಮುದವನು ಕೊಡುವ ೨

ಮಧುರೆಯಿಂದಲಿ ಬಂದ ಮಾವನ್ನ ಕೊಂದ
ಕಡೆಗೋಲ ನೇಣ ಕೈಲಿ ಪಿಡಿದ ದ್ವಾರಕಾವಾಸ
ಹಡಗಿನಿಂದಲಿ ಬಂದು ಉಡುಪಿಲಿ ನೆಲೆಸುತ
ಬಿಡದೆ ಪೂಜೆಗೊಂಬ ಒಡೆಯ ಶ್ರೀಕೃಷ್ಣ ೩

೧೫೨

ರಂಗ ಬಾರ ಬಾಲೆ ಕುರಂಗನಯನೆ ಕೇಳೆ ಪ

ಹೀಂಗಿರಲಾರೆ ಶ್ರೀಹರಿಯ ಸಂಗ ಬಿಟ್ಟಮೇಲೆ
ಈ ತಂಗಾಳಿಯ ದಾಳೆ ಬೆಳದಿಂಗಳಿ'ನ ಥಾಳೆ
ಗಿಳಿ ಭೃಂಗನ ಸ್ವರಗಳೆ ದೇವಾಂಗನಾ ಗಾಯನಗಳೆ
ಅನಂಗಗಿದು ಪೇಳೆಅ.ಪ.

ಅನ್ನ ಉದಕ ತೊರೆದೆ ನಾ ಚಿನ್ನದೊಸ್ತುವ ಮರೆದೆ
ಮನ್ನಣೆಂದ ಉಡುವ ತೊಡುವ ಬಣ್ಣದೊಸನವ ಜರಿದೆ
ಸಣ್ಣವಳ ಮಾಡಿ ಆ ರನ್ನೆಯಳ ಕೂಡಿ
ಎನ್ನ ಮೇಲೆ ಕೋಪದಿಂದ ಭಿನ್ನ ನುಡಿಗಳನಾಡಿ
ಕಣ್ಣ ತೆರೆದು ನೋಡಿ ಕಾಠಿಣ್ಯ ರೂಪವ ಮಾಡಿ
ಮಣ್ಣ ಕೆದರೀಡ್ಯಾಡಿ ದ'ುರುಳನ್ನ ಉದರವ ತೋಡಿ
ಬಲಿಯನ್ನೆ ದಾನವ ಬೇಡಿ ತಾ, ತನ್ನೊಳು ಕಡಿದಾಡಿ
ಅರಣ್ಯ ವಾಸವಮಾಡಿ ಪರ ಹೆಣ್ಣುಗಳನೆ ಕೂಡಿ
ಬಲು ಬಣ್ಣಗೆಟ್ಟೋಡ್ಯಾಡಿ ಕಲಿಯನ್ನು ಸಂಹಾರಮಾಡಿ ೧

ಯುಗಳಸ್ತನಗಳ ಮೇಲೆ ಒಳ್ಳೆ ಮುಗುಳು ಮಲ್ಲಿಗೆ ಮಾಲೆ
ಬಗೆ ಬಗೆ ಅಲಂಕಾರದಿ ಸೊಗಸಿಲಿದ್ದ ವೇಳೆ
ಖಗವಾಹನನು ಬಂದ ಎನ್ನ ಬಿಗಿದಪ್ಪುವೆನೆಂದ
ನಗುತ ಮಾತನಾಡಳಿವಳು ಸುಗುಣೆಯಲ್ಲವೆಂದ
ನಿಗಮ ಚೋರನ ಕೊಂದ ನಗವ ಬೆನ್ನಿಲಿ ತಂದ
ಜಗವ ನೆಗಹುವೆನೆಂದ ಜಿಗಿದು ಕಂಭದಿ ಬಂದ
ಮಗುವಿನಂದದಿ ನಿಂದ ಯಾತ್ರೆಗಳ ಮಾಡುವೆನೆಂದ
ಅನ್ನಗಳ ಒಲ್ಲೆನೆಂದ ಬೆಣ್ಣೆಗಳ ಕದ್ದುತಿಂದ
ನಗುತ ಬತ್ತಲೆನಿಂದ ತಾ ಸಿಗದೆ ಓಡುವೆನೆಂದ ೨

ನಾರಿ ಈಗ ನಾನು ಮುರಾರಿಯ ಕಂಡೆನು
ವಾರಿಜಾಕ್ಷ ಬಾಯೆನ್ನಲು ಶಿರವ ಬಾಗಿದೆನೆ
ಮಾರನಯ್ಯನು ಜಾಣೆ ಎನ್ನ ಮೋರೆಯ ನೋಡಿದನೆ
ಜಾರನಾರಿ ಇವಳೆಂದು ಸೇರದೆ ಪೋದನೆ
ನೀರೊಳಡಗಿದನೆ ಮೋರೆ ಮುಚ್ಚಿದನೆ
ಕೋರೆ ತೋರಿದನೆ ಆ ಘೋರ ರೂಪಾದನೆ
ಬ್ರಹ್ಮ-ಚಾರಿಯೆಂತೆಂದನೆ ಕ್ಷತ್ರಿಯರ ಸವರಿದನೆ
ವಾರಿಧಿಯ ದಾಟಿದನೆ ಬಹುಜಾರನೆನಿಸಿದನೆ
ನಾರೇರ ವ್ರತವಳಿದನೆ ಕುದುರೆ ಏರಿದ ಶ್ರೀಕೃಷ್ಣನೆ ೩

ಇದು ದಶಾವತಾರಸ್ತುತಿ. ವೈಶಿಷ್ಟವೆಂದರೆ, ಹಾಡಿನ ಒಂದೊಂದು ನುಡಿಯಲ್ಲಿ ಶ್ರೀಹರಿಯ ದಶಾವತಾರಗಳನ್ನು ಹೇಳಲಾಗಿದೆ– ಪ್ರತ್ಯೇಕವಾಗಿ. ಆದರೆ ಹೇಳಿದ ರೀತಿ ಮಾತ್ರ ಬೇರೆ ಬೇರೆ.

೧೧೫

ರಂಗಯ್ಯ ಮನೆಗೆ ಬಂದರೆ ಅಂತ–
ರಂಗದಿ ಗುಡಿಕಟ್ಟಿ ಕುಣಿವೆ ನಾ ಪ

ಎಳೆ ತುಳಸಿವನ ಮಾಲೆಯು ರಂಗ–
ಗೆಳೆ ನೀಲದ ಮೈಯ ಥಾಳವು
ಪೊಳೆವ ಪೊಂಗೊಳಲೊಪ್ಪೆ, ಚೆಲುವನು ನಮ್ಮ
ನಿಲಯಕ್ಕೆ ಬಂದ ಭಾಗ್ಯವು ನೋಡ೧

ಬಾಡಿದ ಮಾವು ಪಲ್ಲವಿಸಿತು, ಹರಿ
ನೋಡಲು ಜಗವು ಭುಲ್ಲವಿಸಿತು
ಕೂಡಿದ ಮನದ ತಾಪಗಳೆಲ್ಲ, ಎತ್ತ–
ಲೋಡಿತೊ ಹರಿ ಬಂದ ಭರದಿಂದ ನೋಡ ೨

ಬಿಸಿಲು ಬೆಳೆದಿಂಗಳಾಯಿತು, ತಾ–
ಮಸಹೋಗಿ ಜ್ಞಾನೋದಯವಾಯಿತು
ಕುಸುಮನಾಭನು ತಾ ಬಂದರೆ ಅಲ್ಲಿ
ವಿಷ ಹೋಗಿ ಅಮೃತವಾಯಿತು ನೋಡ ೩

ಹಾವು ನ್ಯಾವಳವಾಯಿತು, ಅಲ್ಲಿ
ದಾವಾನಳ ತಂಪಾಯಿತು
ಬೇವು ಸಕ್ಕರೆ ಆಯಿತು ನಮ್ಮ
ದೇವಕಿಸುತ ಬಂದರೆ ನೋಡ ೪

ಜಾಣೇರರಸನೋಡು ರಂಗನು, ಅವ
ತಾನಾಗಿ ಬೆನ್ನ ಬಿಡ ನಮ್ಮನು
ಏನಾದರೂ ಅಗಲದಲೆ ನಮ್ಮ
ಮಾನಾಭಿಮಾನದೊಡೆಯ ಶ್ರೀ ಕೃಷ್ಣ ೫

೧೧೬

ಲಾಭವಹುದು ಹರಿಕಥಾಮೃತ ಪ

ಪದುಮನಾಭನ ಪದದ ಪಥದಿ
ಅಹುದು ಸಜ್ಜನಗಣಕೆ ಸತ್ಯ ಅ.ಪ

ಅರಿಷಡ್ವರ್ಗಂಗಳ ತೊರೆದು
ಜರಿದು ತಾಪತ್ರಯವ ಕಳೆದು
ಮುರಹರನ ಪದದ ಪಥದಿ
ಇರಲು ಸಜ್ಜನ ಗಣಕೆ ಸತ್ಯ ೧

ಏಳು ದಿನವು ಪರೀಕ್ಷಿತನು
ವೇಳೆಯರಿತು ಹರಿಯ ಕಥೆಯ
ಕೇಳಿ ಮುಕ್ತನಾದ ಮೇಲೆ
ಕೇಳಿದ ಕಥೆಯ ಕೇಳಬೇಕು ೨

ಎರಡು ಘಳಿಗೆ ಖಟ್ವಾಂಗರಾಯ
ಕರಣ ಪುಟದಿ ಕೃಷ್ಣನ ಕಥೆಯ
ಸ್ಮರಿಸಿ ಮುಕ್ತನಾದ ಮೇಲೆ
ನಿರುತ ಕಥೆಯ ಕೇಳಬೇಕು ೩

ಶ್ರೀಹರಿ ಚರಿತ್ರ ಶ್ರವಣದಿಂದ ಪರೀಕ್ಷಿತ ಹಾಗೂ ಖಟ್ವಾಂಗರು ಉದ್ಧಾರವಾದದ್ದರ ಕಥಾಸಂದರ್ಭ ಇಲ್ಲಿದೆ. ಪರೀಕ್ಷಿತನು ಸರ್ಪದಂಶದ ಭಯದಲ್ಲಿದ್ದಾಗ ಏಳು ದಿನ ಶುಕಮುನಿಯಿಂದ ಭಾಗವತದ ಶ್ರವಣ ಮಾಡಿದವ. ಖಟ್ವಾಂಗ ತನ್ನ ಆಯುಷ್ಯ ಎರಡೇ ಜಾವ ಉಳಿದಿದೆಯೆಂದು ತಿಳಿದಾಗ ಅಷ್ಟೇ ಅವಧಿಯಲ್ಲಿ ಭಗವಂತನನ್ನು ಸ್ಮರಿಸಿ ಸದ್ಗತಿ ಹೊಂದಿದ.

೧೬೯

ವರ್ಣಿಸಲಳವೆ ಸುಗುಣಸಾಂದ್ರನ ಪ

ಕರ್ಣಜನಕಕೋಟಿ ತೇಜ
ಶ್ರೀಶ ಭಜಕ ಜಯ ಮುನೀಂದ್ರನ ಅ.ಪ

ಮಧ್ವಶಾಸ್ತ್ರ ದುಗ್ಧ ನಿಧಿಯೊಳ್
ಬುದ್ಧಿಯೆಂಬ ಮಂದರಗಿರಿಯ
ಶುದ್ಧ ಸೂತ್ರ ನೇತ್ರದಿಂದ
ಬದ್ಧಮಾಡಿ ಪಿಡಿದು ಕಡೆದು
ಶುದ್ಧ ಯುಕುತಿ ಸುಧೆಯ ತೆಗೆದನ ಶಿಷ್ಯ ಜನಕೆ
ಶ್ರದ್ಧೆಯಿಂದಲದನು ಎರೆದನ ಕ್ರೋಧದಿಂದ
ಕೃದ್ಧವಾದಿಗಳನು ಗೆಲಿದನ-ಜಯ ಮುನೀಂದ್ರನ ೧

ಮಾನನೀಯ ಶೀಲರಾದ
ಮಾನವರನು ಕರೆದು ಹರಿಯ
ಧ್ಯಾನದಲ್ಲಿ ನಿಲಿಸಿ ಒಲಿಸಿ
ಹಾನಿಯಿಲ್ಲದ ಮುಕುತಿ ಪಡೆದ
ಜ್ಞಾನಮತವ ಜನಕೆ ಸಾರ್ದನ, ಶಿಷ್ಯಜನಕೆ
ಸಾನುರಾಗದಿ ತತ್ವಪೇಳ್ದನ
ಜಯ ಮುನೀಂದ್ರನ ೨

ಸರಸದಿಂದ ಮೂರ್ರ್ಯೋಳು
ವಿರಸ ದುಷ್ಟ ಭಾಷ್ಯಗಳನು
ಮುರಿದಕ್ಷೋಭ್ಯ ತೀರ್ಥಯತಿಪ
ಕರಸಂಜಾತ ರಮ್ಯಚರಿತ
ಶರಣ ಜನರ ಪೊರೆವ ಯತಿಪನ, ಶಿಷ್ಯಜನರ
ಮರುಳ ಮೋಹತಿಮಿರ ದಿನಪನ, ನಮ್ಮ ಪರಮ
ಗುರು ಶ್ರೀಕೃಷ್ಣ ಪಾದಭಜಕನಜಯ ಮುನೀಂದ್ರನ ೩

೧೭೩

ವಾದಿಗಜ ಮಸ್ತಕಾಂಕುಶ ಸುಜನ ಬುಧಗೇಯ
ಮೇದಿನೀ ಸುರವಂದ್ಯ ಶ್ರೀಪಾದರಾಯ ಪ

ಸಕಲಶಾಸ್ತ್ರ ಕಲಾಪ ಸನ್ಯಾಸ ಕುಲದೀಪ
ಸಕಲ ಸತ್ಯಸ್ಥಾಪ ಸುಜ್ಞಾನದೀಪ
ಪ್ರಕಟ ಪಾವನರೂಪ ಅರಿಕುಜನ ಮತಲೋಪ
ನಿಕಟ ವರ್ಜಿತ ಪಾಪ ಕೀರ್ತಿ ಪ್ರತಾಪ ೧

ಹರಿಪದಾಂಬುಜ ಭೃಂಗ ಪರಮತಾಹಿವಿಹಂಗ
ಪರಮ ಸುಗುಣಾಂತರಂಗ ಭವದುರಿತ ಭಂಗ
ಶರಣ ಕೀರ್ತಿತರಂಗ ಶತ್ರುತಿಮಿರಪತಂಗ
ಶರಣು ಶುಭ ಚರಿತಾಂಗ ಷಟ್ಶಾಸ್ತ್ರಸ಼ಂಗ ೨

ಸಿರಿಕೃಷ್ಣ ದಿವ್ಯ ಪಾದಾಬ್ಜ ಚಿಂತಾಲೋಲ
ವರ ಹೇಮವರ್ಣಮುನಿಪತಿಯ ಸುಕುಮಾರ
ಗುರುತಿಲಕ ಶ್ರೀಪಾದರಾಯ ಅಮಿತೋದ್ಧಾರ
ಶರಣ ಜನ ಸುರಧೇನು ಭಕ್ತಮಂದಾರ ೩

೧೫೩

ವಾಸುದೇವ ವಸುದೇವನಂದನ ಕೃಷ್ಣ ವಾಸುದೇವ ಪ

ಕುಸುಮಶರನ ಪಿತ ಅಸುರ ಮರ್ದನ ಕೃಷ್ಣ ವಾಸುದೇವ ಅ.ಪ

ಮಂದರ ಗಿರಿಧರ ಮಧುಸೂದನ ಕೃಷ್ಣ ವಾಸುದೇವ
ಕುಂದದೆ ಪೋಗಿ ಕಂಸನ ಕೊಂದೆ ಶ್ರೀಕೃಷ್ಣ ವಾಸುದೇವ ೧

ಶಿಶುವಾಗಿ ಪೂತಣಿಯಸುವ ಹೀರಿದೆ ಕೃಷ್ಣ ವಾಸುದೇವ
ಶಿಶುಪಾಲಾಂತಕ ಯಶೋದೆನಂದನ ಕೃಷ್ಣ ವಾಸುದೇವ ೨

ಮುರಹರ ಶರಣು ಹೊಕ್ಕೆನೊ ಕಾಯೊ ಶ್ರೀಕೃಷ್ಣ ವಾಸುದೇವ
ಶರಣೆಂಬ ಜನರಿಗೆ ಕರುಣಿಪ ಶ್ರೀಕೃಷ್ಣ ವಾಸುದೇವ ೩

ಗರುಡ ಗಮನನಾಗಿ ಚರಿಸುವ ಶ್ರೀಕೃಷ್ಣ ವಾಸುದೇವ
ಚರಣ ಕಮಲವನ್ನು ನಂಬಿದೆ ಶ್ರೀ ಕೃಷ್ಣ ವಾಸುದೇವ ೪

ಶೇಷಶಯನ ನೀ ಪೋಷಿಸೊ ಶ್ರೀಕೃಷ್ಣ ವಾಸುದೇವ
ಭಾಸುರಾಂಗನೆ ಭಕ್ತವತ್ಸಲ ಶ್ರೀಕೃಷ್ಣ ವಾಸುದೇವ ೫

೨೧೯

ಶರಣು ಶರಣು ಪ

ಶರಣುಮತ್ಸ್ಯನೆ ಕೂರ್ಮಕ್ರೋಡ
ನರಹರಿ ವಟುಭಾರ್ಗವ
ಶರಣುರಾಘವ ಕೃಷ್ಣ ಬುದ್ಧ
ಶರಣು ಕಲ್ಕಿ ರೂಪನೆ ೧

ನಂಬಿದೆ ನಾನಿನ್ನ ಕೇಶವ
ನಾರಾಯಣನೇ ಮಾಧವ
ಅಂಬುಜಾಕ್ಷ ಗೋವಿಂದ ವಿಷ್ಣು
ಸಂಭ್ರಮದಿ ಮಧುಸೂದನ ೨

ಕರುಣದಲಿ ರಕ್ಷಿಸು ತ್ರಿವಿಕ್ರಮ
ಕಲಿತ ವಾಮನ ಶ್ರೀಧರ
ಪರಮಪಾವನ ಹೃಷೀಕೇಶನೆ
ಪದ್ಮನಾಭ ದಾಮೋದರ ೩

ವಾಸವಾರ್ಚಿತ ಸಂಕರುಷಣ
ವಾಸುದೇವ ಪ್ರದ್ಯುಮ್ನನೆ
ಶ್ರೀಶ ಅನಿರುದ್ಧ ಪುರುಷೋತ್ತಮ
ನೀ ಸಲಹೊ ಅಧೋಕ್ಷಜ ೪

ಶ್ರುತಿಗಗೋಚರ ನಾರಸಿಂಹಾ-
ಚ್ಯುತ ಜನಾರ್ದನುಪೇಂದ್ರನೆ
ಚತುರವಿಂಶತಿ ನಾಮದಲ್ಲಿಹ
ಚತುರ ಹರಿ ಶ್ರೀಕೃಷ್ಣನೆ ೫

೧೬೫

ಸಂಗವಾಗಲಿ ಸಾಧು ಸಂಗವಾಗಲಿ ಪ

ಸಂಗದಿಂದ ಲಿಂಗದೇಹ ಭಂಗವಾಗಲಿ ಅ.ಪ

ಅಚ್ಯುತಾಂಘ್ರಿ ನಿಷ್ಠರ ಯದೃಚ್ಛ ಲಾಭ ತುಷ್ಟರ
ನಿಶ್ಚಯಾತ್ಮ ಜ್ಞಾನವುಳ್ಳ ಅಚ್ಚ ಭಾಗವತರ ೧

ತಂತ್ರ ಸಾರ ಅಷ್ಟ ಮಹಾಮಂತ್ರ ಪರಿಪೂರ್ಣಸ್ನೇಹ
ಯಂತ್ರದಿಂದ ಬಿಗಿದು ಸ್ವತಂತ್ರ ಮೂರ್ತಿ ತಿಳಿದವರ ೨

ಪಂಚಭೇದ ಸಂಸ್ಕಾರ ಪಂಚ ಭೂತಾತ್ಮವಾದ
ಪಂಚಭೇದ ಕೃಷ್ಣರಾಯನ ಪಂಚಮೂರ್ತಿ ತಿಳಿದವರ ೩

೨೦೫

ಸಂಸಾರವೆಂದೆಂಬ ಮಾರಿಗೆ ಸಿಲುಕಿದೆ
ಕಂಸಾರಿ ಕರುಣದಿಂದೆನ್ನ ನೋಡಯ್ಯ ಪ

ಬಲಿಗಾಯತವಾದ ಕುರಿ ಮೆಲುವಂತೆ ಹೆಡ-
ತಲೆ ಮೃತ್ಯುವನರಿಯದೆ ಮತ್ತನಾದೆ೧

ಕಂಡು ಕಂಡು ಪತಂಗ ಕಿಚ್ಚಿನೊಳ್ ಬೀಳ್ವಂತೆ
ಕಂಡ ಕಂಡ ಹೇಯ ವಿಷಯಗಳಿಗೆರಗುವೆ ೨

ಪತಿಯಿರಲು ಸತಿ ಅನ್ಯರರಸುವಂತೆ
ಗತಿ ನೀನಿರಲು ಅನ್ಯರೆ ಗತಿಯೆಂಬೆ ೩

ಒಂದು ಮೊಲಕೆ ಆರು ಹುಲಿ ಬಂದಡರುವಂತೆ
ಬಂದೆಳೆವುತಲಿವೆ ಅರಿಷಡ್ವರ್ಗಗಳು ೪

ಜೋಗಿಗಾಗಿ ಕೋಡಗ ಪಾಟು ಬಡುವಂತೆ
ಲೋಗರಿಗಾಗಿ ನಾ ತೊಳಲಿ ಬಳಲುವೆ ೫

ಶುಕನ ಓದುಗಳಂತೆ ಎನ್ನ ಓದುಗಳಯ್ಯ
ಅಕಟಕಟವೆನಗೆ ಬಂಧಕವಾದುವೊ ೬

ಮಿಂದು ಮಿಂದು ಆನೆ ಹುಡಿ ಹೊಯ್ದು ಕೊಂಬಂತೆ
ಮಂದಮತಿಯಾದೆ ಕರುಣಿಸೊ ಕೃಷ್ಣ ೭

೧೬೫

ಸಾರಿರೊ ಡಂಗುರವ ನಮ್ಮಪ

ಭಾರತಿರಮಣ ವಾಯುವೆ ಜಗದ್ಗುರುವೆಂದು ಅ.ಪ

ಭೋರಿಡುತಲಿಪ್ಪ ಸಮುದ್ರವ ಲಂಘಿಸಿ
ಧಾರುಣಿಸುತೆಯ ದುಃಖವ ಕಳೆದು
ಚೋರರಾವಣ ವನವನಲಗಾಹುತಿಯಿತ್ತು
ಶ್ರೀರಾಮಗೆರಗಿದಾತನೆ ಪ್ರಸಿದ್ಧನೆಂದು ೧

ಕುಶಲದಿ ಕುಂತಿಗೆ ಮಗನಾಗಿ ಭೀಮನೆ-
ನಿಸಿ ಆ ಕೌರವ ಕಪಟದಲಿ ಕೊಟ್ಟ
ವಿಷದ ಕಜ್ಜಾಯವ ತಿಂದು ಜೀರ್ಣಿಸಿಕೊಂಡ
ಅಸಮ ಬಲಾಢ್ಯ ಮೂರುತಿಯೆ ಬದ್ಧವೆಂದು ೨

ಕಲಿಯುಗದ'ಲಿ ಮಧ್ಯಗೇಹಾಭಿಧಾನದ
ತುಳುವ ಬ್ರಾಹ್ಮಣನಲಿ ಅವತರಿಸಿ
ಒಲಿದು ಶ್ರೀ ಅಚ್ಯುತಪ್ರೇಕ್ಷಾಚಾರ್ಯರಿಂ-
ದಲಿ ಆಶ್ರಮಗೊಂಡ ಪೂರ್ಣಪ್ರಜ್ಞನೆಂದು ೩

ಖೂಳ ದೈತ್ಯನು ಕೊಲ್ಲಬೇಕೆಂದು ಕಪಟದಿ
ಕಾಳಾಹಿ ವೇಷದಿಂ ಬಂದಿರಲು
ಕಾಲ ಪ್ರಳಯದ ಸಿಡಿಲು ಬಂದೆರಗಿದಂತೆ
ಕಾಲಿಂದ ತುಳಿದವನಸುವಗೊಂಡನು ಎಂದನು ೪

ಬಳಿಕ ಇಪ್ಪತ್ತೊಂದು ದುರ್ಭಾಷ್ಯಂಗಳ
ಹಳಿದು ವೇದಾಂತ ಶಾಸ್ತ್ರಂಗಳಲಿ
ಉಳುಹಿ ವೈಷ್ಣವ ಮತವವನಿಯೊಳಗೆ ನಮ್ಮ
ಸಲಹುವ ಮಧ್ವೇಶ ಕೃಷ್ಣ ಪ್ರಿಯನೆಂದು ೫

ದೈತ್ಯನೊಬ್ಬ ವಿಷಸರ್ಪದ ವೇಷದಿಂದ, ಕೊಲ್ಲಲು ಬಂದಾಗ ಅವನನ್ನು ಕಾಲಿಂದ ತುಳಿದು ಕೊಂದ ಪ್ರಸ್ತಾಪ ೪ನೆಯ ನುಡಿಯಲ್ಲಿದೆ. ಹನುಮ, ಭೀಮ ಇವರಿಬ್ಬರಲ್ಲಿ ಒಬ್ಬರು ಮಾಡಿದ ಕೃತ್ಯವಿದೆ. ಆದರೆ ಇಬ್ಬರಲ್ಲಿ ಯಾರು ? ತಿಳಿಯದು

೧೫೪

ಸಿಕ್ಕಿದನೆಲೆ ಜಾಣೆ ಶ್ರೀ ವೇಣುಗೋಪಾಲ
ಭಕ್ತವತ್ಸಲ ದೇವನು ಪ

ಮಕ್ಕಳ ಚೆಂಡಿಕೆ ಮರದ ಕೊನೆಗೆ ಕಟ್ಟಿ
ಘಕ್ಕನೆ ಕೈ ಚಪ್ಪಾಳಿಕ್ಕಿ ನಗುವ ರಂಗ ಅ.ಪ.

ಹೆಣ್ಣುಮಕ್ಕಳು ಬಚ್ಚಲೆಣ್ಣೆ ಮಂಡೆಯೊಳು
ಬಣ್ಣ ವಸ್ತ್ರವ ಬಿಟ್ಟು ಬರಿಮೈಯೊಳಿರಲು
ಚೆನ್ನಿಗ ಬಿಸಿನೀರ ಚೆಲ್ಲಿ ಸೀರೆಗಳೊಯ್ದು
ಉನ್ನಂತವಾದ ವೃಕ್ಷವೇರಿ ಕಾಡುವನಮ್ಮ ೧

ಪಟ್ಟೆ ಮಂಚದಮೇಲೆ ಪತಿಯಂತೆ ಮಲಗಿರೆ
ಎಷ್ಟು ಸ್ವಾತಂತ್ರ್ಯವೆ ಎಷ್ಟು ಪೇಳುವೆನೆ
ಉಟ್ಟಸೀರೆಯ ಸೆಳೆದು ಬಟ್ಟ ಕುಚದೊಳುಗುರು
ನೆಟ್ಟು ಓಡಿದ ಪರಿ ಎಷ್ಟೆಂತೆ ಪೇಳಲೆ ೨

ಸಡಗರದೊಳು ಸೋಳಸಾಸಿರ ಗೋಪೇರ
ಒಡಗೂಡಿ ಕೊಳಲನು ಪಿಡಿದು ತಾ ಮೊಸರ
ಕಡೆವೊ ಗೊಲ್ಲತಿಯರ ಕೈ ಪಿಡಿದಾಡುವ
ಒಡೆಯನೆ ಇವನಮ್ಮ ಉಡುಪಿನ ಶ್ರೀಕೃಷ್ಣ ೩

ಗೋಪಿಯರೊಡನೆಯ ಬಾಲಕೃಷ್ಣನ ಚೆಲ್ಲಾಟವನ್ನು ಶ್ರೀ ವ್ಯಾಸರಾಯರು ಎಷ್ಟು ಬಗೆಯಿಂದ ಬಣ್ಣಿಸುತ್ತಾರಲ್ಲ–ಎಂದು ಅಚ್ಚರಿಪಡುವಂತಿದೆ. ಗೋಪಿಯರು ಕೊಳದಲ್ಲಿ ಮೀಯುತ್ತಿದ್ದಾಗ ಅವರ ವಸ್ತ್ರವನ್ನು ಅಪಹರಿಸಿ ಗಿಡವನ್ನೇರುವನಷ್ಟೆ. ಇಲ್ಲಿ ಅವರುಗಳು ತಮ್ಮ ಬಚ್ಚಲುಮನೆಯಲ್ಲಿ ಮೀಯುತ್ತಿದ್ದಾಗಲೂ ಅವರ ಮೈ ಮೇಲೆ ಬಿಸಿನೀರು ಚೆಲ್ಲಿ ಸೀರೆಗಳನ್ನೊಯ್ದು ಉನ್ನತವಾದ ವೃಕ್ಷವೇರಿ ಕಾಡುತ್ತಿದ್ದನೆಂದಿದ್ದಾರೆ.

## ೧೧೮

ಸೇರಿದೆನು ಸೇರಿದೆನು ಜಗದೀಶನ
ನರಕಜನ್ಮದ ಭಯವು ಎನಗೆ ಇನಿತಿಲ್ಲ ಪ

ನೇತ್ರಗಳು ಕೃಷ್ಣನ ಮೂರ್ತಿ ನೋಡುತಲಿವೆ
ಶ್ರೋತ್ರಗಳು ಹರಿಕಥೆಯ ಕೇಳುತಲಿವೆ
ರಾತ್ರಿ ಹಗಲು ಎನ್ನ ಮನಸು ಶ್ರೀರಂಗನಲ್ಲಿ
ಪಾತ್ರವಾಡುತಿದೆನ್ನ ಗಾತ್ರ ಕೃಷ್ಣನ ಮುಂದೆ ೧

ಹಸ್ತಗಳು ಮಂಟಪಶುದ್ಧಿಯನು ಮಾಡುತಿವೆ
ಮಸ್ತಕವು ಹರಿಚರಣಕೆರಗುತಿದೆಕೋ
ವಿಸ್ತಾರವಾದ ಪ್ರದಕ್ಷಿಣೆಯ ಮಾಡುತಿದೆ
ಕಸ್ತೂರಿತಿಲಕವನು ಮೂಗು ಆಘ್ರಾಣಿಸುತಿದೆ೨

ಹರಿನಾಮಸ್ಮರಣೆಯನು ನುಡಿಯುತಿದೆ ಎನ್ನ ಜಿಹ್ವೆ
ಹರಿಭಕುತಿ ಸುಧೆಯ ಪಾನಗಳಿಂದಲಿ

ಹರಿಪ್ರೀತಿಯಾಗಿದೆ ನೋಡಿದರೆನ್ನ ದೇಹ
ಸಿರಿಕೃಷ್ಣರಾಯನ್ನ ಮನಮಂದಿರದಿ ಕಂಡೆ ೩

ಭಗವಂತನ ಕೃಪೆಯನ್ನು ದೀನಭಾವದಿಂದ ಕೋರುವ ಹಾಡುಗಳು ಸಾಮಾನ್ಯವಾಗಿ ಕಂಡುಬರುತ್ತಿವೆಯಾದರೆ ಇಲ್ಲಿ ಭಗವದ್ದರ್ಶನದ ಸಂತೃಪ್ತಿ ವ್ಯಕ್ತವಾಗಿದೆ.

### ೧೬೭

ಸೋಮಶೇಖರ ತಾನೆ ಬಲ್ಲ ಶ್ರೀ-
ರಾಮನಾಮಾಮೃತ ಸವಿಯನೆಲ್ಲ ಪ

ಮದನಪಿತಾಯೆಂದು ಕುಣಿಕುಣಿದಾಡಲು
ಕೆದರಿದ ಕೆಂಜೆಡೆಗಳ ಪುಂಜದಿ
ಒದಗಿದ ಗಂಗೆ ತುಂತುರು ಹನಿಗಳ ಕಂಡು
ಪದಮಜಾಂಡಹಿತ ರಾಮರಾಮಾ ಎಂಬ ೧

ಆನಂದ ಜಲದ ಸೋನೆಗೆ ಲಲಾಟ-
ದಾನೇತ್ರ ಬಡಬಾನಲನಂತಿರೆ
ಏನೆನ್ನಲಿಬಹುದು ಸುಖ ಸಾಗರದೊಳು
ತಾನೆದ್ದು ಮುಳುಗುತ ರಾಮ ರಾಮಾಯೆಂಬ ೨

ಶಿರದ ಗಂಗೆಯ ವರ ಅಗ್ಗಣಿಯಾಗಿರೆ
ಸರಸಿಜ ಬಾಂಧವ ಚೆಂದಿರ ದೀಪ
ಉರಿಗಣ್ಣಿನ ಹೊಗೆ ಧೂಪವನೇರಿಸಿ
ಕರಣವೆ ನೈವೇದ್ಯಯೆಂದು ರಾಮ ಎಂಬ ೩

ಚಂದದ ಸ್ಫಟಿಕದ ಕರಡಿಗೆಯಲ್ಲಿಪ್ಪ
ಇಂದ್ರನೀಲದ ಚೆನ್ನಪುತ್ಥಳಿಯಂತೆ
ಚಂದದಿ ತನ್ನಯ ಹೃದಯ ಮಧ್ಯದಿ ರಾಮ-
ಚಂದ್ರ ಹೊಳೆಯೆ ಶ್ರೀ ರಾಮ ರಾಮ ಎಂಬ ೪

ಐದು ಮುಖಗಳಿಂದ ಹರಿಯ ಕೊಂಡಾಡಲು
ಸ್ವಾಧೀನ ಭೂಷಣ ಫಣಿಗಳೆಲ್ಲ
ಮೋದದಿಂದಾಡಲು ಫಣಿ ಮಣಿಯಾಘಾತ
ನಾದ ತಾಳವಾಗೆ ರಾಮ ರಾಮ ಎಂಬ ೫

ಒಮ್ಮೆ ಹರಿಯ ಗುಣ ಅಜಪೇಳಲಾಯೆಂಬ
ಒಮ್ಮೆ ನಾರದ ಪಾಡೆ ತತ್ಥೈಯೆಂಬ
ಒಮ್ಮೆ ರಾಣಿಗೆ ಪೇಳಿ ಶಿರವನೊಲಿದಾಡುವ
ಒಮ್ಮೆ ತನ್ನೊಳು ನೆನೆಸಿ ರಾಮ ರಾಮ ಎಂಬ ೬

ಅರಸಂಚೆಯ ಕಂಜ ಪುಂಜಗಳಲಿಪ್ಪ
ಅರೆ ಮುಚ್ಚಿದ ಹದಿನೈದು ನೇತ್ರಗಳಿಂ
ಹರಿಯ ಕೊಂಡಾಡುತ ಪಂಚ ಮುಖಗಳಿಂದ
ಸಿರಿಕೃಷ್ಣ ಮುಕುಂದ ನರಹರಿ ರಾಮ ಎಂಬ ೭

ಈಶ್ವರನ ಸ್ತುತಿಪರವಾದ ಈ ಕೀರ್ತನೆಯ ಕೊನೆಯ ನುಡಿಯಲ್ಲಿ 'ಹದಿನೈದು ನೇತ್ರ'ಗಳ ಎಂಬ ಅಂಶಬರುತ್ತದೆ. ಈ ಬೆಸಸಂಖ್ಯೆಯ ಕಣ್ಣುಗಳ ಕಲ್ಪನೆ ಮೋಜಿನದಾಗಿದೆ. ಹನುಮಂತನಿಗೆ ಹೇಗೋ ಹಾಗೆಯೇ ಶಿವನಿಗೂ ಐದು ಮುಖಗಳು. ಆದರೆ ಅವನಿಗೆ ಮೂರನೆಯ ಹಣೆಗಣ್ಣು ಇದೆಯಲ್ಲ! ಹೀಗಾಗಿ ಹದಿನೈದು ನೇತ್ರಗಳು.

೧೨೦

ಹರಿ ನಿನ್ನ ರೋಮ ಕೂಪದಲಿ ಜೀವಿಪ
ಸರಸಿಜ ಭವಾಂಡ ಕೋಟಿಯಲಿ ಪ

ತುರುಗಿಪ್ಪ ಬ್ರಹ್ಮರುದ್ರಾದಿ ಜೀವರುಗಳು
ಹರಿ ನಿನ್ನ ಮಹಿಮೆಯ ಪೇರ್ಮೆಯ ಬಲ್ಲರೆ ಅ.ಪ.

ಅತ್ತಿಯ ಮರದಿಂದುದುರುವ ಫಲಂಗಳ
ಮೊತ್ತದಲಿರುತಿಪ್ಪ ಮಶಕಂಗಳು
ಕತ್ತೆಯ ಬಳಗಗಳೆಲ್ಲವು ಕೂಡಿಕೊಂಡು
ಅತ್ತಿಯ ತರುವಿನಾದ್ಯಂತವ ಬಲ್ಲವೆ ೧

ಐವತ್ತು ಕೋಟಿ ಯೋಜನ ವಿಸ್ತರವಾದ
ಭೂವಲಯದ ತಮ್ಮ ಗೂಡಿನಲಿ
ಆವಾಸವಾಗಿಪ್ಪ ಕ್ಷುದ್ರ ಪಿಪೀಲಿಕ
ಜೀವರು ಧರಣಿಯ ಮೇರೆಯ ಬಲ್ಲರೆ ೨

ನೊರಜು ಮೊದಲಾಗಿ ಗರುಡ ಪರಿಯಂತ
ಪರಿಪರಿ ಜಾತಿಯ ಪಕ್ಷಿಗಳು
ತೆರದಲಿ ಹಾರುವರಲ್ಲದೆ ಗಗನದ
ಪರಿಣಾಮವೆಂತೆಂದು ಬಲ್ಲವೆ ಶ್ರೀ ಕೃಷ್ಣ ೩

ಭಗವಂತನ ಮಹಿಮೆ ಬ್ರಹ್ಮ, ರುದ್ರಾದಿಗಳಿಗೆ ತಿಳಿಯದು–ಎನ್ನುವುದಕ್ಕೆ ಕೊಟ್ಟಿರುವ ಲೌಕಿಕ ದೃಷ್ಟಾಂತಗಳು ಮನನೀಯವಾಗಿದೆ.

೧೭೬

ಹರಿದಾಸರ ಸಂಗಕೆ ಸರಿಯುಂಟೆ
ಗುರು ಕರುಣಕೆ ಇನ್ನು ಪಡಿಯುಂಟೆ ದೇವ ಪ

ದಾವಾನಲವ ತ಼ಪ್ಪಿಸಿ ಕಾಡಾನೆಯ
ದ಼ೇವಗಂಗೆಗೆ ತಂದು ಹೊಗಿಸಿದಂತೆ
ಆವರಿಸಿರುವ ಷಡ್ವರ್ಗ ತಪ್ಪಿಸಿ ಎನ್ನ
ಶ್ರೀವರನ ಕರುಣಾರಸದಿ ತೋಯಿಸುವ ೧

ಕಂದಿ ಬೇಸಗೆಯಲ್ಲಿ ನೊಂದ ಚಕೋರಕ್ಕೆ
ಇಂದುಬಿಂಬದ ಮುಂದೆ ಹೊಗಿಸಿದಂತೆ
ನೊಂದ ಹಮ್ಮಮತೆಯ ನೊಂದಿಸಿ ಎನ್ನ ಗೋ-
ವಿಂದನ ಪಾದ ಸನ್ನಿಧಿಯ ಸೇರಿಸುವ ೨

ಬಲೆಯ ಹಾರಿದ ಎಳೆ ಹುಲ್ಲೆಯ ಮರಿಗಳಿಗೆ
ಒಲಮೆಯಿಂದಲಿ ತಾಯ ತೋರಿಸಿದಂತೆ
ಬಲು ಇಂದ್ರಿಯಗಳ ಸೆರೆಯ ಬಿಡಿಸಿ ಎನ್ನ
ನಳಿನನಾಭನ ಸನ್ನಿಧಿಯ ತೋರಿಸುವ ೩

ಕರುಡರಿಗೆ ದಿವ್ಯಾಂಜನ ಹಚ್ಚಿ ಕಣ್ಣಿತ್ತು
ತೆರ ತೆರದಲಿ ಉಂಬ ನಿಧಿಯನಿತ್ತಂತೆ
ಪರಮ ಮೂಢನಾದ ಎನಗೆ ಜ್ಞಾನವನಿತ್ತು
ನರಹರಿ ಪಾದ ಸಂದರುಶನವನ್ನೀವ ೪

ತಡೆಯಿಲ್ಲದ ಪೂರಾ ತೊರೆಯಲ್ಲಿ ಪೋಪನ
ಪಿಡಿದೆತ್ತಿ ತಡಿಯನು ಸೇರಿಸಿದಂತೆ
ಕಡೆಗೆಟ್ಟು ಭವಾಬ್ಧಿ ನಡುವೆ ಸಿಕ್ಕಿದ ಎನ್ನ
ಪಿಡಿದು ಶ್ರೀಕೃಷ್ಣನಂಘ್ರಿಗಳ ಸೇರಿಸುವ ೫

## ೨೧೧

ಹರಿದಿನ ಪಾತಕ ಪರಿಹಾರ ದನುಜರ
ಕರುಣಕ್ಕೆ ಕಾರಣ ನಂಬೆಲೊ ಮನುಜ ಪ

ಗಂಗೆ ಮೊದಲಾದ ತೀರ್ಥಂಗಳೆಣೆಯ ಶ್ರೀ-
ರಂಗ ಮೊದಲಾದ ಕ್ಷೇತ್ರವು ಸರಿಯೆ ಉ-
ತ್ತುಂಗ ಜಪತಪ಼ ಹೋಮಂಗಳೆದುರೆ ಶ್ರೀ-
ರಂಗನಾಥನ ದಿನದೊಂದುಪವಾಸಕೆ ೧

ಹಿಂದೆ ಮಾಡಿದ ಪಾಪ ಪರಿಹಾರವು ನೀ-
ನಿಂದು ಮಾಡುವ ಸುಕೃತ ಬೆಳಸು
ಮುಂದಣ ಮುಕುತಿಗೆ ಕಲ್ಪ ಲತಾಂಕುರ
ಇಂದಿರೇಶನ ದಿನದೊಂದುಪವಾಸಕೆ ೨

ರುಕುಮಾಂಗದ ಮೊದಲಾದ ಭಕುತರೆಲ್ಲ
ಸಕಲವ ಬಿಟ್ಟು ಏಕಾದಶಿ ವ್ರತವ
ಭಕುತಿಯಿಂ ಕೂಡಿ ಶ್ರೀಕೃಷ್ಣನ ಮೆಚ್ಚಿಸಿ
ಮುಕುತಿ ಸೂರೆಯಗೊಂಡರೆಂಬುದನರಿಯ ೩

## ೪. ಉಗಾ ಭೋಗಗಳು

### ೨೧೨

ಆವ ಜನುಮದ ತಾಯಿ ಆವ ಜನುಮದ ತಂದೆ
ಆವ ಜನುಮದ ಸತಿ ಆವ ಜನುಮದ ಸುತರು
ಆವ ಜನುಮದ ಬಂಧು ಆವ ಜನುಮದ ಬಳಗ
ಆವ ಜನುಮದ ಪಿಂಡ ಆವಂಗೆ ಜನಿಸುವೆವೊ
ನೀ ವೊಲಿದು ಪಾಲಿಸೈ ಸಿರಿಕೃಷ್ಣರಾಯ

### ೨೧೩

ಇಂದಿಗೆಂತೊ ನಾಳೆಗೆಂತೊ ನಾಡಿದ್ದಿಗೆಂತೆಂಬ
ಬೆಂದವೊಡಲ ಹೊರೆಯೆ ಹೋಯಿತು ಸಂಸಾರ
ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬರಿಕೆಯಿಲ್ಲ
ಮುಂದೆ ಮುಕ್ತನಾಗಬೇಕೆಂಬೊ ಎಣಿಕೆಯಿಲ್ಲ
ಗೊಂದಣ ತಾಪತ್ರಯ ದುಂದುಗಕ್ಕೊಳಗಾಗಿ
ಬೆಂದು ಮೂರ್ಖರೊಡನಾಡಿ ನಾನೊಂದೆನೈಯ
ಇಂದ್ರಿಯಂಗಳು ತಮ್ಮ ತಮ್ಮ ತಿರೆಗಳಿಗೆ
ಬಂಧಿಸಿ ಬಳಲಿಸಿ ಎನ್ನ ಕಾಡುತ್ತಲಿವೆ
ಬಂದೆನೆಂದರೆ ಬರಲೀಯವೊ ಎನ್ನನು
ನಂದನ ಕಂದ ಕೃಷ್ಣ ತಂದೆ ವಿಚಾರಿಸಿ ಕಾಯಯ್ಯ
ಕಂಗಳು ಚೆಲುವನು ನೋಡಿ ಕ-
ರ್ಣಂಗಳು ವಾರುತಿಯ ಕೇಳಿ
ಹಿಂಗದೆ ನಾಮವ ವದನದಿ ಸವಿಯುತ್ತ ಪ-
ದಂಗಳ ಮನದಿ ನೆನೆನೆನೆದು ರೋ-
ಮಂಗಳು ಪುಳುಕಿತನಾಗಿ ಲೋ-
ಕಂಗಳ ಕಡಲೊಳು ಮುಳುಗಿ ಮೈಯುಬ್ಬಿ-ಕೊಬ್ಬುತ್ತ
ಅಂಗವ ಮರೆದಾನಂದದಿ
ರಂಗಾ ಎನುತಿದ್ದರೆ ಸಾಲದೆ
ಮಂಗಳ ಜಯವನ್ನು ಕರುಣಿಸೊ ಮತ್ತೊಂದು
ಸಂಗವನೊಲ್ಲೆನೊ ಸಿರಿಕೃಷ್ಣರಾಯ

೨೧೪

ಜಾರತ್ವವನು ಮಾಡಿದ ಪಾಪಗಳಿಗೆಲ್ಲ
ಗೋಪಿಜನ ಜಾರನೆಂದರೆ ಸಾಲದೆ
ಚೋರತ್ವವನು ಮಾಡಿದ ಪಾಪಗಳಿಗೆಲ್ಲ
ನವನೀತಚೋರನೆಂದರೆ ಸಾಲದೆ
ಕ್ರೂರತ್ವವನು ಮಾಡಿದ ಪಾಪಗಳಿಗೆಲ್ಲ
ಮಾವನ ಕೊಂದವನೆಂದರೆ ಸಾಲದೆ
ಪ್ರತಿದಿವಸ ಮಾಡಿದ ಪಾಪಗಳಿಗೆಲ್ಲ
ಪತಿತ ಪಾವನನೆಂದರೆ ಸಾಲದೆ
ಇಂತಿಪ್ಪ ಮಹಿಮೆಯೊಳೊಂದನಾದರು ಒಮ್ಮೆ
ಸಂತತ ನೆನೆವರ ಸಲಹುವ ಸಿರಿಕೃಷ್ಣ

೨೧೫

ನಿನ್ನ ಎಂಜಲನುಂಡು ನಿನ್ನ ಬೆಳ್ಪುಡೆಯುಟ್ಟು
ಮುನ್ನ ಮಾಡಿದ ಕರ್ಮ ಬೆನ್ನ ಬಿಡದಿದ್ದರೆ
ನಿನ್ನ ಓಲೈಸಲೇಕೊ ಕೃಷ್ಣ
ಸಂಚಿತವನುಂಡು ಪ್ರಪಂಚದೊಳಗೆ ಬಿದ್ದು
ನಿನ್ನ ಓಲೈಸಲೇಕೋ ಕೃಷ್ಣ
ದಿನಕರನುದಿಸಿ ಕತ್ತಲೆ ಪೋಗದಿದ್ದರೆ
ಹಗಲೇನೋ ಇರುಳೇನೋ ಕುರುಡಗೆ ಸಿರಿಕೃಷ್ಣ

೧೨೪
ಸುಳಾದಿ
ಧ್ರುವತಾಳ

ಅಂತರಂಗದಿ ಬ್ರಹ್ಮಾನಂದನಾಗಿ ನೀನಿರಲು
ಅಂತಕ'ನ ಭಯವೇನಯ್ಯ ಶ್ರೀಹರಿಯೆ
ಪಂಥದಿ ದನುಜನು ಬಾಧಿಸಲು ಸುತನ
ಚಿಂತೆ ಯಾರಿಗೋ ಎಂದಿರದೆ ಸಾಕಿದೆ
ಉದಯಾದ್ರಿ ಶ್ರೀ ಕೃಷ್ಣ ೧

ಮಠ್ಯತಾಳ

ಮುರಹರ ನರಹರಿ ಸಿರಿವರ ಗಿರಿಧರ ಎಂದು
ಕರೆಯಲು ಕರುಣದಿ ಬಂದು
ಕರಿಯ ಕಾಯಿದೆ ಸಂತೋಷದಿ ಕಾಯಿದೆ
ನರಕಾಂತಕ ಉದಯಾದ್ರಿ ಶ್ರೀಕೃಷ್ಣ ೨

ತ್ರಿಪುಟತಾಳ

ತನ್ನ ತಾನರಿಯದೆ ತಗುಲಿದ ಕಾಳಿಯನು
ನಿನ್ನ ಪರಾಕ್ರಮ ತೋರಿ ಕಾಯಿದೆ ಶ್ರೀಹರಿಯೆ
ಮುನ್ನ ನಾನಿನ್ನ ಡಿಂಗರಿಗನಾದೆನಯ್ಯ
ಪನ್ನಗಾಶನತುರಗ ಪಾಲಿಸು ಉದಯಾದ್ರಿ ಶ್ರೀಕೃಷ್ಣ ೩

**ಅಟ್ಟತಾಳ**

ನಿನ್ನ ಮೃದುಪಾದವ ನೋಯದಂತೆ
ಎನ್ನ ಶಿರಸ್ಸಿನಲ್ಲಿಡೊ
ರನ್ನ ಕಾಲಂದಿಗೆ ಗೆಜ್ಜೆಯ ನಾದದಿಂ-
ದಿನ್ನು ಧಿಮಿಧಿಮಿಕೆಂದು ಕುಣಿಸುವೆ ಉದಯಾದ್ರಿ ಶ್ರೀಕೃಷ್ಣ ೪

**ಏಕತಾಳ**

ಎನ್ನ ದೃಢವ ನೀ ಕಂಡೆ ಯಾದವ ಕೃಷ್ಣ
ನಿನ್ನ ದೃಢವ ನಾ ಕಾಣೆ
ಎನ್ನ ದೃಢ ನಿನ್ನದೃಢವೆರಡನು ಕಂಡರೆ
ದಿನ್ನು ಧಿಂಧಿಮಿಕೆಂದು ಕುಣಿಸುವೆ ಉದಯಾದ್ರಿ ಶ್ರೀಕೃಷ್ಣ ೫

**ತ್ರಿಪುಟತಾಳ**

ಎನ್ನ ಗುಣದೋಷಗಳನೆಣಿಸುವರೇನೊ ಶ್ರೀಹರಿ
ನಿನ್ನ ಬಿರುದಾಪನ್ನ ರಕ್ಷಕನೆಂದು ವಿಭೀ-
ಷಣ್ಣನು ಕೀರ್ತಿಸಲು ಆ-ಆ-ಆ
ಅನ್ಯಥಾ ಶರಣಂ ನಾಸ್ತಿ ಅನಾಥ ನಾಥನೆ ಆರ್ತ ಬಂಧುವೆ
ನಿನ್ನ ಚರಣವನ್ನು ನಂಬಿದೆನೊ ಸಾಕ್ಷಿ ಉದಯಾದ್ರಿ ಶ್ರೀಕೃಷ್ಣ ೬

**ರೂಪಕತಾಳ**

ಶರಣಾಗತ ಜನ ಪರಿಪಾಲನೆಂಬ
ಬಿರುದೆ ನಿಷ್ಕಾರಣ ಫಲದಾಯಕವೆನುತ
ವರುಣಿಸುತಿಹ ಕುಚೇಲನುದಿನ
ಕರುಣಾಕರ ಎನ್ನ ಕಾಯೊ, ಉದಯಾದ್ರಿ ಶ್ರಿಕೃಷ್ಣ ೭

**ಜತೆ**

ಎಂಥಾ ಸುಲಭನೊ ನೀನು ಉದಯಾದ್ರಿ ಶ್ರಿಕೃಷ್ಣ
ಚಿಂತೆ ಮಾಡುವರಿಗೆಲ್ಲ

ಉದಯಾದ್ರಿ ಶ್ರೀಕೃಷ್ಣ ಪ್ರಸ್ತಾವನೆಯಲ್ಲಿಯ ಟಿಪ್ಪಣಿ ನೋಡುವುದು.

### ಸುಳಾದಿ

### ಮಠ್ಯತಾಳ

ಆಗದ ಹೋಗದ ಮನೆವಾರುತೆ ಬೇರೊಬ್ಬ
ಲೋಗರಿಗಾಗಿ ಹೊತ್ತು ಭವಾಟವಿಯಲ್ಲಿ
ರಾಗವೆಂಬ ಘನ ತೃಷೆಯಿಂದ ಬಾಯೊಣಗಿ
ಭೋಗವೆಂಬ ಬಯಲಮೃಗತೃಷ್ಣೆಗೋಡುತ
ಬೇಗೆಯಿಂದ ಬಿದ್ದೆನೊ ನರಕಕೂಪದಲಿ
ನಾಗಶಯನ ಎನ್ನನುದ್ಧರಿಸೊ ಸಿರಿಕೃಷ್ಣ ೧

### ರೂಪಕತಾಳ

ಇಂದ್ರಿಯಗಳೆಂಬ ಕಳ್ಳರೈವರು
ಬಂಧಿಸಿ ತಮ್ಮ ವಿಷಯಕ್ಕೊಯ್ದೆನ್ನ
ಕಂದಿಸಿ ಜ್ಞಾನವೆಂಬ ದೃಷ್ಟಿಯ
ಎಂದೆಂದಿನ ಧರ್ಮ ಧನವನೊಯ್ದರು
ಇಂದಿರೇಶ ಲೋಕಪತಿ ಸಿರಿಕೃಷ್ಣ ಕಾಯೆನ್ನ ತಂದೆ ೨

### ಝಂಪೆತಾಳ

ನಾನಾಗರ್ಭವೆಂಬ ಕಂಪಿನಲೊಮ್ಮೊಮ್ಮೆ
ಹೀನೋಚ್ಚ ಜನ್ಮವೆಂಬ ತಗ್ಗುಮಿಟ್ಟೆಯಲೊಮ್ಮೆ
ಸ್ವರ್ಗವೆಂಬ ಪರ್ವತಾಗ್ರದಲೊಮ್ಮೆಮ್ಮೆ
ದುರ್ಗತಿಯೆಂಬ ಕಮರಿಯಲಿ ತಾನೊಮ್ಮೆ
ಬಂದೆ ಭವಾಟವಿಯಲ್ಲಿ ನಿನ್ನ ಪಾದಾರ-
ವಿಂದದ ನೆಳಲಲಿರಿಸೆನ್ನ ಸಿರಿಕೃಷ್ಣ ೩

### ತ್ರಿಪುಟತಾಳ

ಹರಿದಾಸರ ನೆರವಿಲ್ಲದೆ ಹರಿಸೇವೆಯೆಂಬ ಪಥವ ಕಾಣದೆ
ಹರಿಪದವೆಂಬ ಜನುಮ ಭೂಮಿಯ ಪರಿದು ದೂರದಲ್ಲಿ ತಪ್ಪಿ
ಮರುಳಾದೆ ಭವಾಟವಿಯಲ್ಲಿ ಸಿರಿಪತಿ ನನ್ನ ಸೇರಿಸೊ ಸಿರಿಕೃಷ್ಣ ೪

### ಅಟ್ಟತಾಳ

ಮಾಯೆಯೆಂಬ ದುಷ್ಟರಾಯ ಮಾನವೆಂಬ ಬಿನುಗು ಮಂತ್ರಿ
ಇಂದ್ರಿಯಗಳೆಂಬ ತಿಂದೋಡುವ ಪರಿವಾರ
ಬಿಗಿದು ಕಟ್ಟಿ ಎನ್ನ ಹಗೆಗಳಿಗಿತ್ತರು
ಕಾಮಾದಿ ಹಗೆಗಳ ಶಿಕ್ಷಿಸಿ ರಕ್ಷಿಸಯ್ಯ ಸಿರಿಕೃಷ್ಣ ೫

**ಆದಿತಾಳ**

ತಾಪತ್ರಯವೆಂಬ ದಾವಾನಲದಿಂದ
ಪಾಪರ ಸಂಗವೆಂಬ ವಿಷವೃಕ್ಷದಿಂದ
ಕಾಪಥವೆಂಬ ಬಹು ತಪ್ಪುಗಳಿಂದ
ಕೋಪವೆಂಬಟ್ಟುವ ಕಾಳೋರಗದಿಂದ ೬

ಈ ಪರಿಯಲಿ ನೊಂದೆ ಭವಾಟವಿಯಲಿ
ನೀ ಪಾಲಿಸಬೇಕೆನ್ನನು ಸಿರಿಕೃಷ್ಣ ೭

**ಜತೆ**

ಅತ್ತಿತ್ತ ಸುತ್ತಿ ಭವಾಟವಿಯಲಿ ನೊಂದೆ
ಇತ್ತ ಬಾರೆಂದು ನಿನ್ನ ಹತ್ತಿಲಿರಿಸೊ ಕೃಷ್ಣ

**೫. ವಿಶಿಷ್ಟ ಗೀತೆಗಳು**

**೨೧೭**

**(ಸುಳಾದಿ)**

**ಧ್ರುವತಾಳ**

ಆಲದೆಲೆಯಲಿ ಮಲಗಿದಂದು ನೀ-
ಲಾಲಿ ಲಾಲಿಯೆಂದು ಪಾಡಿದರಾರೈಯ
ಮತ್ತೆ ಕ್ಷೀರಾಬ್ಧಿಯೊಳು ಮಲಗಿದಂದು ನಿನ್ನ
ತೃಪ್ವಿ ತೃಪ್ವಿಯೆಂದು ತೂಗಿದರಾರೈಯ
ಆ ಜಲಧಿಯ ದರ್ಭಶಯನದಿ ನಿನ್ನನು
ಜೋ ಜೋ ಜೋ ಜೋಯೆಂದು ಪಾಡಿದರಾರೈಯ
ಆ ರಮ್ಮೆ ಶ್ರುತಿಗೂಡಿ ಪೊಗಳುವಂತೆ
ನಾರಂದ ಮಹತಿಯ ಮೀಟುವಂತೆ ಸ-
ಮೀರಜ ಸ್ವರವೆತ್ತಿ ಪಾಡುವಂತೆ
ಶ್ರೀರಮಣ ನಿನ್ನ ಪೊಗಳಬಲ್ಲೆನೆ ನಾನು
ಕಣ್ಣು ಮುಚ್ಚಿ ನಗುತಿಂತೆನ್ನ ಸಥಿಗೆ
ಕಣ್ಣು ಮುಚ್ಚಿ ಕೃಷ್ಣ ಕಿವಿಯಂತಿದ್ದ [?] ೧

**ಮಠ್ಯತಾಳ**

ನಿನ್ನುರದ ಮೋಹದರಸಿಯ ಚೆನ್ನ ಚೆಲುವು ಸರಸಗಳಿಂದ
ನಿನ್ನ ಪೊಕ್ಕಳ ಬ್ರಹ್ಮನ ನಾಲ್ಕು ವದನದ ವೇದ ಘೋಷಣೆಗಳಿಂದ
ನಿನ್ನುದರದ ಜಗದುಲುಹಿನಿಂದ ನಿನ್ನ ಭಕ್ತರು ಕರೆವ ಚೀರಾಟದಿಂದ
ಇನ್ನು ನಿದ್ರೆ ಬಾರದೆ ಇಂತೆಂಬ ಗೋಪಿದೇವಿ ಮಾತಿಗೆ
ಕೃಷ್ಣ ನಾಚಿ ಕಣ್ಣ ಮುಚ್ಚಿದ ೨

**ರೂಪಕತಾಳ**

ಶುಭ ಗುಣಂಗಳ ಖಣಿಯೆ ಜೋ ಜೋ
ಭಕ್ತರ ಚಿಂತಾಮಣಿಯೆ ಜೋ ಜೋ
ಮುನಿಹೃದಯಾಂಬರ ಹಂಸನೆ ಜೋ ಜೋ
ಸರ್ವ ದೇವೋತ್ತಂಸನೆ ಜೋ ಜೋ
ಮುಕುತಿ ಕಾರಣ ಪುಣ್ಯನಾಮನೆ ಜೋ ಜೋ
ಶ್ರೀಕೃಷ್ಣ ವೈಕುಂಠಧಾಮನೆ ಜೋ ಜೋ ೩

**ತ್ರಿಪುಟತಾಳ**

ಶ್ರೀಲೋಲುಪಾ ಲಾಲಿ ಗೋಪಾಲಿಕಾಜಾಲ
ಲೀಲ ಮೂಲಕಾರಣ ಲಾಲಿ ಗೋಪಾಲಕ
ಶ್ರೀಕೃಷ್ಣಯ್ಯ ಲಾಲಿ ಮೂಲಕಾರಣ ಲಾಲಿ ಗೋಪಾಲ ೪

**ಝಂಪೆತಾಳ**

ಪರಬೊಮ್ಮನೆ ಎನ್ನ ತಮ್ಮ ಬಾರೆಂಬ
ಅಜನತಂದೆ ಎನ್ನ ಅಪ್ಪೆಂಬ
ಅರುಹಿ ನೋಡಲೆ ಎನ್ನ ಮರಿಯೆ ಮುದ್ದೀಯೆಂಬ
ಗೋಪಿ ದೇವಿಯ ನೋಂಪಿ ತಾನೆಂತೊ
ಇದಕೆ ಬಂದಪ್ಪಿ ಮುದ್ದೀವ ನಲಿವ
ಮುದ್ದು ಮೈಯ ಕೃಷ್ಣನ ದಯ ತಾನೆಂತೊ ೫

**ಆದಿತಾಳ**

ಒಮ್ಮೆ ನೆನವರ ಪೊರೆಯಬೇಕೆಂಬೊ ಚಿಂತೆ
ಇಮ್ಮೆ ನೆನವರ ಋಣದ ಚಿಂತೆ
ಆವಾಗ ಭಕುತರು ಕರೆದಾರೋ ಎಂಬ ಚಿಂತೆ
ನಿರುಪಾಧಿಕ ಭಕ್ತರ ಹಂಗಿನ ಚಿಂತೆ
ಇನಿತು ಚಿಂತೆಯುಳ್ಳ ನಿನಗೆ ನಿದ್ರೆ-
ಯಿನ್ನೂ ಬಾರದೆ ಎಂದರೆ ಕೃಷ್ಣ ನಗುವ ೬

**ಏಕತಾಳ**

ಬಾಲಲೀಲೆ ಬೇಕಾದರೆ ಮೂರ್ಲೋಕವ
ಬಾಯೊಳಗೆ ತೋರುವನು
ಮಕ್ಕಳಾಟಿಕೇಲ್ಯವ ಬಲ್ಲಿದ
ರಕ್ಕಸರಿಗೆ ಇವ ಕಕ್ಕಸನಾಗಿ
ಚಿಕ್ಕತನವು ಇವಗಳವಡನಾಗಿ
ದಿಕ್ಕು ದೆಸೆಯು ಸಿರಿಕೃಷ್ಣ ರಕ್ಷಿಸು ತಂದೆ ೭

### ಜತೆ

ಚಿನ್ನ ಕೃಷ್ಣನ ಮುದ್ದಿಗೆ ಗೋಪ
ಕನ್ಯೆರೆಲ್ಲರು ತನುಮಯವಾಗಿ ಇಪ್ಪರು

### ೧೮೬

### ಸುಳಾದಿ

### ಧ್ರುವತಾಳ

ಎನ್ನ ಮಹಾದೋಷಗಳನಂತವಾದರೆ ಅಂಜೆ ನಾನು
ನಿನ್ನಯ ಕರುಣ ಅನಂತಾನಂತವಾಗೆ
ನಿನ್ನ ಕಲ್ಯಾಣಗುಣ ಅನಂತಾನಂತವಾಗೆ
ಬಾವನ್ನವ ಸೇರಿದ ಬೇವು ಬಾವನ್ನವಲ್ಲದೆ ಬೇವಾಹುದೆ
ತನ್ನ ಶಿಶುವಿನ ತಪ್ಪಿಗೆ ಜನನಿ ಕೈಯ ಬಿಡುವಳೆ
ನಿನ್ನವನೆನಿಸುವದೊಂದೆ ಸಾಲದೆ ಎನಗೆ
ದಯಾಸಿಂಧು ಶ್ರೀಕೃಷ್ಣ ಒಂದೆ ಸಾಲದೆ ಎನಗೆ ೧

### ಮಠ್ಯತಾಳ

ಹಿಂದಣ ಇಂದಿನ ಮುಂದಣ ಚಂದಾಚಂದದ ಕರ್ಮವನಂತಾನಂತ
ಒಂದೊಂದನುಂಬ ಕಾಲದೊಳಗೆ ಮ-
ತ್ತೊಂದನಂತಾನಂತ ಕರ್ಮ ಕೂಡುತಲಿವೆ
ಅಯ್ಯಯ್ಯಯ್ಯಯ್ಯ ಇದೆಂದು ತೀರುವುದಯ್ಯ
ತಂದೆ ಶ್ರೀಕೃಷ್ಣ ಸಂದರುಶನವಿಲ್ಲದೆ ಈ
ದಂದುಗವ ನೀಗುವ ಬಗೆ ಬೇರಿಲ್ಲ ೨

### ತ್ರಿಪುಟತಾಳ

ಶ್ರುತಿಗಳು ಬಣ್ಣಿಸಿ ಸ್ತುತಿಸಿ ಸ್ತುತಿಸಿ ಅಂದದ ನಿನ್ನ
ದಿತಿಸುತಾವೇಶದಿ ಸಭೆಯೊಳಗತಿ
ಅತಿಬೈದ ಶಿಶುಪಾಲಗೆ ಮುಕುತಿಯ-
ನಿತ್ತೆ ಶ್ರೀಕೃಷ್ಣ ನಿನ್ನ ಭಕುತರಿಗೆಲ್ಲ
ಮಿತಿಯುಂಟೆ ನಿನ್ನ ದಯಕೆ ಹರಿ ಹರಿ
ನಿನ್ನ ಭಕುತರಲಿ ಮಿತಿಯುಂಟೆ ನಿನ್ನ ದಯಕೆ ೩

### ಅಟ್ಟತಾಳ

ಆದ್ಯಪರಾಧ ಮಿಥ್ಯಾಜ್ಞಾನ
ದ್ವಿತೀಯ ಹರಿಯೆ ವಿಸ್ಮರಣ
ತೃತೀಯ ನಿಷಿದ್ಧಾವಿಹಿತಾಚರಣ
ಚತುರ್ಥ ಅಯೋಗ್ಯನಲ್ಲುಪದೇಶಕರಣ

ಕರುಣಾಕರ ಈ ಅಪರಾಧಕೆಲ್ಲ ಶ್ರೀಕೃಷ್ಣ
ನೀ ದಯದಿಂದ ನೋಡಯ್ಯ ೪

**ಏಕತಾಳ**

ಭಕ್ತಿಲೇಶದ ಪ್ರಸಕ್ತಿ ಎನಗಿಲ್ಲ
ಜ್ಞಾನವೆಂಬುದನೇನ ಕಾಣೆ ನಾ
ವೈರಾಗ್ಯದ ವಾರುತೆ ಸೇರದೆನಗೆ
ಆಚಾರ ವಿಚಾರ ಎನಗಿಲ್ಲ
ಜ್ಞಾನವೆಂಬುದನೇನ ಕಾಣೆ ನಾ
ಆನೊಬ್ಬನೆ ಕೃಷ್ಣ ನಿನ್ನವರೊಳು
ಮಾನುಷಪಶು ದಯೆಯಿಂದೆನ್ನ ನೋಡಯ್ಯ ೫

**ಜತೆ**

ಮೆಚ್ಚಿದೆನೊ ಕೃಷ್ಣ ಅಚ್ಚ ಕರುಣಿಯೆಂದು
ಎಚ್ಚೆಂಗೆದೆಯನೊದ್ದಂಗೆ ಮುಕುತಿಯನಿತ್ತೆ

ನನ್ನ ದೋಷ ಅಥವಾ ಅಪರಾಧಗಳು ಹಲವಾರು. ಅವನ್ನು ಮನ್ನಿಸಿ ಕರುಣಿಸು ಎಂದು ಕೇಳಿಕೊಂಡಿದ್ದಾರೆ–ವ್ಯಾಸರಾಯರು. ಮೊತ್ತಮೊದಲಿನ ಅಪರಾಧವೆಂದರೆ ಮಿಥ್ಯಾಜ್ಞಾನ, ಅನಂತರದವು ಹರಿಯ ವಿಸ್ಮರಣ, ನಿಷಿದ್ಧ ಆಚರಣ, ಮತ್ತು ಅಯೋಗ್ಯರಿಗೆ ಉಪದೇಶ. ಇವು ಸ್ವಾನುಭವದಿಂದ ಹೊರಟಂತೆ ಹೊರಹೊಮ್ಮಿದಂತೆ ಭಾಸವಾಗುತ್ತದೆ. 'ಅಯ್ಯಯ್ಯ ಇದೆಂದು ತೀರುವುದಯ್ಯ, ದಯದಿಂದ ನೋಡಯ್ಯ, ಜ್ಞಾನವೆಂಬುದನೇನ ಕಾಣಯ್ಯ' ಎಂದು ಮುಂತಾಗಿ ಹೇಳಿದ್ದುದು ವಚನಗಳ ಧಾಟಿಯನ್ನು ನೆನಪಿಗೆ ತರುತ್ತದೆ.

## ೧೮೯

**ಸುಳಾದಿ**

**ಧ್ರುವತಾಳ**

ಕಾಮವೆಂಬ ಹೆಚ್ಚಿನ ಕಾಡುಗಿಚ್ಚೊಂದು ಕಡೆಯಲೆನ್ನ ಸುಡುತಲಿದೆ
ಕ್ರೋಧವೆಂಬ ಹೆಬ್ಬುಲಿ ಹಸಿದು ಒಂದು ಕಡೆಯಲೆನ್ನ ತಿನ್ನುತಲಿದೆ
ಲೋಭವೆಂಬ ಮಹರಕ್ಕಸನೊಂದು ಕಡೆಯಲೆನ್ನ ಹೀರುತಲೈದಾನೆ
ಮೋಹವೆಂಬ ಕಗ್ಗ'ತ್ತಲೆಯು ಕವಿದು, ದಿಕ್ಕು ದೆಸೆ ಏನೂ ತಿಳಿಯದಿದೆ
ಮದವೆಂಬ ಮದಸೊಕ್ಕಿದ ಕಾಡಾನೆ ಒಂದು ಕಡೆಯಲೆನ್ನ ಸೀಳುತಲಿದೆ
ಮತ್ಸರವೆಂಬ ಮಹಾವಿಷದ ಚೇಳೊಂದು ಕಡೆಯಲೆನ್ನ ಊರುತಲಿದೆ
ಈ ಪರಿ ಭವವೆಂಬಡವಿಯಲಿ ನಾನಾಪರಿಯ ಶತ್ರುಗಳಿಗೊಳಗಾದೆ
ಶ್ರೀಪತಿ ಪರಮ ದಯಾನಿಧೆ ದೀನನಾದೆನ್ನೊಡೆಯ
ರಕ್ಷಿಸು ಸಿರಿಕೃಷ್ಣ ೧

**ಮಠ್ಯತಾಳ**

ಆಗದ ಹೋಗದ ಮನೆವಾರುತೆ ಬೇರೊಬ್ಬ
ಲೋಗರಿಗಾಗಿ ಹೊತ್ತು ಭವಾಟವಿಯಲ್ಲಿ
ರಾಗವೆಂಬ ಘನ ತೃಷೆಯಿಂದ ಬಾಯೊಣಗಿ
ಭೋಗವೆಂಬ ಬಯಲ ಮೃಗತೃಷ್ಣೆಗೋಡುತ
ಬೇಗೆಯಿಂದ ಬಿದ್ದೆನೊ ನರಕ ಕೂಪದಲಿ
ನಾಗಶಯನ ಎನ್ನನುದ್ಧರಿಸೊ ಸಿರಿಕೃಷ್ಣ ೨

**ರೂಪಕತಾಳ**

ಇಂದ್ರಿಯಂಗಳೆಂಬ ಕಳ್ಳರೈವರು
ಬಂಧಿಸಿ ತಮ್ಮ ವಿಷಯಕ್ಕೊಯ್ದೆನ್ನ
ಕಂದಿಸಿ ಜ್ಞಾನವೆಂಬ ದೃಷ್ಟಿಯ
ಎಂದೆಂದಿನ ಧರ್ಮ ಧನವನೊಯ್ದರು
ಇಂದಿರೇಶ ಲೋಕಪತಿ ಸಿರಿಕೃಷ್ಣ ಕಾಯೆನ್ನ ತಂದೆ ೩

**ಝಂಪೆತಾಳ**

ನಾನಾ ಗರ್ಭವೆಂಬ ಕಂಪಿನಲೊಮ್ಮೊಮ್ಮೆ
ಹೀನೋಚ್ಚ ಜನ್ಮವೆಂಬ ತಗ್ಗುಮಿಟ್ಟೆಯಲೊಮ್ಮೆ
ಸ್ವರ್ಗವೆಂಬ ಪರ್ವತಾಗ್ರದಲೊಮ್ಮೊಮ್ಮೆ
ದುರ್ಗತಿಯೆಂಬ ಕಮರಿಯಲಿ ತಾನೊಮ್ಮೆ
ಬಂದೆ ಭವಾಟವಿಯಲ್ಲಿ ನಿನ್ನ ಪಾದಾರ-
ವಿಂದದ ನೆಳಲಲಿರಿಸೆನ್ನ ಸಿರಿಕೃಷ್ಣ ೪

**ತ್ರಿಪುಟತಾಳ**

ಹರಿದಾಸರ ನೆರವಿಲ್ಲದೆ ಹರಿಸೇವೆಯೆಂಬ ಪಥವ ಕಾಣದೆ
ಹರಿಪದವೆಂಬ ಜನುಮ ಭೂಮಿಯ ಪರಿದು ದೂರದಲ್ಲಿ ತಪ್ಪಿ
ಮರುಳಾದೆ ಭವಾಟವಿಯಲ್ಲಿ ಸಿರಿಪತಿ ನಿನ್ನ
ಸೇರಿಸೊ ಸಿರಿಕೃಷ್ಣ ೫

ಮಾಯೆಯೆಂಬ ದುಷ್ಟರಾಯ
ಮಾನವೆಂಬ ಬಿನಗುಮಂತ್ರಿ
ಇಂದ್ರಿಯಗಳೆಂಬ ತಿಂದೋಡುವ ಪರಿವಾರ
ಬಿಗಿದು ಕಟ್ಟಿ ಎನ್ನ ಹಗೆಗಳಿಗಿತ್ತರು
ಕಾಮಾದಿ ಹಗೆಗಳ ಶಿಕ್ಷಿಸಿ
ರಕ್ಷಿಸೈಯ ಸಿರಿಕೃಷ್ಣ ೬

**ಆದಿತಾಳ**

ತಾಪತ್ರಯವೆಂಬ ದಾವಾನಲದಿಂದ
ಪಾಪರ ಸಂಗವೆಂಬ ವಿಷವೃಕ್ಷದಿಂದ
ಕಾಪಥವೆಂಬ ಬಹು ತಪ್ಪು ಗತಿಗಳಿಂದ
ಕೋಪವೆಂಬಟ್ಟುವ ಕಾಳೋರಗದಿಂದ
ಈಪರಿಯಲಿ ನೊಂದೆ ಭವಾಟವಿಯಲಿ
ನೀ ಪಾಲಿಸಲಿಬೇಕೆನ್ನನು ಸಿರಿಕೃಷ್ಣ ೭

**ಜತೆ**

ಅತ್ತಿತ್ತ ಸುತ್ತಿ ಭವಾಟವಿಯಲಿ ನೊಂದೆ
ಇತ್ತ ಬಾರೆಂದು ನಿನ್ನ ಹತ್ತಿಲಿರಿಸೊ ಕೃಷ್ಣ

**೧೦೫**

**ಸುಳಾದಿ**

**ಧ್ರುವತಾಳ**

ತಂದೆಯಾಗಿ ತಾಯಿಯಾಗಿ ಇಂದಿರೇಶನೆ ಎನಗೆ
ಬಂಧುವಾಗಿ ಬಳಗವಾಗಿ ಸಿಂಧುಶಯನನೆ ಎನಗೆ
ಹಿಂದಾಗಿ ಮುಂದಾಗಿ ಮುಕುಂದನೆ ಎನಗೆ
ಸ್ವಾಮಿಯಾಗಿ ಪ್ರೇಮಿಯಾಗಿ ರಕ್ಕ ಸಾಂತಕನೆ
ಗುರುವಾಗಿ ದೈವವಾಗಿ ದೇವೊತ್ತಮನೆ ಎನಗೆ
ವಿದ್ಯೆಯಾಗಿ ಬುದ್ಧಿಯಾಗಿ ವಿದ್ಯಾಪತಿಯೆ
ದಿಕ್ಕಾಗಿ ದೆಸೆಯಾಗಿ ರಾಮಚಂದ್ರನೆ ಎನಗೆ
ಇಹವಾಗಿ ಪರವಾಗಿ ಶ್ರೀಕೃಷ್ಣನೆ ಪೊರೆವ೧

**ಮಠ್ಯತಾಳ**

ಬೊಮ್ಮ ನಮ್ಮ ರುಗ್ಮಿಣಿದೇವಿ ರಾಣಿ
ಪೆರ್ಮೆಯ ಅಜನು ಹೆಮ್ಮಗ
ಹಮ್ಮಿನ ರುದ್ರ ಮೊಮ್ಮಗ
ಸುಮನಸರೆಲ್ಲ ಪರಿವಾರ
ನಮ್ಮ ಸ್ವಾಮಿ ಕೃಷ್ಣ ಎಂದರೆ
ಪೆರ್ಮೆಯಿಂದೊಲಿದಿಲ್ಲವೆ ೨

**ರೂಪಕತಾಳ**

ದೂರದೊಳ್ನಿಂದೊಮ್ಮೆ ಗೋವಿಂದ ಗೋವಿಂದ
ಅನಾಥ ಬಂಧುವೆ ದ್ವಾರಕಾವಾಸಿಯೆಂದು
ಚೀರಿದ ದ್ರೌಪದಿಗೆ ಅಕ್ಷಯಾಂಬರವಿತ್ತ

ಸಾರಿದೆ ನಾನಿನ್ನ ನಂಬಿದೆ ಎನ್ನೆ ಶ್ರೀಕೃಷ್ಣ
ಚೀರಿದ ದ್ರೌಪದಿಗೆ ಅಕ್ಷಯಾಂಬರವಿತ್ತ ೩

ಇತೆಂಬೊದೊಂದು ಪೆರ್ಮೆಯೆ ಹರಿಸೇವೆ ಫಲರೂಪ
ಶ್ರವಣವೆ ಶುಭದ ಬೆಳಗು, ಕೀರ್ತನೆಯೆ ಲೇಸಿನ ಹೆಚ್ಚಿಗೆ
ಸ್ಮರಣವಚ್ಚ ಸುಖವೆಂಬುದನುಭವಸಿದ್ಧ
ಶ್ರೀಕೃಷ್ಣನ ಪಾದಸೇವೆ ಮುಕ್ತಿಕನ್ಯಾಸೇರುವೆ ೧

### ಮಠ್ಯತಾಳ

ನೆನಹಿನ ಲೇಶ ಮಾತುರದಿಂದ ಮಹ
ಘನ ಸುಖಮಯನಾಗಿಪ್ಪೆ ನಾನಾವಾಗ
ತನುಭಾವವಳಿದು ಮೌನಿಗಳಂತೆ ಮೈಮರೆದು ಕು-
ಜನಾಚಾರವಳಿದು ಸಲೆ ನಿನ್ನನನವರತ
ನೆನೆವ ಭಕುತರ ಸುಖವನ್ನೆಂತೊ ಸಿರಿಕೃಷ್ಣ ೨

### ತ್ರಿಪುಟತಾಳ

ಪುತ್ರಮಿತ್ರ ಕಳತ್ರ ವರ್ಗದಿಂದ
ದೇಹಕರ್ಮ ಜ್ಞಾನೇಂದ್ರಿಯಂಗಳಿಂದ
ಚಿತ್ತಬುದ್ಧಿ ಮನೋ ಹಮ್ಮುಗಳಿಂದ
ಪ್ರಾಣದಿಂದ ತನ್ನಾತ್ಮದಿಂದ
ನೀನೆ ಪ್ರಿಯನಾಗಿಹೆ ಸಿರಿಕೃಷ್ಣ
ನಿನ್ನ ನೆನೆಹಿಗಿಂತ ಬೇರೆ ಪರಮ ಸುಖವುಂಟೆ? ೩

### ಅಟ್ಟತಾಳ

ಆನಿನ್ನು ಧನ್ಯನಲ್ಲಾ[=ಅಲ್ಲವೆ?] ಮತ್ತೇನು ಕಾರಣ ಕೊಂಡೇನು
ನಾನಾದುರಿತ ತನ್ನಂತಾನೆ ಬೆಂದುದಲ್ಲಾ !
ಶ್ರೀನಾಥ ಶ್ರೀಕೃಷ್ಣ ತಾನೇ ನೆನೆವಿಗೆ ಬಂದನಲ್ಲಾ
ಅಂದು ವಿಷ್ಣು ಇಂದು ವಿಷ್ಣು ಎಂದೆಂದು ವಿಷ್ಣು ತಾನೆ
ಅತ್ತವಿಷ್ಣು ಇತ್ತ ವಿಷ್ಣು ಎತ್ತೆತ್ತ ವಿಷ್ಣು ತಾನೆ
ಸರ್ವಯಜ್ಞ ಸರ್ವಶಕ್ತಿ ಸಾಧುಗತಿ ವಿಷ್ಣು ತಾನೆ
ಸ್ವಪ್ನಸುಷುಪ್ತಿ ಜಾಗ್ರತೇಲಿ ವಿಷ್ಣು ತಾನೆ
ಓವಿನೋವಿ ಮನದಲ್ಲಿ ಕಾವಕೃಷ್ಣನಿರುತಿರೆ
ಆವಾಗಲೆಲ್ಲಿಹದಾವಭಯ ನಿನಗೆ ಜೀವ ೪

### ಏಕತಾಳ

ಕರಿ ಹರಿಯೆನಲಾ ಸುಪ್ತಿಯ ತಳ್ಳಿ
ಸಿರಿಯ ಸಾರೆನುತ ಉರಗ ಮಂಚದಿಂ ಧುಮುಕಿ
ಕರವಿತ್ತ ವಿರಿಂಚನ  ಕೈಲಾಗು ಒಲ್ಲದೆ
ಭರದಿ ಹನುಮನಿತ್ತ ಹಾವಿಗೆಯನು ದಾಂಟಿ
ಗರುಡನೊದಗುತಿರೆ ತಿರುಗಿ ನೋಡದೆ ಬಂದ
ಕರುಣವ ತೋರೆನಗೆ ನಮೋ ನಮೋ ನಮೋ ಸಿರಿಕೃಷ್ಣ೫

**ಜತೆ**

ನಾರಾಯಣಾ ಎಂದು ಮಗನ ಕರೆಯೆ, ಎನ್ನ
ಕರೆದನೆಂದಜಮಿಳ ನಂಜದಿರೆಂದ ಕೃಷ್ಣ

'ಕರಿ ಹರಿಯೆನಲಾ ಸುಪ್ತಿಯ ತಳ್ಳಿ'-ಇದು ಗಜೇಂದ್ರ ಮೋಕ್ಷದ ಕಥೆ. ಪೂರ್ವ ಜನ್ಮದಲ್ಲಿ ಪರಮ ವಿಷ್ಣು ಭಕ್ತನಾಗಿ ಈ ಗಜೇಂದ್ರ ನೀರು ಕುಡಿಯುತ್ತಿದ್ದಾಗ ಮೊಸಳೆ ಕಾಲನ್ನು ಹಿಡಿಯಿತು. ಆಗ ಅವನು ಆರ್ತನಾದದಿಂದ ಶ್ರೀಹರಿಯನ್ನು ಕೂಗಿ ಕರೆದಾಗ, ಶ್ರೀಹರಿಯು ಮೊಸಳೆಯಿಂದ ಅವನ ಬಿಡುಗಡೆ ಮಾಡಿದ.

ಇದು ಗೊತ್ತಿದ್ದ ಕಥೆಯಾದರೂ ಶ್ರೀ ವ್ಯಾಸರಾಯರು ಈ ಕೀರ್ತನೆಯಲ್ಲಿ ಭಗವಂತ'ನು ಭಕ್ತರ ನೆರವಿಗೆ ಹೇಗೆ ಧಾವಿಸುತ್ತಾನೆಂಬುದನ್ನು ಸೊಗಸಾಗಿ ಚಿತ್ರಿಸಿದ್ದಾರೆ. ಗಜೇಂದ್ರನ ಕೂಗು ಕೇಳಬಂದಾಗ ನಿದ್ರೆಯಲ್ಲಿದ್ದ ಶ್ರೀಹರಿ ಥಟ್ಟನೆ ಎದ್ದ. ಲಕ್ಷ್ಮೀದೇವಿಗೆ ಕೂಡಲೇ ನನ್ನ ಜೊತೆಗೆ ನಡೆ ಎಂದು ಹೇಳಿದವನೆ ಶೇಷಶಯನದಿಂದ ಕೆಳಗೆ ಧುಮುಕಿದ. ಆಗ ಬ್ರಹ್ಮನು ಆಸರೆಗೆಂದು ಕೈಚಾಚಿದಾಗ ಬದಿಗೆ ಸರಿಸಿದ. ವಾಯುವು ಮುಂದಿರಿಸಿದ ಪಾದುಕೆಯನ್ನು ಅಲ್ಲಿಯೇ ಬಿಟ್ಟ. ತನ್ನನ್ನು ಕರೆದೊಯ್ಯಲೆ'ಂದು ಬಂದ ಗರುಡನ ಕಡೆಗೆ ನೋಡದೇ ಗಜೇಂದ್ರನತ್ತ ಧಾವಿಸಿದ.

## ೧೦೬
## ಸುಳಾದಿ
### ಧ್ರುವತಾಳ

ತಾಯಿ ಈ ಲೋಕಕ್ಕೆ ಶ್ರೀಹರಿ ಕಾಯದಿ ಜಗವನಿಟ್ಟನಾಗಿ
ತಂದೆ ಈ ಲೋಕಕ್ಕೆ ಶ್ರೀಹರಿ ಅಂದೆ ಬೊಮ್ಮಾದಿಗಳ ಸೃಜಿಸಿದವನಾಗಿ
ಒಡೆಯನೀ ಲೋಕಕ್ಕೆ ಶ್ರೀ ಹರಿ ಬಿಡದೆ ರಾಮಾದಿ ರೂಪದಿ
ಪೊರೆವನಾಗಿ
ಗತಿ ಈ ಲೋಕಕ್ಕೆ ಶ್ರೀಹರಿ ಶ್ರೀಪತಿ ತನ್ನ ನೆನೆವರಿಗಭಯವ
ನೀವನಾಗಿ
ಈಶನೀಲೋಕಕ್ಕೆ ಶ್ರೀಹರಿ ವ್ಯಾಸಾದಿ ರೂಪದಿ ಜ್ಞಾನವನೀವನಾಗಿ
ದೈವವೀಲೋಕಕ್ಕೆ ಶ್ರೀಹರಿ ಸರ್ವಧರ್ಮಗಳಿಂದ ಸೇವ್ಯನಾಗಿ
ಪರತತ್ವವೀಲೋಕಕ್ಕೆ ಶ್ರೀಹರಿ ವರಮುಕ್ತಿ ನಾನೊಬ್ಬನೀವನಾಗಿ

ಸರ್ವವೀಲೋಕಕ್ಕೆ ಶ್ರೀಕೃಷ್ಣ ಓರ್ವನೆ ಸತ್ಯವ್ಯಾಪಕನಾಗಿ ೧

**ಮಠ್ಯತಾಳ**

ಪತಿಯೆಂದುಪಾಸ್ಯ ಪದುಮ ಜಾತೆಗೆ
ಪಿತನೆಂದುಪಾಸ್ಯ ಪದುಮಜರಿಗೆ
ಸ್ವಶುರನೆಂದುಪಾಸ್ಯ ಸರಸ್ವತಿಗೆ
ಪಿತಾಮಹನೆಂದುಪಾಸ್ಯ ಪಿನಾಕಧರಗೆ
ಸ್ವಾಮಿಯೆಂದುಪಾಸ್ಯ ಸರ್ವರಿಗೆ ಸಿರಿಕೃಷ್ಣ
ಈ ಮಹಿಮಗುಪಾಸ್ಯನುಗ್ರಸೇನ ಗಡ ೨

**ರೂಪಕತಾಳ**

ಸರಸಿಜಾಕ್ಷನು ವಿರಿಂಚಿಗೆ ಗುರು
ಪುರಹರನಿಗೆ ಪರಮಗುರು ಮಿಕ್ಕ
ಸುರತತಿಗೆಲ್ಲ ಆದಿಗುರು
ನರೋತ್ತಮರಿಗೆಲ್ಲ ಮೂಲಗುರು
ಪರದೈವ ಶ್ರೀಕೃಷ್ಣಗೆ ಗುರುವಾದ ಸಾಂದೀಪ'ಗಡ ೩

**ಝಂಪೆತಾಳ**

ಶೋಕಾದಿ ದೋಷಾತಿದೂರನೆಂಬ
ಜ್ಞಾನೈಕರಸ ದಿವ್ಯ ಮೂರುತಿಯೆಂಬ
ಲೌಕಿಕಾಮಂದಾನಂದ ಸಾಂದ್ರನೆಂಬ
ಸಾಕುವ ತನ್ನ ನಿಜ ಸ್ವಾಮಿಯೆಂಬ
ನಾಲ್ಕು ಬಗೆಯ ಉಪಾಸನವಿಲ್ಲದವಗೆ
ಶ್ರೀಕೃಷ್ಣ ತನ್ನ ಮೂರುತಿಯ ತೋರ ಗಡ ೪

**ಆದಿತಾಳ**

ಎಡರುಗಳೆಲ್ಲಂ ಅಡರಿದಡಂ
ಕುತ್ತುಗಳೆಲ್ಲಂ ಮುತ್ತಿದಡಂ
ವ್ಯಾಧಿಗಳೆಲ್ಲಂ ಬಾಧಿಸಿದಡಂ
ಶೋಕಗಳೆಲ್ಲಂ ಮೂಕಿ ಕಟ್ಟಿದಡಂ
ಶ್ರೀಕೃಷ್ಣ ಪೂರ್ಣಗುಣ ಸ್ವಾಮಿಯೆಂಬ
ಏಕಾಂತೋಪಾಸನೆಯ ಮರೆಯದಿರಾ

**ಜತೆ**

ಶ್ರವಣಾದಿಯನೊಂದು ಕ್ಷಣವು ಬಿಡದೆಮಾಡು

ಭುವನಪಾವನ ಕೃಷ್ಣನ ಚಿತ್ತವ ಪಡೆವರೆ

'ಶೋಕಾದಿ ದೋಷಾತಿ' ದೂರನೆಂಬ– ಸತ್, ಚಿತ್, ಆನಂದ ಮತ್ತು ಆತ್ಮ ಎಂಬೀ ನಾಲ್ಕು ಉಪಾಸನಾ ಕ್ರಮಗಳನ್ನು ಇಲ್ಲಿ ತಂದಿದ್ದಾರೆ.

### ೧೦೭
### ಸುಳಾದಿ
### ಧ್ರುವತಾಳ

ತಾಯಿಯೆಂಬೆನೆ ನಿನ್ನ–ಧ್ರುವನ್ನ ತಾಯಿಯು ನಿನ್ನಂತೆ ಕಾಯಿದಳೆ
ತಂದೆಯೆಂಬೆನೆ ನಿನ್ನ–ಪ್ರಹ್ಲಾದನ ತಂದೆ ನಿನ್ನಂತೆ ಕಾಯಿದನೆ
ಭ್ರಾತೃ ಎಂಬೆನೆ ನಿನ್ನ–ವಿಭೀಷಣನ್ನ ಭ್ರಾತೃನಿನ್ನಂತೆ ಕಾಯಿದನೆ
ಪತಿಯೆಂಬೆನೆ ನಿನ್ನ–ಪಾಂಚಾಲಿಯ ಪತಿಗಳು ನಿನ್ನಂತೆ ಕಾಯಿದರೆ
ತಾಯಿಯೆಂಬೆನೆ–ನಿನ್ನ
ಪುತ್ರನೆಂಬೆನೆ ನಿನ್ನ ಉಗ್ರಸೇನನ ಪುತ್ರ ನಿನ್ನಂತೆ ಕಾಯಿದನೆ
ಮಿತ್ರನೆಂಬನೆ ನಿನ್ನ ಗಜೇಂದ್ರನ ಮಿತ್ರರು ನಿನ್ನಂತೆ ಕಾಯಿದರೆ
ಆವ ಅನಿಮಿತ್ತ ಬಂಧುವೊ ನೀನಾವ ಕರುಣಾಸಿಂಧುವೋ
ದೇವ ಕೃಷ್ಣ ನಿನಗೆ ಭಂಟರಲ್ಲಿ ನೆಂಟತನ ಹೊಸಪರಿಯಯ್ಯ ೧

### ಮಠ್ಯತಾಳ

ದಾನಿಗಳರಸಂಗೆ ದೈನ್ಯವು ಬಲಿಯಲ್ಲಿ
ಕೈವಲ್ಯಪತಿಗೆ ದಾವಿನ ಬಂಧವ
ಲಕ್ಷುಮಿಪತಿಗೆ ಯಜ್ಞದೀಕ್ಷೆ ತಿರುಕೆ
ಲೋಕ ಗುರುವಿಂಗೆ ಪೊಕ್ಕಾಟ ಗೋಪೇರಲ್ಲಿ
ಈಸುವಿನೋದ ನಿನ್ನ ದಾಸರಿಗಾಗಿಯೆ
ಶ್ರೀಪತಿ ಶ್ರೀಕೃಷ್ಣ ನಿನ್ನ ದಾಸರಿಗಾಗಿಯೆ ೨

### ತ್ರಿಪುಟತಾಳ

ಹಿಂದೆ ದಾನವರ ಬರಿದೆ ಬಳಲಿಸಿ
ವೃಂದಾರಕರಿಗೆ ಸುಧೆಯನ್ನೆರೆದೆ
ಆವಪರಿಯಿಂದ ಅಸುರರ ಗೆಲುವೆ
ದ್ೇವರೆಲ್ಲರನೋವಿ ಕಾವೆ
ಆವಾವ ಕಾಲದಲ್ಲಿ ಆವಾವ ದೇಶದಲ್ಲಿ
ಆಮೊತ್ತ ದೇವರಿಗೆಲ್ಲ ನೀನೊಬ್ಬನೆ ತೆತ್ತಿಗನಲ್ಲದೆ
ತೆತ್ತಿಗನಲ್ಲದೆ ಮತ್ತೋರ್ವರುಂಟೆ ಸಿರಿಕೃಷ್ಣ ಆವಾವಕಾಲದಲ್ಲಿ ೩

**ರೂಪಕತಾಳ**

ಹಿಂದೆ ಪಿಂಗಳೆಯಾದಂದು ನಿನ್ನ ಚೆಂದದ ಗೋಪಾಲ ಮೂರುತಿಯ
ಚಂದದ ಗೋಪಾಲ ಮೂರುತಿಯ ನಿನ್ನ ಚಂದದ ಗೋಪಾಲ
ಮೂರುತಿಯ
ಒಂದುಬಾರಿ ನೆನೆದ ಕುಬುಜೆಗೆ ಎಂದೆಂದು ನಿನ್ನನಿತ್ತೆ
ಎಂದೆಂದು ನಿನ್ನನಿತ್ತೆ ಎಂದಾದರೊಮ್ಮೆ ನೆನೆದರೆ
ಒಮ್ಮೆ ನೆನೆದರೆ ಎಂದೆಂದಿಗೂ ಬಿಡೆಯಲೌ ಸಿರಿಕೃಷ್ಣ ಹಿಂದೆ
ಪಿಂಗಳೆಯಾದಂದು ೪

**ಅಟ್ಟತಾಳ**

ಕಂಸಾರಿಯೆಂದು ಸಂಸಾರ ದಾಟುವೆ
ಶ್ರೀಪತಿಯೆಂದು ಪಾಪವ ನೆರೆ ಅಟ್ಟುವೆ
ಕಂಜನಾಭನೆಂದು ಅಂಜಿಸುವೆನು ಜವನ
ನಿನ್ನ ಹೆಸರ್ಢೇಳಿ ಬದುಕುವ ದಾಸ ನಾನು
ಸಿರಿಕೃಷ್ಣ ಬದುಕುವ ದಾಸ ನಾನು ೫

**ಆದಿತಾಳ**

ಆಳಿದ ನೀನು ನಿನ್ನಾಳು ನಾನು
ತಂದೆ ನೀನು ನಿನ್ನ ಕಂದ ನಾನು
ಶರಣ್ಯ ನೀನು ನಿನ್ನ ಶರಣಾಗತ ನಾನು
ದಯಾಳು ನೀನು ನಿನ್ನ ದಯಕೆ ಪಾತುರ ನಾನು
ನೋವ ನೋಡಿನ್ನು ಕಾವರಿಲ್ಲೆಂದು
ಶ್ರೀಕೃಷ್ಣ ಎನ್ನನು ಕಾಯಬೇಕೈ ತಂದೆ ೬

**ಜತೆ**

ಎಂದೆಂದಿಗು ಶತ್ರು ಅಸುರ ಜೀವರಿಗೆ
ಎಂದೆಂದಿನ ಮಿತ್ರ ಸುರರಿಗೆ ಶ್ರೀಕೃಷ್ಣ

ಇದರಲ್ಲಿಯ ನಿಂದಾಸ್ತುತಿ ಗಮನಿಸುವಂತಿದೆ. ತಾಯಿ, ತಂದೆ, ಮಿತ್ರ ಮುಂತಾಗಿ ಬಂಧು ಬಳಗದ ಸಂಬಂಧವನ್ನು ಭಗವಂತನಲ್ಲಿ ಆರೋಪಿಸಿ, ಅವರುಗಳಿಗಿಂತ ಶ್ರೀಹರಿಯ ನಂಟುತನ ಹೇಗೆ ಹೆಚ್ಚಿನದು–ಎಂಬುದನ್ನು ವರ್ಣಿಸಿದ್ದಾಗಿದೆ. ಶರಣ್ಯ ನೀನು, ನಿನ್ನ ಶರಣಾಗತ ನಾನು ಎಂಬುದು ಇಲ್ಲಿಯ ತಿರುಳು.

**೧೯೪**

**ಧ್ರುವತಾಳ**

ದೇಹ ಜೀರ್ಣವಾಯಿತು ಧನನೇಹ ಜೀರ್ಣವಾಗದು
ಅಯ್ಯ ಕಣ್ಣು ಕಿವಿ ಮಂದವಾದವು ಹೆಣ್ಣು ಮಣ್ಣಿನಾಶೆ ಮಂದವಾಗದು
ಕಾಲು ಕೈ ಜವಗುಂದಿದುವು ಭೋಗಲೋಲತೆ ಜವಗುಂದವು
ಜರೆ ರೋಗದಿಂದ ನೆರೆಹೊರೆ ಹೇಸಿತು ಶರೀರದಲ್ಲಿ ಹೇಸಿಕೆ ಇನಿತಿಲ್ಲ
ದೇಹ ಪಾಪಕೋಟಿಗಳ ಮಾಡಿದರಿನ್ನು ತಾಪ ಮನದೊಳಗಿನಿತಿಲ್ಲ
ಹೀಗೆ ಸಂದು ಹೋಯಿತು ಕಾಲವೆಲ್ಲವು,
ಮುಂದಣಗತಿ ದಾರಿ ತೋರದು
ಅನಾದಿಯಿಂದ ನಿನ್ನವನೆನಿಸಿದೆ ಎನ್ನ ಕುಂದು ನಿನ್ನದಲ್ಲವೆ
ಇನ್ನಾದರು ದಯೆಯಿಂದೆನ್ನ ನೋಡಿ ಮನ್ನಿಸಬೇಕೈಯ
ಎನ್ನನು ಸಿರಿಕೃಷ್ಣ ೧

### ಮಠ್ಯತಾಳ

ಹರಿನಾಮ ಹರಿಪಾದ ತೀರಥವಿರಲು
ಹರಿದಿನ ಹರಿದಾಸರ ಪಾದ ರಜವಿರಲು
ದುರಿತದ ಭಯವ್ಯಾಕೆ ನರಕದ ಭೀತ್ಯಾಕೆ
ದುರಿತದ ಭಯವೆ ಕೇಸರಿಯ ಇಕ್ಕೆಯೊಳಿದ್ದವಗೆ
ಕರಿಯ ಭಯವುಂಟೆ ಶ್ರೀಕೃಷ್ಣನ ದಾಸರ ಸಂಗವಿರಲು
ದುರಿತ ತಿಮಿರಕ್ಕೆ ತರಣಿ ತಾನಲ್ಲವೆ ೨

### ತ್ರಿಪುಟತಾಳ

ಯಮಪಟ್ಟಣದ ಬಟ್ಟೆ ಕಠಿಣವಾದರೆ ಏನು
ಯಮಯಾತನೆ ಬಲು ತೀವ್ರವಾದರೆ ಏನು
ಯಮಕಿಂಕರರು ಭಯಂಕರರಾದಡೇನು
ಕಮಲನಾಭನ ದಾಸರಿಗೆ ಅಂಜಿಕೆಯುಂಟೆ
ನಮೋ ನಮೋ ಶ್ರೀಕೃಷ್ಣ ಎಂದರೋಡುವರೈಯ
ಯಮಭಟರು ತಮ್ಮಾಳ್ದನಾಜ್ಞೆಯ ನೆನೆದು ೩

### ಅಟತಾಳ

ಆವನ್ನ ಚಿತ್ತವು ಅಚ್ಯುತನ ಮೆಚ್ಚದು
ಆವನ್ನ ನಾಲಗೆ ಶ್ರೀಲೋಲನೆನ್ನದು
ಆವನ್ನ ಶಿರ ಬಲಿ ಬಂಧನ್ನಗೆರಗದು
ಅವನೆ ನರಾಧಮ ನರಕಪಥಿಕನು
ಶ್ರೀಕೃಷ್ಣನವರು ವೈಕುಂಠ ಪಥಿಕರು ೪

ಸಾಂಕೇತವಾಗಲಿ ಪರಿಹಾಸ್ಯವಾಗಲಿ
ಅಣಕದಿಂದಾಗಲಿ ಡಂಭದಿಂದಾಗಲಿ
ಎದ್ದಾಗಲಿ ಮತ್ತೆ ಬಿದ್ದಾಗಲಿ

ನಮೋ ನಮೋ ನಮೋ ಸಿರಿಕೃಷ್ಣ ಎಂಬ ಘೋಷ
ಮುಕುತಿ ಕನ್ನಿಕೆಯ ಮದುವೆಯ ವಾದ್ಯಘೋಷ ೫

**ಜತೆ**

ಸಂತತದಲ್ಲಿ ನಿನ್ನ ನಾಮ ನಾಲಿಗೆಯಲ್ಲಿ
ಅಂತ್ಯ ಕಾಲದಲಿ ವಿಶೇಷವಾಗಲೋ ಕೃಷ್ಣ

ಆತ್ಮನಿವೇದನೆಯ ಕಾಲಕ್ಕೆ ಆತ್ಮನಿಂದನೆಯಲ್ಲಿ ಸಾಮಾನ್ಯವಾಗಿ ಹರಿದಾಸರು ತೊಡಗುವುದುಂಟು. ಆದರೆ 'ದೇಹ ಜೀರ್ಣವಾಯಿತಾದರೂ ಧನನೇಹ ಜೀರ್ಣವಾಗದು ; ಕಣ್ಣು ಕಿವಿ ಮಂದವಾದರೂ ಹೆಣ್ಣು ಮಣ್ಣಿನಾಶೆ ಮಂದವಾಗದು' ಎಂಬ ಮಾತು ವ್ಯಾಸರಾಯರ ವೈಯಕ್ತಿಕ ಜೀವನದಲ್ಲಿ ನಡೆದದ್ದೇನಲ್ಲ. 'ಜೇನಿನೊಳಗೆ ಬಿದ್ದ ನೊಣದಂತೆ ಸತಿ-ಸುತ ಜನಪಾಶಬದ್ಧನಾದೆ' (ಕೀ. ೨೦೧)ಎಂಬುದಂತೂ ಸಾಮಾನ್ಯ ಸಂಸಾರಿಗನಿಗೇನೆ ಅನ್ವಯಿಸುವ ಮಾತು. 'ಅದರಂತೆ ನಾನೆಲ್ಲಿ ಜ್ಞಾನಿಯು, ನಾನೆಲ್ಲಿ ಸುಜನನು ಹೀನ ವಿಷಯಗಳುಂಬ ಶ್ವಾನನಂತಿರುವೆ' ಎಂಬುದು ಅವರಿಗೆ ಎಷ್ಟು ಮಾತ್ರಕ್ಕೂ ಅನ್ವಯಿಸುವಂತಹದಲ್ಲ. ಅದು ಲೋಕರೂಢಿಯ ಮಾತೆಂದೇ ಬಗೆಯತಕ್ಕದು.

**೧೧೦**

**ಸುಳಾದಿ**

**ಧ್ರುವತಾಳ**

ನಾನಾಯಾಗದ ಹವಿಗಳಿಂದಂ ಕದ್ದ ಬೆಣ್ಣೆ ಸವಿಯೆ
ಜ್ಞಾನಿಗಳಿತ್ತುಪಹಾರದಿಂದಂ ಯಜ್ಞಭಿಕ್ಷೆ ಲೇಸೆ
ಶ್ರೀ ನಾರಿಮಾಡುವ ಪೂಜೆಗಳಿಂದಂ ಒಪ್ಪಿಡಿ ಅವಲೊಳಿತೆ
ಏನೆನ್ನಬಾರದು ನಿನ್ನಾನಂದಕ್ಕೆ ವಿದುರನೌತಣ ಮಿಗಿಲೆ ಶ್ರೀಹರಿ ಹರಿ

ಮಾನಸ ವಚನಕಗೋಚರವಾದ
ಆನಂದ ನೀನಲ್ಲವೆ
ಜ್ಞಾನಾದಿ ಗುಣಗಣ ನಿತ್ಯ ತೃಪ್ತ
ನಿರ್ದೋಷ ನೀನಲ್ಲವೆ
ಏನೈಯ ನಿನ್ನ ಭಕ್ತವತ್ಸಲತನ
ಎಲೊ ಎಲೊ ಕೃಷ್ಣಯ್ಯ
ನೀನೆ ಕಾಡಿ ಬೇಡಿ ಯಶೋದೆಯ ಕೈಯಲ್ಲಿ
ಉಗ್ಗವೇರಿಸಿಕೊಂಡು ನಲಿದಾಡಿವೆ ೧

**ಮಠ್ಯತಾಳ**

ಶ್ರೀವರ ಪರಾಕು ಚಿತ್ತಾವಧಾನವೆಂದು ನಿನ್ನಾವಾಗ
ವೋಲೈಸುವರಜಭವಾಧಿಕಾರಿಗಳು
ದೇವ ದೇವ ಸಾರ್ವಭೌಮ ನೀನುಗ್ರಸೇನಂಗೆ

ದೇವ ಜೀಯ ಸಾಸಮುಖವೆಂಬುದು ಇ
ದಾವಲೀಲೆಯೊ ಭಕ್ತವತ್ಸಲ ಸಿರಿಕೃಷ್ಣ ೨

**ಝುಂಪೆತಾಳ**

ಮುನಿ ಮನಂಗಳು ತೊಳಲಿ ಕಾಣವು
ಅನಂತ ವೇದಗಳು ನೆಲೆಗಾಣವು
ವನಿತೆ ಸಿರಿಯೆಂಬ ಘನತೆಯನು ಬಿಟ್ಟು
ಚಿನುಮಯನೆ ನೀನು ಕುಬುಜೆಯ
ಮನೆಯನರಸಿಕೊಂಡ್ಯಾಕೆ ಪೋದೆ
ನೆನೆವರಲ್ಲಿ ಅಳುಕಂದಿತನವಿದು
ಘನವಲ್ಲ ನಿನಗೆ ಎಲೊ ಎಲೊ ಕೃಷ್ಣಯ್ಯ ೩

**ಅಟ್ಟತಾಳ**

ನಿನ್ನ ಮೂರುತಿಯಂ ನೋಡಿದಡಂ
ನಿನ್ನ ನಾಮವಂ ನುಡಿದಡಂ
ನಿನ್ನನ್ನೊಮ್ಮೆ ನೆನೆದಡಂ
ನಿನ್ನ ಕೀರುತಿಯಂ ಪಾಡಿದಡಂ
ಘನ್ನ ಭವಬಂಧ ಪರಿವುದು ಇಂ
ತೆನ್ನೆ ಕಟ್ಟಿದಳೆಂತು ನಿನ್ನ ಗೋಪಿ
ಚೆನ್ನ ಕೃಷ್ಣ ವಿನೋದಿಗಳರಸ ೪

**ಏಕತಾಳ**

ದಹರಾಕಾಶದಿ ತತ್ವದ್ವಾರದಿ
ದ್ರುಹಿಣಾದ್ಯರು ನಿನ್ನನೋಲೈಸುವರು
ಬಹುಪರಿ ಚರಿಯಲಿ ಗದೆಯನ್ನು ತಿರುಹುತ
ಮಹಮಹಿಮ ನೀ ಪರೀಕ್ಷಿತನ
ಪ್ರಹರಿಯ ಕಾಯ್ದುದೆಂತೊ
ಮಹಮಹಿಮ ನೀ ಭಕುತರ ಭಾರವ
ವಹಿಸುವ ಕಾರ್ಯಕೆ ನಮೊ ನಮೊ ಸಿರಿಕೃಷ್ಣ ೫

**ಜತೆ**

ಚಕ್ರವರ್ತಿ ತನ್ನ ಜೊತೆ ಶಿಶುಗಳಿಗೆಂತಂತೆ
ಭಕ್ತರಿಗೆ ಸುಲಭನೊ ನಮ್ಮ ಸಿರಿಕೃಷ್ಣ

ವ್ಯಾಜನಿಂದಾಸ್ತುತಿಯು ಇಲ್ಲಿಯ ವಿಶೇಷತೆಯಾಗಿದೆ. ಯಜ್ಞಗಳಲ್ಲಿ ನಿನಗೆ ಸಲ್ಲಿಸಿದ ಶ್ರೇಷ್ಠವಾದ ಹವಿಸ್ಸಿಗಿಂತ ನಿನಗೆ ಕಳವಿನ ಬೆಣ್ಣೆ ಹೆಚ್ಚು ಸವಿಯಾಯಿತಲ್ಲ ಎನ್ನುತ್ತಾರೆ ವ್ಯಾಸರಾಯರು.

ಒಪ್ಪಿಡಿ ಅವಲೊಳಿತೆ=ಒಂದು ಹಿಡಿ ಅವಲ್(ಅವಲಕ್ಕಿ) ನಿನಗೆ ಒಳಿತಾಯಿತಲ್ಲ. ಇಲ್ಲಿ ಸುಧಾಮನ ಚರಿತ್ರೆ ಇದೆ. ಒಂದು ಹಿಡಿ ಒಣಗಿದ ಅವಲಕ್ಕಿ ಲಕ್ಷ್ಮೀದೇವಿಯು (ಶ್ರೀನಾರಿ)ಮಾಡುವ ಉಪಚಾರಕ್ಕಿಂತ ಮಿಗಿಲಾಯಿತು–ಶ್ರೀಕೃಷ್ಣನಿಗೆ.

ಕಂಸನ ಮರಣಾನಂತರ ಶ್ರೀಕೃಷ್ಣನು ಅವನ ರಾಜ್ಯವನ್ನು ಅವನ ತಂದೆ ಉಗ್ರಸೇನನಿಗೆ ಒಪ್ಪಿಸಿ ಸಿಂಹಾನದ ಮೇಲೆ ಕೂಡಿಸಿದಾಗ ಅವನು ಉಗ್ರಸೇನನಿಗೆ ಜೀಯ ಎಂದಂತಾಯಿತು. ತಾನು ಮಾತ್ರ ದೇವತೆಗಳಿಗೂ ಸಾರ್ವಭೌಮನಲ್ಲವೆ.

ಇಂತೆನ್ನೆ=ಇಂತು+ಎನ್ನಲಾಗಿ

'ದ'ಹರಾಕಾಶದಿ ತತ್ವದ್ವಾರದಿ ದ್ರುಹಿಣಾದ್ಯರು ನಿನ್ನ ಓಲೈಸುವರು'–ಹೃದಯವೆಂಬುದು ಅವ್ಯಾಕೃತವಾದ ಆಕಾಶದಂತೆ. ಅಲ್ಲಿ ಬ್ರಹ್ಮ(ದ್ರಹಿಣ) ಮೊದಲಾದವರು ನಿನ್ನನ್ನು ಓಲೈಸುವರು.

೧೯೭

**ಸುಳಾದಿ**

**ಮಠ್ಯತಾಳ**

ನಿಧಿಯ ಮೇಲೆ ಇದ್ದು ನಿಧಿಯನರಿಯದಂತೆ
ತನ್ನ ಕಂಠಮಣಿಯ ತಾ ಮರೆತಂತೆ
ಕಣ್ದೆರೆಯದ ಹಸುಳೆ ತಾಯನರಿಯದಂತೆ
ಎನ್ನಲ್ಲಿ ಹೊಂದಿಪ್ಪ ನಿನ್ನನರಿಯದಂತೆ
ನಿನ್ನ ತೋರಿದರೆನಗೆ ನಿನ್ನ ದಾಸರು ಸಿರಿಕೃಷ್ಣ

**ರೂಪಕತಾಳ**

ಜನನ ಮರಣ ಮಾರ್ಗದಲ್ಲಿ ತೊಳಲಿ ಬಳಲಿ ಸ್ವರ್ಗ
ನರಕಕ್ಕೇರಿ ಮಮತೆಯೆಂಬ ಭಾರವ ಪೊತ್ತು
ಬಳಲಿ ತಾಪತ್ರಯ ತಾಪದಿಂ ಬೆಂದೆನಗೆ
ನಖಚಂದ್ರಿಕೆ ಗಂಗಾ ಶೀತಕರದಿಂ ತಂಪಾದ
ಸಿರಿಕೃಷ್ಣನ ಚರಣ ನೆಳಲು ನೆಲೆಮನೆಯಾಯಿತು

**ತ್ರಿಪುಟತಾಳ**

ಕಾಮಿತಫಲವೀವ ಬಹು ಶಾಖೆಗಳಿಂ
ಕೋಮಲಕರ ಚರಣಯುಗಳ ಪಲ್ಲವದಿಂ
ಶ್ರೀನಾಭಿ ಕುಸುಮದಿಂದಾದ ಮಕರಂದದಿಂ
ಶ್ರೀಸತಿ ತನುಕಲ್ಪಲತಾ ವಿಲಾಸಗಳಿಂ
ಶ್ರೀ ಶುಕಮುಖ್ಯ ದ್ವಿಜಗಣದಿಂದ ಸೊಗಸಿಪ್ಪ
ಶ್ರೀಕೃಷ್ಣ ಕಲ್ಪತರುವಾ ಸಾರಿದೆವ್ವೆಯ

**ಅಟತಾಳ**

ಕರುಣಾಜಲದಿಂ ಚರಣಾಬ್ಜಗಳಿಂ
ವರನಾಭಿಸುಳಿಯಿಂ ಪರಮಹಂಸಕುಲದಿಂ
ಮೆರೆವ ಅಗಾಧ ಸಿರಿಕೃಷ್ಣ ಸರೋ–
ವರದಿ ಮುಳುಗಿ ಕಳೆದೆನೊ ಭವತಾಪವ

**ಆದಿತಾಳ**

ಜಿಜ್ಞಾಸುವಿಗೆ ಜ್ಞಾನ ಕಾರಣ
ಜ್ಞಾನಿಗೆ ಅಪರೋಕ್ಷ ಕಾರಣ
ಅಪರೋಕ್ಷಗೆ ಅಧಿಕಾನಂದ ಕಾರಣ
ಮುಕ್ತಗೆ ತಾನೆ ಫಲರೂಪ ಸಿರಿಕೃಷ್ಣನ ಪಾದಸೇವೆ
ಇದರ ತೂಕಕ್ಕೆ ಸಾಕೆ ಕೈವಲ್ಯ

**ಏಕತಾಳ**

ಪಾಪಾಟವಿಗೆ ದಾವಾನಲ
ಕಾಮಾನಲಕೆ ಕಾಲಾಂಬುದ
ಮೋಹಾಂಬುದಕೆ ಝುಂಝಾನಿಲ
ಕೋಪಾನಿಲಕೆ ಭುಜಂಗಮ
ಸಿರಿಕೃಷ್ಣನ ಗರುಡ

**ಜತೆ**

ಶ್ರೀಕೃಷ್ಣ ನಿನ್ನ ಪಾದ ನಖ ಚಂದ್ರಿಕೆಯಲ್ಲಿ

ಸಾಕೆನ್ನ ಚಿತ್ತ ಚಕೋರವಾದ ಧರ್ಮ

ಇದೇ ಹಾಡು, ತುಸು ಬದಲಾವಣೆಗಳೊಂದಿಗೆ ಪುರಂದರದಾಸರ ಹೆಸರಿನಲ್ಲಿಯೂ ಬಂದಿದೆ. ಮತ್ತು ಬಂಧದ ದೃಷ್ಟಿಯಿಂದ ಹೆಚ್ಚು ಔಚಿತ್ಯಪೂರ್ಣವಾಗಿದೆ. ಅಲ್ಲದೆ ಇಲ್ಲಿ ಬಂದ ೩ನೆಯ ನುಡಿಯ ಕೊನೆಯ ಸಾಲು–'ಮನ್ನಿಸಿ ಸಲಹಯ್ಯ ಪರಮ ಪುರುಷ ಕೃಷ್ಣ' ಎನ್ನುವಲ್ಲಿ ಮಾತ್ರೆಯ ಲೆಕ್ಕ ತಪ್ಪಿದೆ. ಆದರೆ ಪುರಂದರದಾಸರ ಹಾಡಿನ ಅದೇ ಕೊನೆಯ ಸಾಲು–'ಪನ್ನಗಶಯನ ಶ್ರೀಪುರಂದರ ವಿಠಲ' ಎಂಬುದು ಸಮಂಜಸವಾಗಿದೆ. ಹೀಗಾಗಿ ಈ ಹಾಡನ್ನು ಪುರಂದರದಾಸರೇ ರಚಿಸಿರಬಹುದೆಂದು ಊಹಿಸಲವಕಾಶವಿದೆ.

೧೧೭
**ಸುಳಾದಿ**
**ಧ್ರುವತಾಳ**

ಶ್ರೀದೇವಿಯ ಶ್ರೀಮಂತ ಸಿಂಧೂರಗಳಿಂ
ಅತಿ ಅತಿ ರಂಜಿತವಾದ
ಶ್ರೀದೇವಿಯ ಕಸ್ತೂರಿ ತಿಲಕದಿಂ
ಅತಿ ಅತಿ ವಾಸಿತವಾದ
ಶ್ರೀದೇವಿಯ ಕುಚಕುಂಭ ಕುಂಕುಮದಿಂ
ಅತಿ ಅತಿ ಶೋಭಿತವಾದ
ಶ್ರಿದೇವಿಯ ಕರಕಂಜ ಸುರೇಖೆಗಳಿಂ
ಅತಿ ಅತಿ ಅಂಕಿತವಾದ
ಶ್ರೀ ವನಜಭವಾದಿ ಹೃತ್ಸರೋವರದಿ
ಸರಸಿಜದಂತೆ ನೆಲೆಸಿಪ್ಪ
ಸನಕಾದಿಮುನಿ ಹೃದಯಾಂಬುಜದಿ
ಹಂಸೆಯಂತೆ ನಲಿಯುತಲಿಪ್ಪ
ಮನುಜೋತ್ತಮರ ಹೃದಯಾಂಬರದಿ
ಮಿಂಚಿನಂತೆ ಹೊಳೆ ಹೊಳೆವ
ಸಿರಿಕೃಷ್ಣನ ಚರಣಕಮಲ
ಶರಣ ಎನಗೆಂದೆಂದು ೧

### ಮಠ್ಯತಾಳ

ನಿಧಿಯ ಮೇಲೆ ಇದ್ದು ನಿಧಿಯನರಿಯದಂತೆ
ತನ್ನ ಕಂಠಮಣಿಯ ತಾ ಮರೆದಂತೆ
ಕಣ್ದೆರೆಯದ ಹಸುಳೆ ತಾಯನರಿಯದಂತೆ
ಎನ್ನಲ್ಲಿ ಹೊಂದಿಪ್ಪ ನಿನ್ನನರಿಯದಂತೆ
ನಿನ್ನ ತೋರಿದರೆನಗೆ ನಿನ್ನ ದಾಸರು ಸಿರಿಕೃಷ್ಣ ೨

### ರೂಪಕತಾಳ

ಜನನ ಮರಣ ಮಾರ್ಗದಲ್ಲಿ ತೊಳಲಿ ಬಳಲಿ ಸ್ವರ್ಗ
ನರಕಕ್ಕೇರಿ ಮಮತೆಯೆಂಬ ಭಾರವ ಪೊತ್ತು
ಬಳಲಿ ತಾಪತ್ರಯ ತಾಪದಿಂ ಬೆಂದೆನಗೆ
ನಖಚಂದ್ರಿಕೆ ಗಂಗಾ ಶೀತಕರದಿಂ ತಂಪಾದ
ಸಿರಿಕೃಷ್ಣನ ಚರಣನೆಳಲು ನೆಲೆಮನೆಯಾಯಿತು ೩

### ತ್ರಿಪುಟತಾಳ

ಕಾಮಿತಫಲವೀವ ಬಹು ಶಾಖೆಗಳಿಂ
ಕೋಮಲಕರ ಚರಣಯುಗಳ ಪಲ್ಲವದಿಂ
ಶ್ರೀನಾಭಿ ಕುಸುಮದಿಂದಾದ ಮಕರಂದದಿಂ
ಶ್ರೀಸತಿ ತನುಕಲ್ಪಲತಾ ವಿಲಾಸಗಳಿಂ

ಶ್ರೀ ಶುಕಮುಖ್ಯ ದ್ವಿಜಗಣದಿಂದ ಸೊಗಸಿಪ್ಪ
ಶ್ರೀಕೃಷ್ಣ ಕಲ್ಪತರುವಾ ಸಾರಿದೆವೈಯಳ

**ಅಟ್ಟತಾಳ**

ಕರುಣಾಜಲದಿಂ ಚರಣಾಬ್ಜಗಳಿಂ
ವರನಾಭಸುಳಿಯಿಂ ಪರಮಹಂಸ ಕುಲದಿಂ
ಮೆರೆವ ಅಗಾಧ ಸಿರಿಕೃಷ್ಣ ಸರೋ
ವರದಿ ಮುಳುಗಿ ಕಳೆದೆನೊ ಭವತಾಪವ ೫

**ಆದಿತಾಳ**

ಜಿಜ್ಞಾಸುವಿಗೆ ಜ್ಞಾನ ಕಾರಣ
ಜ್ಞಾನಿಗೆ ಅಪರೋಕ್ಷ ಕಾರಣ
ಅಪರೋಕ್ಷಗೆ ಅಧಿಕಾನಂದ ಕಾರಣ
ಮುಕ್ತಗೆ ತಾನೆ ಫಲರೂಪ
ಸಿರಿಕೃಷ್ಣನ ಪಾದಸೇವೆ
ಇದರ ತೂಕಕ್ಕೆ ಸಾಕೆ ಕೈವಲ್ಯ ೬

**ಏಕತಾಳ**

ಪಾಪಾಟವಿಗೆ ದಾವಾನಲ
ಕಾಮಾನಲಕೆ ಕಾಲಾಂಬುದ
ಮೋಹಾಂಬುದಕೆ ಝುಂಝಾನಿಲ
ಕೋಪಾನಿಲಕೆ ಭುಜಂಗಮ
ಸಿರಿಕೃಷ್ಣನ ಪದಸೇವೆ
ಭವಭುಜಂಗಕೆ ಗರುಡ ೭

**ಜತೆ**

ಶ್ರೀಕೃಷ್ಣ ನಿನ್ನಪಾದ ನಖ ಚಂದ್ರಿಕೆಯಲ್ಲಿ
ಸಾಕೆನ್ನ ಚಿತ್ತಚಕೋರವಾದ ಧರ್ಮ

೧೧೯

**ಸುಳಾದಿ**

**ಧ್ರುವತಾಳ**

ಹರಿಚರಿತೆಶ್ರವಣ ದುರಿತಕುಚ್ಚಾಟನ
ಹರಿನಾಮ ಕೀರ್ತನ ಭವರೋಗಕ್ಕೆ ಸಿದ್ಧೌಷಧ
ಹರಿಚರಣ ಸ್ಮರಣ ಮುಕ್ತಾಂಗನೆಗಾಕರುಷಣ
ಹರಿಪಾದ ಸೇವನ ಅನಂತಫಲ ಸಾಧನ

ಹರಿಪಾದ ಸೇವನ
ಇಂತೆಂಬುದೊಂದು ಪೆರ್ಮೆಗೆ ಹರಿಸೇವೆ ಫಲರೂಪ
ಶ್ರವಣ ಶುಭದ ಬೆಳಸು ಕೀರ್ತನೆ ಲೇಸಿನ ಹೆಚ್ಚಿಗೆ
ಸ್ಮರಣವಚ್ಚಸುಖದೊಟ್ಟಿಲುಯೆಂಬುದನು ಭವಸಿದ್ಧ
ಸಿರಿಕೃಷ್ಣನ ಪಾದಸೇವೆ ತಾನನ್ಯ ಶೇಷವೆ ೧

**ಮಠ್ಯತಾಳ**

ನೆನಹಿನ ಲೇಶಮಾತುರದಿಂದಾನು
ಘನಸುಖಮಯನಾಗಿಪ್ಪೆನಾವಾಗ
ತನುಭಾವವಳಿದು ಮೌನಿಗಳಂತೆ ಮೈಮರೆದು ಕು-
ಜನಾಚಾರವಳಿದು ನಿನ್ನನನವರತ
ನೆನೆವ ಭಕುತರ ಸುಖವಿನ್ನೆಂತೊ ಸಿರಿಕೃಷ್ಣ ೨

**ತ್ರಿಪುಟತಾಳ**

ಪುತ್ರಮಿತ್ರಕಳತ್ರವರ್ಗದಿಂದ
ದೇಹ ಕರ್ಮ ಜ್ಞಾನೇಂದ್ರಿಯಗಳಿಂದ
ಚಿತ್ತ ಬುದ್ಧಿ ಮನೋಹಮ್ಮುಗಳಿಂದ
ಪ್ರಾಣದಿಂದ ತನ್ಮಾತ್ರದಿಂದ
ನೀನೆ ಪ್ರಿಯನಾಗಿಹೆ ಕೃಷ್ಣ ನಿನ್ನ
ನೆನಹಿಗಿಂತ ಬೇರೆ ಪರಮಸುಕವುಂಟೆ ೩

**ಅಟ್ಟತಾಳ**

ಆನಿನ್ನು ಧನ್ಯನಲ್ಲ ಮತ್ತೇನುಕೊಂಡೆನ-
ಗೇನುಕಾರಣ ನಾನಾದುರಿತ ತನ್ನಿಂ-
ತಾನೆ ಬೆಂದುದಲ್ಲ ಶ್ರೀನಾಥ ಸಿರಿಕೃಷ್ಣನು
ತಾನೆ ನೆನಹಿಗೆ ಬಂದನಾಗಿ ೪

**ಆದಿತಾಳ**

ಮರೆಹೆ ಬಡತನ, ಮರೆಹೆ ಎಡರು
ಮರೆಹೆ ಅವಮಾನವು, ಮರೆಹೆ ನಷ್ಟ
ಮರೆಹೆ ಮೋಸ, ಮರೆಹೆ ಹೆಮ್ಮಾರಿ
ಮರೆಹೆ ಅಹಂಕಾರ, ಮರೆಹೆ ನರಕ
ಮರೆಹೆ ಶತ್ರು, ಮರೆಹೆ ಮೃತ್ಯು
ಮರೆಯದೆ ನಿನ್ನ ನೆನೆವಂತೆ ಮಾಡೊ ಸಿರಿಕೃಷ್ಣ ೫

**ಜತೆ**

ಶ್ರೀ ಕೃಷ್ಣ ನೆನೆಹಿನ ಸಾರಿ ಬೆಳೆವ ಸುಖ
ಬೇಕೆಂಬುವನೆ ಮುಕ್ತಿ ಸುಖವನಾಂತವನು

| | | |
|---|---|---|
| ದಾಸರ ಹೆಸರು | : | ವ್ಯಾಸರಾಯರು |
| ಜನ್ಮ ಸ್ಥಳ | : | ಬನ್ನೂರು (ಮೈಸೂರು ಜಿಲ್ಲೆ) |
| ತಂದೆ ಹೆಸರು | : | ರಾಮಾಚಾರ್ಯ |
| ತಾಯಿ ಹೆಸರು | : | ಸೀತಾಬಾು |
| ಕಾಲ | : | -೧೪೭೯- |
| ಅಂಕಿತನಾಮ | : | ಶ್ರೀಕೃಷ್ಣ |
| ಲಭ್ಯ ಕೀರ್ತನೆಗಳ ಸಂಖ್ಯೆ | : | ೧೮೦ |
| ಗುರುವಿನ ಹೆಸರು | : | ಬ್ರಹ್ಮಣ್ಯತೀರ್ಥರು, ಶ್ರೀಪಾದರಾಜರು |
| ಆಶ್ರಯ | : | ವಿಜಯನಗರದ ಅರಸರ ರಾಜಗುರುಗಳಾಗಿದ್ದವರು |
| ರೂಪ | : | ವ್ಯಾಸರಾಯರು |
| ಪೂರ್ವಾಶ್ರಮದ ಹೆಸರು | : | ಯತಿರಾಜ |
| ಮಕ್ಕಳು: ಅವರ ಹೆಸರು | : | ಮಾಹಿತಿ ಲಭ್ಯವಿಲ್ಲ |
| ಕೀರ್ತನೆಗಳಲ್ಲದೆ ಇತರ ಲಭ್ಯ ಕೃತಿಗಳು | : | ನ್ಯಾಯಾಮೃತ, ತಾತ್ಪರ್ಯ ಚಂದ್ರಿಕು, ತರ್ಕಪಾಂಡವ, (ಸಂಸ್ಕೃತಗ್ರಂಥಗಳು) |
| ಪತಿ: ಪತ್ನಿಯ ಹೆಸರು | : | ಮಾಹಿತಿ ಲಭ್ಯವಿಲ್ಲ |
| ಒಡಹುಟ್ಟಿದವರು | : | ಮಾಹಿತಿ ಲಭ್ಯವಿಲ್ಲ |
| ವೃತ್ತಿ | : | ಯತಿಗಳು |
| ಕಾಲವಾದ ಸ್ಥಳ ಮತ್ತು ದಿನ | : | ಹಂಪೆ - ಆನೆಗೊಂದಿ, ಪಾಲ್ಗುಣ ಬಹುಳ ಚೌತಿ |
| ವೃಂದಾವನ ಇರುವ ಸ್ಥಳ | : | ಆನೆಗೊಂದಿ (ಈಗಿನ ನವಬೃಂದಾವನ) |
| ಕೃತಿಯ ವೈಶಿಷ್ಟ್ಯ | : | ಸರ್ವಸಮರ್ಪಣ ಭಾವ, ಉದಾತ್ತ ಚಿಂತನೆ, ಸುಸ್ಪಷ್ಟ ಅಭಿವ್ಯಕ್ತಿ, ಅಲಂಕಾರಾದಿ ಗುಣಗಳು, |

| | | |
|---|---|---|
| | | ಸರಸರೂಪದ ಮಾರ್ಮಿಕತೆ – ಇವು ವ್ಯಾಸರಾಜರ ಕೃತಿಗಳು ವೈಶಿಷ್ಟ್ಯ. |
| ಜಿಲೆ | : | ಮಾಹಿತಿ ಲಭ್ಯವಿಲ್ಲ |
| ತಾಲುಕ | : | ಮಾಹಿತಿ ಲಭ್ಯವಿಲ್ಲ |
| ಗ್ರಾಮ | : | ಮಾಹಿತಿ ಲಭ್ಯವಿಲ್ಲ |
| ಇತರೆ | : | ಮಾಹಿತಿ ಲಭ್ಯವಿಲ |